# ಅಧ್ಯಾಯ ೧೨

## ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು

ಸ್ಥಳೀಯ ಸ್ವಯಮಾಡಳಿತ ಸಿದ್ಧಾಂತವು ಸುಮಾರು ೪೦೦೦ ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ. ಹರಪ್ಪ ಮುಂತಾದ ನಾಗರೀಕತೆಗಳ ಕಾಲದಿಂದಲೂ ಸುವ್ಯಸ್ಥಿತ ಪಟ್ಟಣಗಳ ಆಡಳಿತ ಕುರಿತು ಮಾಹಿತಿ ಲಭ್ಯವಿದೆ. ಇವುಗಳ ವ್ಯವಸ್ಥೆಯು ಪೌರಾಡಳಿತ ಮಾದರಿಯ ಸ್ವಯಮಾಡಳಿತ ಸಂಸ್ಥೆಗಳಿಂದ ನಡೆಯುತ್ತಿದ್ದ ಬಗ್ಗೆಯೂ ಆಧುನಿಕ ಸಂಶೋಧನೆಗಳು ಬೆಳಕು ಚೆಲ್ಲಿವೆ. ಪ್ರಾಚೀನ ಹಾಗೂ ಮಧ್ಯ ಯುಗಗಳಲ್ಲಿ ರಾಜ್ಯಾಡಳಿತವು ಸರ್ವಾಧಿಕಾರಗಳನ್ನೂ ಹೊಂದಿದ್ದ ಪ್ರಬಲ ರಾಜಮನೆತನದ ಕರ್ತವ್ಯವಾಗಿತ್ತು. ಅಂತಹ ಬಲಿಷ್ಠ ರಾಜರೂ ಸ್ಥಾನಿಕ ಸ್ವಯಮಾಡಳಿತಕ್ಕೆ ಸಾಕಷ್ಟು ಮನ್ನಣೆ ನೀಡಿದ್ದರು. ಇದು ಸ್ಥಳೀಯ ನಿರ್ದಿಷ್ಟ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿವಾರಿಸಲು ಅವರೇ ಕಂಡುಕೊಂಡ ಪರಿಹಾರೋಪಾಯವಾಗಿತ್ತು. ಹೀಗೆ ಬಹು ಪ್ರಾಚೀನ ಮೂಲ ಹೊಂದಿರುವ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯು ಅಂದಿನ ಜನತೆಯ ಜೀವನದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ನಾಗರಿಕ ವ್ಯವಸ್ಥೆಯಲ್ಲಿ ಮಹತ್ತರ ಸುಧಾರಣೆ ಹೊಂದಲು ಸಹಾಯಕವಾಗಿತ್ತು. ಜನಜೀವನದ ವಿವಿಧ ಸ್ತರಗಳಲ್ಲಿ ವ್ಯಾಪಕ ಅಭಿವೃದ್ಧಿಗೆ ಕಾರಣವಾದ ಈ ವ್ಯವಸ್ಥೆಗೆ ಅಂದಿನ ನಿರಂಕುಶ ರಾಜ್ಯಾಡಳಿತವೂ ವ್ಯಾಪಕ ಮನ್ನಣೆ ನೀಡುವುದರೊಂದಿಗೆ ಆರ್ಥಿಕ ಸ್ವಾಯತ್ತತೆಯನ್ನೂ ನೀಡಿತ್ತು. ಇದಕ್ಕೆ ನಿದರ್ಶನವಾಗಿ ರಾಜರು ನೀಡುತ್ತಿದ್ದ ದಾನ, ದತ್ತಿಗಳನ್ನು ಶಾಸನಗಳಿಂದ ಉಲ್ಲೇಖಿಸಬಹುದು. ಹೀಗೆ ಸ್ಥಳೀಯ ಸ್ವಯಂ ಆಡಳಿತ – ಪಂಚಾಯಿತಿ ವ್ಯವಸ್ಥೆ ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಪುರಾಣಗಳ ಕಾಲದಲ್ಲಿ ಮುಂದುವರೆಯಿತು. ನಂತರ ಅಶೋಕ, ಚಂದ್ರಗುಪ್ತ, ಅಕ್ಬರ, ಕೃಷ್ಣದೇವರಾಯ, ಶಿವಾಜಿ ಮೊದಲಾದ ರಾಜರು ಕಾಲಾನುಕ್ರಮದಲ್ಲಿ ಈ ವ್ಯವಸ್ಥೆಯನ್ನು ಪೋಷಿಸಿದರು. ಪಂಚಾಯಿತಿ ಎಂಬ ಪದವು ಸಂಸ್ಕೃತದ "ಪಂಚಾಯತನ" (ಗ್ರಾಮದಲ್ಲಿ ವಾಸವಾಗಿರುವ ೫ ಮಂದಿ ಪ್ರಮುಖರ ಸಂಘಟನೆ) ಎಂಬ ಪದದಿಂದ ಆವಿರ್ಭವಿಸಿದೆ. ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಪ್ರಸ್ತುತ ಪರಿಸ್ಥಿತಿಯ ಅನಿವಾರ್ಯ ಅವಶ್ಯಕತೆಯಾಗಿದೆ. ಪ್ರಜೆಗಳಿಗಾಗಿ ಪ್ರಜೆಗಳೇ ನಡೆಸುವ ಜನಾಡಳಿತವು ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯ ತತ್ವವಾಗಿದ್ದು ಈ ಸಿದ್ಧಾಂತವೇ ಪ್ರಜಾಪ್ರಭುತ್ವದ ಮೂಲ ಧ್ಯೇಯವಾಗಿದೆ.

ಈ ಪ್ರಜಾರಾಜ್ಯ ಸಿದ್ಧಾಂತವು ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಆಡಳಿತದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಪಂಚಾಯತಿ ವ್ಯವಸ್ಥೆಯಲ್ಲಿ ತನ್ನ ಇರುವನ್ನು ಪ್ರಕಟಪಡಿಸಿದೆ. ದಕ್ಷಿಣಕನ್ನಡ ಜಿಲ್ಲೆಯನ್ನೊಳಗೊಂಡ ಪ್ರಾಂತ್ಯವೂ ಸೇರಿದಂತೆ ಎಲ್ಲ ಪ್ರಾಂತ್ಯಗಳಲ್ಲಿ ಸ್ವಯಮಾಡಳಿತ ವ್ಯವಸ್ಥೆಯು ಚಾಲ್ತಿಯಲ್ಲಿದ್ದುದು ಇತಿಹಾಸದಿಂದ ವೇದ್ಯವಾಗುತ್ತದೆ. ಈ ಸಂಸ್ಥೆಗಳ ರಚನೆ, ಕಾರ್ಯವಿಧಾನ ಮುಂತಾದವುಗಳಲ್ಲಿ ಕಾಲಾಂತರದಲ್ಲಿ ಬದಲಾವಣೆಗಳಿದ್ದಾಗ್ಯೂ, ಈ ವ್ಯವಸ್ಥೆಯು ಪ್ರಾಚೀನ ಕಾಲದಿಂದ ವಿಜಯನಗರ ಸಾಮ್ರಾಜ್ಯದ ಪತನದವರೆವಿಗೂ

ಉನ್ನತಿಯ ಗರಿಮೆ ಹೊಂದಿತ್ತು. ನಂತರದ ಮುಸ್ಲಿಂ ಸಾಮ್ರಾಜ್ಯ, ಮೈಸೂರು ಸಾಮ್ರಾಜ್ಯದ ಕಾಲಗಳಲ್ಲಿ ಮುಂದುವರೆಯಿತು. ಹೀಗೆ ಭರತಖಂಡದ ಪ್ರತಿ ಗ್ರಾಮವೂ ಒಂದು ಸಣ್ಣ ಗಣರಾಜ್ಯದಂತೆ ಸ್ವಾಯತ್ತ ಆಡಳಿತ ವ್ಯವಸ್ಥೆ ಹೊಂದಿದ್ದಿತು. ಬ್ರಿಟಿಷರ ಆಡಳಿತದ ಅವಧಿಯಲ್ಲಿ ೧೮೭೦ರಲ್ಲಿ ಲಾರ್ಡ್ ಮೆಯೋ ಅವರ ಆಡಳಿತಾವಧಿಯಲ್ಲಿ ಮೊದಲ ಬಾರಿಗೆ ಇಂದು ರೂಢಿಯಲ್ಲಿರುವ ಆಧುನಿಕ ಪಂಚಾಯತ್ ರಾಜ್ ಪರಿಕಲ್ಪನೆಯ ಬೀಜಾಂಕುರವಾಯಿತು. ೧೮೮೨ರಲ್ಲಿ ಲಾರ್ಡ್ ರಿಪ್ಪನ್ ಕಾಲದಲ್ಲಿ ಕಾನೂನುಬದ್ಧ ಜಿಲ್ಲಾ ಬೋರ್ಡ್‌ಗಳು ಜಾರಿಯಲ್ಲಿ ಬಂದವು. ೧೮೬೨ರಷ್ಟು ಹಿಂದೆಯೇ ಮೈಸೂರು, ಬೆಂಗಳೂರು ನಗರಗಳಲ್ಲಿ ಪೌರ ಸಮಿತಿಗಳ ರಚನೆಯಾಗಿತ್ತು. ಮುಂದೆ ೧೮೬೪ರ ಹೊತ್ತಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಗೊಂಡವು. ೧೮೮೨ರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಸುಧಾರಣೆ ಬಗೆಗಿನ ಗೊತ್ತುವಳಿ ಹಾಗೂ ದಿವಾನ್ ರಂಗಾಚಾರ್ಲು ಮತ್ತು ಸರ್ ಕೆ. ಶೇಷಾದ್ರಿ ಅಯ್ಯರ್ ಅವರುಗಳ ಪ್ರಗತಿಪರ ವಿಚಾರಗಳನ್ನು ಆಧರಿಸಿ ೧೯೦೩ರಲ್ಲಿ ಪ್ರಕಟಿಸಿದ 'ದಿ ಮೈಸೂರು ರೆಗ್ಯುಲೇಶನ್ ೨'ನ್ನು ೧೯೦೩ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರೂಪುಗೊಂಡವು. ಆದರೆ ಚುನಾಯಿತ ಸದಸ್ಯರ ಕೊರತೆ ಹಾಗೂ ಆರ್ಥಿಕ ಸಂಕಷ್ಟಗಳಿಂದ ಸ್ಥಳೀಯ ಮಂಡಳಿಗಳಲ್ಲಿ ಸಮರ್ಪಕ ಕಾರ್ಯಾಚರಣೆ ಸಾಧ್ಯವಿಲ್ಲದೆ ಉದ್ದೇಶ ವಿಫಲವಾಯಿತು. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ನಾಡಿನ ಪುರೋಭಿವೃದ್ಧಿಗೆ ಪಂಚಾಯತಿ ಸಂಸ್ಥೆಗಳು ಮಹತ್ತರ ಪಾತ್ರವಹಿಸುವ ಅನಿವಾರ್ಯತೆ ಹಿಂದಿಗಿಂತಲೂ ಹೆಚ್ಚಾಗಿದೆ. ೧೯೩೩ ಮತ್ತು ೧೯೫೧ರ ಮೈಸೂರು ಪುರಸಭೆ ಅಧಿನಿಯಮ, ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಅಧಿನಿಯಮ ಹಾಗೂ ೧೯೭೭ರ ಅಶೋಕ ಮೆಹ್ತಾ ಸಮಿತಿ ವರದಿಯಂತೆ ೧೯೮೩ರಲ್ಲಿ ಪಂಚಾಯತ್ ರಾಜ್ ಕಾನೂನು, ನಂತರ ೧೯೯೩ರಲ್ಲಿ ವ್ಯಾಪಕ ಬದಲಾವಣೆಗಳೊಂದಿಗೆ ಜಾರಿಯಾದ ಕರ್ನಾಟಕ ಪಂಚಾಯಿತಿ ರಾಜ್ ಕಾಯ್ದೆಗಳ ಮೂಲಕ ಸರ್ಕಾರವು ಈ ವ್ಯವಸ್ಥೆಗೆ ಹೆಚ್ಚಿನ ಸ್ವಾಯತ್ತತೆ ನೀಡಿದೆ.

## ಪ್ರಾಚೀನ ಮತ್ತು ಮಧ್ಯಕಾಲೀನ ವ್ಯವಸ್ಥೆ

ಕನ್ನಡನಾಡು ಪ್ರಾಚೀನ ಕಾಲದಿಂದಲೂ ಸ್ಥಳೀಯ ಸ್ವಯಮಾಡಳಿತ ಕಲ್ಪನೆಗಳಿಗನುಗುಣವಾದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಗುರಿಕಾರ ಹಾಗೂ ಜಾತಿ ಗುರಿಕಾರರೆಂಬ ಮುಂದಾಳುಗಳ ನೇತೃತ್ವದಲ್ಲಿ ಗ್ರಾಮಾಡಳಿತ ನಡೆಯುತ್ತಿತ್ತು. ಜಾತಿಗಳಲ್ಲಿನ ವಿವಾಹ ಹಾಗೂ ಇತರ ಸಮಸ್ಯೆಗಳನ್ನು ಜಾತಿ ಗುರಿಕಾರರು ಚರ್ಚಿಸಿ ತೀರ್ಮಾನಿಸುವ ಮೂಲಕ ಪರಿಹರಿಸುತ್ತಿದ್ದರು. ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚಿಸಿ ತೀರ್ಮಾನಿಸುವ ಜವಾಬ್ದಾರಿ ಗ್ರಾಮಗುರಿಕಾರರದಾಗಿತ್ತು. ದೈವಾರಾಧನೆ ಅಥವಾ ಭೂತಾಳದ ಹೊತ್ತಿನಲ್ಲಿ ಎಲ್ಲಾ ಸಮಸ್ಯೆಗಳನ್ನು ಚರ್ಚಿಸಿ ಅಂತಿಮ ತೀರ್ಮಾನವನ್ನು ದೈವ ಹೇಳುವಂತಹ ವ್ಯವಸ್ಥೆ ಇತ್ತು. ಹಲವೆಡೆ ಈ ವಿಧಾನ ಈಗಲೂ ಚಾಲ್ತಿಯಲ್ಲಿದೆ. ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಊರು ಅತ್ಯಂತ ಚಿಕ್ಕ ಆಡಳಿತ ಘಟಕವಾಗಿತ್ತು. ಅಲ್ಲಿನ ಗ್ರಾಮಾಡಳಿತ ಘಟಕಗಳನ್ನು ಸಂಖ್ಯೆಗಳಿಂದ ಸೂಚಿಸಲಾಗುತ್ತಿತ್ತು. ಉದಾ: ಶಿವಳ್ಳಿಯ ಸಾಸಿರಬತ್ತು (೧೦೦೦ ಮಂದಿಯ ಸಭೆ) ಕೋಟದ ಸಾಸಿರದವರು, ಶಿವಪುರದ ನೂರ್ಬರು (೧೦೦ ಮಂದಿ) ಮುಂತಾದವು. ಗ್ರಾಮಸಭೆಯ ನಿರ್ಣಯಗಳನ್ನು ಜಾರಿಗೊಳಿಸಲು ಬ್ರಾಹ್ಮಣರೇ ಬಹುಸಂಖ್ಯಾತವಾಗಿದ್ದ ಜಗತ್ತು ಎಂಬ ಮಂಡಳಿಗಳಿದ್ದವು. ಬಾರ್ಕೂರಿನ ೧೪೩೧ರ ಮುಡುಕೇರಿ ಶಾಸನದಲ್ಲಿ ಕಾನೂನು ಉಲ್ಲಂಘನೆಯ ವಿಚಾರಣೆ ಹಾಗೂ ಶಿಕ್ಷೆ ನೀಡಲು 'ಜಗತ್ತು' ಎಂಬ ಮಂಡಳಿಗಿದ್ದ ಅಧಿಕಾರದ ಬಗ್ಗೆ ಉಲ್ಲೇಖವಿದೆ. ಅಂದಿನ ಮುಖ್ಯ ಪಟ್ಟಣಗಳಾದ ಮಂಗಳೂರು, ಬಾರ್ಕೂರು, ಬಸ್ರೂರು, ಮೂಡಬಿದ್ರೆಗಳಲ್ಲಿ ಪೌರಾಡಳಿತವು ಅಸ್ತಿತ್ವದಲ್ಲಿದ್ದುದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಪಟ್ಟಣಗಳನ್ನು ಹಲವು ಕೇರಿ (ಬೀದಿ)ಗಳನ್ನಾಗಿ ವಿಭಾಗಿಸಲಾಗುತ್ತಿತ್ತು. ಪ್ರತಿ ಕೇರಿಗೆ ಹಲರು ಅಥವಾ ಶೆಟ್ಟಿಕಾರರೆಂಬ ಜನಪ್ರತಿನಿಧಿಗಳು ಆಯ್ಕೆಗೊಳ್ಳುತ್ತಿದ್ದರು. ಉದಾ: ಹತ್ತು ಕೇರಿಯ ಹಲರು, ೧೬ ಶೆಟ್ಟಿಕಾರರು, ಹಂಜಮಾನದ ಹಲರು, ಸಮಸ್ತ ಹಲರು ಮುಂತಾದವರಿದ್ದರು. ಜನಪ್ರತಿನಿಧಿಗಳು ನಗರಯೋಜನೆ, ದೇವಾಲಯ ಉಸ್ತುವಾರಿ, ಜೀರ್ಣೋದ್ಧಾರ, ನೀರಿನ ಮೂಲಗಳ ಉಸ್ತುವಾರಿ, ನಗರ ಸ್ವಚ್ಛತೆ, ವ್ಯಾಪಾರ ವಹಿವಾಟು ಮುಂತಾದವುಗಳ ಉಸ್ತುವಾರಿ ನಡೆಸುತ್ತಿದ್ದರು. ರಾಜರು ಒಂದು ಗ್ರಾಮದ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳುವುದಕ್ಕೆ ಮೊದಲು ಆ ಗ್ರಾಮದ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಅನುಮೋದನೆ ಪಡೆಯುತ್ತಿದ್ದರು. ಉಡುಪಿಯ ಪೆರಡೂರಿನ ೧೪೩೧ನೇ ಇಸವಿಯ ಶಾಸನದಲ್ಲಿ ಬಾರ್ಕೂರಿನ ಪ್ರಾಂತ್ಯಾಧಿಕಾರಿಯು ಶಂಕರಭಟ್ಟನೆಂಬ ಕವಿಗೆ ನೀಡಿದ ಭೂದಾನಕ್ಕೆ ಆ ಗ್ರಾಮಸಭೆಯ ಅನುಮೋದನೆ ಪಡೆದ ಬಗ್ಗೆ ಉಲ್ಲೇಖಿಸಲಾಗಿದೆ. ೧೪೨೫ರ ಕುಂದಾಪುರ ಶಾಸನದಲ್ಲಿ ಕುಂದೇಶ್ವರ ದೇವಾಲಯಕ್ಕೆ ಭೂಮಿ ದತ್ತಿ ನೀಡುವ ಮುನ್ನ ಪ್ರಾಂತಾಧಿಕಾರಿಯು ಗ್ರಾಮಸಭೆಯ ಮುಕ್ಕಲಟ್ಟಿಗಳೊಂದಿಗೆ ಚರ್ಚಿಸುವ ಬಗ್ಗೆ ಉಲ್ಲೇಖವಿದೆ. ಹೀಗೆ ಗ್ರಾಮಸಭೆಗಳ ಹಕ್ಕು ಬಾಧ್ಯತೆಯನ್ನು ರಾಜಪ್ರಭುತ್ವವು

ಮಾನ್ಯ ಮಾಡುತ್ತಿದ್ದಿತು.  ಇಂತಹ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯು ೧೭ನೇ ಶತಮಾನದವರೆಗೂ ಜಿಲ್ಲೆಯ ಪ್ರತಿ ಗ್ರಾಮದಲ್ಲಿಯೂ ಕಂಡುಬರುತ್ತಿತ್ತು.

## ಆಧುನಿಕ ಕಾಲದ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯ ಪ್ರಾರಂಭಿಕ ಕಾಯ್ದೆಗಳು

**೧೮೬೫ರ ೧೦ನೇ ಮದ್ರಾಸು ಪಟ್ಟಣ ಅಭಿವೃದ್ಧಿ ಕಾಯ್ದೆ:** ದಕ್ಷಿಣ ಕನ್ನಡ ಜಿಲ್ಲೆಯು ೧೯೫೬ರವರೆಗೂ ಬಹಳ ವರ್ಷಗಳ ಕಾಲ ಮದ್ರಾಸ್ ಪ್ರಾಂತ್ಯಾಡಳಿತಕ್ಕೆ ಒಳಪಟ್ಟಿತ್ತು. ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯು ಪ್ರಪ್ರಥಮವಾಗಿ ೧೮೬೫ರ ಪೌರಾಭಿವೃದ್ಧಿ ಕಾಯ್ದೆಯಂತೆ ಮೊದಲಾಯಿತು. ಈ ಕಾಯ್ದೆಯಂತೆ ಪುರಸಭೆಗಳೂ ಮತ್ತು ೧೮೭೧ರಲ್ಲಿ ಜಾರಿಯಾದ ನಾಲ್ಕನೇ (IV) ಸ್ಥಳೀಯ ನಿಧಿ ಕಾಯ್ದೆಯಂತೆ ಸ್ಥಳೀಯ ನಿಧಿ ಮಂಡಳಿ (ಲೋಕಲ್ ಬೋರ್ಡ್)ಗಳು ಪ್ರಾರಂಭವಾದವು. ಕ್ರಮೇಣ ಈ ಸ್ಥಳೀಯ ವ್ಯವಸ್ಥೆಯು ತಾಲ್ಲೂಕು ಮಂಡಳಿ ಮತ್ತು ಜಿಲ್ಲಾ ಮಂಡಳಿಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ೧೮೮೪ರ ಸ್ಥಳೀಯ ಮಂಡಳಿಗಳ ಅಧಿನಿಯಮವು ಹಿಂದಿನ ೧೮೭೧ರ ಸ್ಥಳೀಯ ನಿಧಿ ಕಾಯ್ದೆಯನ್ನು ರದ್ದುಗೊಳಿಸಿತು. ತತ್ಪರಿಣಾಮವಾಗಿ ಹೊಸ ಸ್ಥಳೀಯ ಸಂಸ್ಥೆಗಳು ಪ್ರಾರಂಭಗೊಂಡವು.  ಈ ಕಾಯ್ದೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಂಪೂರ್ಣ ನಿಯಂತ್ರಣವು ಸರ್ಕಾರದ ವಶವಾಯಿತು.  ಈ ಹಿಂದಿನ ಕಂದಾಯ ಮಂಡಳಿಗಳು ವಿಸರ್ಜಿಸಲ್ಪಟ್ಟವು.  ನಂತರ ಪ್ರತಿ ಕಂದಾಯ ಜಿಲ್ಲೆಗೊಂದರಂತೆ ಜಿಲ್ಲಾ ಮಂಡಳಿಗಳು ಅಸ್ತಿತ್ವಕ್ಕೆ ಬಂದವು.

## ಜಿಲ್ಲಾ ಮಂಡಳಿಗಳು

ಈ ಮಂಡಳಿಗಳಲ್ಲಿ ಒಬ್ಬ ಅಧ್ಯಕ್ಷ ಹಾಗೂ ಕನಿಷ್ಠ ೨೪ ಸದಸ್ಯರು ಇರುತ್ತಿದ್ದರು.  ಸದಸ್ಯರು ಸಾಮಾನ್ಯವಾಗಿ ಸರ್ಕಾರದಿಂದ ನೇಮಿಸಲ್ಪಡುತ್ತಿದ್ದರು. ಕ್ರಮೇಣ ಸದಸ್ಯರಲ್ಲಿ ಕೆಲವರು ಮಾತ್ರ ಸರ್ಕಾರದಿಂದ ನೇಮಕವಾಗುತ್ತಿದ್ದರು ಮತ್ತು ಹೊಸದಾಗಿ ರಚಿತವಾಗಿದ್ದ ತಾಲೂಕು ಮಂಡಳಿಗಳ ಸದಸ್ಯರು ತಮ್ಮಲ್ಲೇ ಕೆಲವರನ್ನು ಜಿಲ್ಲಾ ಮಂಡಳಿಗಳ ಸದಸ್ಯರನ್ನಾಗಿ ಆರಿಸಲು ಅಧಿಕಾರ ಹೊಂದಿದ್ದರು.  ಹೀಗೆ ಆಯ್ಕೆಯಾದವರು ಮೂರು ವರ್ಷಗಳ ಅಧಿಕಾರಾವಧಿ ಹೊಂದಿರುತ್ತಿದ್ದರು. ಕ್ರಮೇಣ ಸರ್ಕಾರಿ ಸದಸ್ಯರ ಸಂಖ್ಯೆಯನ್ನು ಶೇ. ೨೫ಕ್ಕೆ ಇಳಿಸಲಾಯಿತು. ಹಿಂದಿನ ಕಾಯ್ದೆಯ ಪ್ರಕಾರ ಸ್ಥಳೀಯ ಸಂಸ್ಥೆಗಳು ತೆರಿಗೆ ವಿಧಿಸುವ ಅಧಿಕಾರ ಪಡೆದಿರಲಿಲ್ಲ. ಸರ್ಕಾರವೇ ವಿಧಿಸಿ ಸಂಗ್ರಹಿಸುತ್ತಿದ್ದ ತೆರಿಗೆ ನಿಧಿಯನ್ನು ನಿಯಂತ್ರಿಸುವ ಅಧಿಕಾರವನ್ನಷ್ಟೆ ಈ ಸಂಸ್ಥೆಗಳು ಪಡೆದಿರುತ್ತಿದ್ದವು.  ೧೮೮೪ರ ಹೊಸ ಕಾಯ್ದೆಯಡಿಯಲ್ಲಿ, ಕಾಯ್ದೆಯ ಮಾನ್ಯತೆ ಪಡೆದಿದ್ದ ಯಾವುದೇ ತೆರಿಗೆಗಳನ್ನು ಸರ್ಕಾರದ ಅನುಮೋದನೆಯೊಂದಿಗೆ ವಿಧಿಸಿ ಸಂಗ್ರಹಿಸುವ ಅಧಿಕಾರವನ್ನು ಸಂಸ್ಥೆಗಳಿಗೆ ನೀಡಲಾಯಿತು ಮತ್ತು ಸರ್ಕಾರದ ನಿರ್ದೇಶನವಿದ್ದಲ್ಲಿ ಜಿಲ್ಲಾ ಮಂಡಳಿಗಳ ಸದಸ್ಯರೇ ತಮ್ಮಲ್ಲೊಬ್ಬನನ್ನು ಅಧ್ಯಕ್ಷನನ್ನಾಗಿ ಆರಿಸಬಲ್ಲವರಾಗಿದ್ದರು.

## ತಾಲೂಕು ಮಂಡಳಿಗಳು

೧೮೮೪ರ ಕಾಯ್ದೆಯಂತೆ ಪ್ರತಿ ತಾಲೂಕಿಗೊಂದರಂತೆ, ಅಥವಾ ಕೆಲ ಚಿಕ್ಕ ತಾಲೂಕುಗಳ ಗುಂಪಿಗೊಂದರಂತೆ ತಾಲೂಕು ಮಂಡಳಿಗಳು ರಚಿತವಾದವು. ಇಂತಹ ಪ್ರತಿ ಮಂಡಳಿಗಳು ಒಬ್ಬ ಅಧ್ಯಕ್ಷ ಹಾಗೂ ಕನಿಷ್ಠ ೧೨ ಮಂದಿ ಸದಸ್ಯರನ್ನು ಹೊಂದಿರುತ್ತಿದ್ದವು.  ಮಂಡಳಿಗಳ ೧/೩ ಭಾಗ ಸದಸ್ಯರು ಸರ್ಕಾರಿ ಅಧಿಕಾರಿಗಳಾಗಿರುತ್ತಿದ್ದರು. ಇನ್ನುಳಿದವರು ಗ್ರಾಮಸಭೆಗಳಿಂದ ಅಥವಾ ತಾಲೂಕಿನಲ್ಲಿ ತೆರಿಗೆ ಪಾವತಿ ಮಾಡುವಂತಹ ಸಾರ್ವಜನಿಕರಿಂದ ಆಯ್ಕೆಯಾಗುತ್ತಿದ್ದರು. ಎಲ್ಲ ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳಾಗಿದ್ದಿತು. ಉಪವಿಭಾಗೀಯ ಕಂದಾಯಾಧಿಕಾರಿಯು ಪದನಿಮಿತ್ತ ಅಧ್ಯಕ್ಷರಾಗಿರುತ್ತಿದ್ದ ಈ ಮಂಡಳಿಗಳ ಅಧಿಕಾರ ವ್ಯಾಪ್ತಿಯು ಉಪವಿಭಾಗಾಧಿಕಾರಿಯ ವ್ಯಾಪ್ತಿಯಷ್ಟಿರುತ್ತಿತ್ತು. ಈ ಮಂಡಳಿಗಳಿಗೆ ದತ್ತವಾದ ನಿಧಿಯೆಂದರೆ, ಸ್ಥಳೀಯ ಮಾರುಕಟ್ಟೆ ಲೈಸೆನ್ಸ್ ಶುಲ್ಕ ಮತ್ತು ಜಿಲ್ಲಾ ಮಂಡಳಿ ಆ ತಾಲೂಕಿನ ವ್ಯಾಪ್ತಿಯಲ್ಲಿ ಸಂಗ್ರಹಿಸಿ ನೀಡುತ್ತಿದ್ದ ತೆರಿಗೆಯ ಶೇ.೫೦ ಭಾಗದ ಮೊತ್ತ ಇದಲ್ಲದೆ ಜಿಲ್ಲಾ ಹಾಗೂ ತಾಲೂಕು ಬೋರ್ಡ್‌ಗಳು ಕೆಳಕಂಡಂತೆ ತೆರಿಗೆ ವಸೂಲಿ ಮಾಡುತ್ತಿದ್ದವು.

೧) ವ್ಯಕ್ತಿಯು ಹೊಂದಿರುವ ಜಮೀನಿನ ವಾರ್ಷಿಕ ಬಾಡಿಗೆ ಮೊತ್ತದ ಮೇಲೆ ಕೆಲವು ಜಿಲ್ಲೆಗಳಲ್ಲಿ ರೂಪಾಯಿಯ ಎರಡಾಣೆಯಷ್ಟು ತೆರಿಗೆ ವಿಧಿಸಿದರೆ ಬೇರೆ ಕೆಲವು ಜಿಲ್ಲೆಗಳಲ್ಲಿ ರೂಪಾಯಿಯ ಒಂದಾಣೆಯಷ್ಟು ತೆರಿಗೆ ವಿಧಿಸಲಾಗುತ್ತಿತ್ತು.

೨) ಜಮೀನಿನ ವಾರ್ಷಿಕ ಬಾಡಿಗೆ ಮೊತ್ತದ ಮೇಲೆ ವಿಧಿಸಲಾಗುತ್ತಿದ್ದ ರೈಲ್ವೆ ತೆರಿಗೆಯಲ್ಲಿ ರೂಪಾಯಿಯ ಮೂರಾಣೆ ಮೊತ್ತದ ತೆರಿಗೆ.

೩) ಕೈಗಾಡಿಗಳ–ಗಾಡಿಗಳ ನಿಲ್ದಾಣದ ಬಳಕೆ ಶುಲ್ಕ ಮತ್ತು ಕಸಾಯಿಖಾನೆಗಳ ಮೇಲಿನ ತೆರಿಗೆ.

ಜಿಲ್ಲಾ ಮಂಡಳಿಯ ಆಡಳಿತವಿದ್ದ ೧೯೬೫ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ೫ ತಾಲೂಕುಗಳೆಂದರೆ ಕುಂದಾಪುರ, ಕಾಸರಗೋಡು, ಮಂಗಳೂರು, ಉಡುಪಿ ಮತ್ತು ಉಪ್ಪಿನಂಗಡಿ. ಇವು ತಾಲೂಕು ಮಂಡಳಿಗಳ ಆಡಳಿತದಲ್ಲಿದ್ದವು. ಜಿಲ್ಲೆಯ ಏಕೈಕ ಪುರಸಭೆ ಅಂದಿನ ಮಂಗಳೂರು ಪಟ್ಟಣದಲ್ಲಿತ್ತು.

ತಾಲೂಕು ಮತ್ತು ಜಿಲ್ಲಾ ಬೋರ್ಡ್‌ಗಳ ಕರ್ತವ್ಯಗಳಲ್ಲಿ ರಸ್ತೆ ಅಭಿವೃದ್ಧಿ, ಸೇತುವೆ ರಚನೆ, ಸಾರಿಗೆ ಮತ್ತು ಸಂಪರ್ಕ, ಆಸ್ಪತ್ರೆ ಮತ್ತು ವೈದ್ಯಕೀಯ ಸೌಲಭ್ಯ, ಶೈಕ್ಷಣಿಕ ವ್ಯವಸ್ಥೆಯ ಉನ್ನತೀಕರಣಕ್ಕಾಗಿ ಶಾಲಾ ಕಟ್ಟಡ ನಿರ್ಮಾಣ, ಶಿಕ್ಷಕರ ತರಬೇತಿ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಬರಪರಿಹಾರ ಕಾಮಗಾರಿ ಯೋಜನೆಗಳು ಮತ್ತು ಇನ್ನಿತರ ಸ್ಥಳೀಯ ಜನೋಪಯೋಗಿ ಕಾರ್ಯಕ್ರಮಗಳು ಮುಖ್ಯವಾದವುಗಳು.

**ಪಂಚಾಯಿತಿ ಮಂಡಳಿಗಳು**

ಪ್ರತಿ ಗ್ರಾಮ ಅಥವಾ ಕೆಲ ಗ್ರಾಮಗಳ ಗುಂಪಿಗೆ ಒಂದು ಪಂಚಾಯಿತಿ ಮಂಡಳಿಯಂತೆ ರಚಿತವಾದ ಈ ಸಂಸ್ಥೆಗಳಲ್ಲಿ ಕನಿಷ್ಠ ಐದು ಜನ ಸದಸ್ಯರು ಇರುತ್ತಿದ್ದರು. ಈ ಗ್ರಾಮಪಂಚಾಯಿತಿಗಳಲ್ಲಿ ಆ ಗ್ರಾಮಗಳ ಪ್ರಮುಖರು ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ಅವರಲ್ಲೊಬ್ಬರನ್ನು ಅಧ್ಯಕ್ಷನನ್ನಾಗಿ ನೇಮಕಗೊಳಿಸಲಾಗುತ್ತಿತ್ತು. ಪದನಿಮಿತ್ತ ಸದಸ್ಯರಲ್ಲದೆ, ಸರ್ಕಾರಿ ನೌಕರು/ಅಧಿಕಾರಿಗಳು ಸಹ ಸದಸ್ಯ ಮಂಡಳಿಯಲ್ಲಿರುತ್ತಿದ್ದರು. ಸಾರ್ವಜನಿಕರಿಂದ ಆರಿಸಲ್ಪಟ್ಟ ಸದಸ್ಯರನ್ನೂ ಸಹ ಮಂಡಳಿಗಳು ಒಳಗೊಂಡಿದ್ದವು. ಈ ಮಂಡಳಿಗಳು ಮನೆಗಳ ವರ್ಗೀಕರಣದ ಆಧಾರದಲ್ಲಿ ವಿಧಿಸುತ್ತಿದ್ದ ಮನೆಗಂದಾಯವು ನಾಲ್ಕು ಆಣೆಗಳಿಂದ ಐದು ರೂಪಾಯಿಯವರೆಗೆ ಇರುತ್ತಿತ್ತು. ಇದಲ್ಲದೆ ತಾಲೂಕು ಮಂಡಳಿಗಳು ನೀಡುತ್ತಿದ್ದ ಧನಸಹಾಯವೂ ಈ ಮಂಡಳಿಗಳ ಆರ್ಥಿಕ ಸಂಪನ್ಮೂಲಗಳಾಗಿದ್ದವು.

**ಸ್ಥಳೀಯ ಮಂಡಳಿಗಳ ಕಾಯ್ದೆ ೧೯೨೦**

ಈ ಕಾಯ್ದೆಯು ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯಲ್ಲಿ ಮಹತ್ತರ ಮೈಲಿಗಲ್ಲಾಯಿತು. ಇದರಂತೆ ಸ್ಥಳೀಯ ಮಂಡಳಿಗಳಿಗೆ ಹೆಚ್ಚಿನ ಸ್ವಾಯತ್ತತೆ ಹಾಗೂ ಹೆಚ್ಚಿನ ಅಧಿಕಾರದೊಂದಿಗೆ ಹೆಚ್ಚುವರಿ ಸಂಪನ್ಮೂಲಗಳು ದೊರಕುವಂತಾಯಿತು. ಚುನಾಯಿತ ಸದಸ್ಯರ ಪ್ರಮಾಣವನ್ನು ಹೆಚ್ಚಿಸಲಾಯಿತು. ಜಿಲ್ಲಾ ಮಂಡಳಿಗಳಲ್ಲಿ ಜಿಲ್ಲಾ ಎಂಜಿನಿಯರ್ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ನೇಮಕಕ್ಕೆ ಅವಕಾಶ ಕಲ್ಪಿಸಲಾಯಿತು ಮತ್ತು ಆರೋಗ್ಯ, ನೈರ್ಮಲ್ಯಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಕೆಲ ತುರ್ತು ಸಂದರ್ಭ ಅಥವಾ ಅಸಮರ್ಪಕ ಆಡಳಿತದಂತಹ ಸಂದರ್ಭಗಳಲ್ಲಿ ಮಾತ್ರ ಜಿಲ್ಲಾಧಿಕಾರಿ ಅಥವಾ ಸರ್ಕಾರವು ಈ ಮಂಡಳಿಗಳ ಆಡಳಿತದಲ್ಲಿ ಮಧ್ಯ ಪ್ರವೇಶ ಮಾಡಬೇಕಾಗಿತ್ತು. ಪುರಸಭೆ ಅಥವಾ ಸ್ಥಳೀಯ ಸಂಸ್ಥೆಗಳ ತನಿಖಾಧಿಕಾರಿ ಎಂಬ ಅಧಿಕಾರಿಯನ್ನು ನೇಮಿಸಿ, ಈ ಮಂಡಳಿಗಳಲ್ಲಿ ಎಲ್ಲಾ ಕಾರ್ಯಕಲಾಪಗಳು ಕಾಯ್ದೆಗನುಗುಣವಾಗಿ ನಡೆದ ಬಗ್ಗೆ ಗಮನಿಸುವ ಅಧಿಕಾರ ನೀಡಲಾಯಿತು. ೧೯೨೦ರ ಮದ್ರಾಸ್ ಪ್ರಾಥಮಿಕ ಶಿಕ್ಷಣ ಕಾಯ್ದೆ ೮ರ ಪ್ರಕಾರ ತಾಲೂಕು ಮಂಡಳಿಗಳು ಮತ್ತು ಪುರಸಭೆಗಳು ಶಿಕ್ಷಣ ಸಾರ್ವತ್ರೀಕರಣಕ್ಕೆ ಸ್ಥಳೀಯವಾಗಿ ಶಿಕ್ಷಣ ತೆರಿಗೆ ವಿಧಿಸುವುದು ಮತ್ತು ಸರ್ಕಾರವೂ ಸಹ ಮಂಡಳಿ ಸಂಗ್ರಹಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ನೀಡುವುದನ್ನು ಕಡ್ಡಾಯಗೊಳಿಸಲಾಯಿತು. ಕ್ರಮೇಣ ಶಾಲೆಗಳ ಮೇಲ್ವಿಚಾರಣೆ ಮತ್ತು ಶಿಕ್ಷಣ ಶುಲ್ಕ ವಿಧಿಸುವ ಕರ್ತವ್ಯವು ಜಿಲ್ಲಾ ಮಂಡಳಿಗಳದ್ದಾಯಿತು.

**೧೯೨೦ರ ಗ್ರಾಮ ಪಂಚಾಯಿತಿಗಳ ಕಾಯ್ದೆ**

೧೯೧೫ರಲ್ಲಿ ಅಸ್ತಿತ್ವಕ್ಕೆ ಬಂದ ಗ್ರಾಮಪಂಚಾಯಿತಿಗಳು ಯಾವುದೇ ತೆರಿಗೆ ವಿಧಿಸುವ ಅಧಿಕಾರ ಪಡೆದಿರಲಿಲ್ಲ. ಈ ಕಾರಣದಿಂದ ಅವುಗಳ ಕಾರ್ಯಚಟುವಟಿಕೆ ಮಂದಗತಿಯಲ್ಲಿತ್ತು. ಇವುಗಳನ್ನು ಸದೃಢಗೊಳಿಸುವ ಸಲುವಾಗಿ ೧೯೨೦ರಲ್ಲಿ ೧೫ನೇ ಗ್ರಾಮ ಪಂಚಾಯಿತಿ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯಂತೆ ಮಂಡಳಿಯ ಸದಸ್ಯರ ಸಂಖ್ಯೆ ಕನಿಷ್ಠ ಏಳು, ಗರಿಷ್ಠ ೧೫ ಆಗಿತ್ತು. ಸರ್ವ ಸದಸ್ಯರೂ ಚುನಾಯಿತ ಸದಸ್ಯರಾಗಿದ್ದು, ಅವರ ಅಧಿಕಾರಾವಧಿ ಮೂರು ವರ್ಷಗಳಾಗಿತ್ತು. ೨೫ ವರ್ಷ ತುಂಬಿದ ಎಲ್ಲ ಸಾರ್ವಜನಿಕರೂ

ಚುನಾವಣೆಗೆ ಸ್ಪರ್ಧಿಸಲು ಮತ್ತು ಮತದಾನ ಮಾಡಲು ಅರ್ಹರಾಗಿದ್ದರು. ಸ್ಪರ್ಧಾಳುಗಳಿಗೆ ಹಿಂದೆ ನಿರ್ದಿಷ್ಟಪಡಿಸಲಾಗಿದ್ದ ಆಸ್ತಿ ಸಂಹಿತೆಯನ್ನು ಸಡಿಲಗೊಳಿಸಲಾಯಿತು. ಇದರಿಂದ ಆಸ್ತಿವಂತರಲ್ಲದ ಶೋಷಿತ ವರ್ಗದವರೂ ಚುನಾವಣೆಗೆ ಸ್ಪರ್ಧಿಸಲು ಅವಕಾಶವಾಯಿತು. ಪಂಚಾಯಿತಿ ವ್ಯವಸ್ಥೆಯ ಆಡಳಿತದ ಜವಾಬ್ದಾರಿಯನ್ನು ಪ್ರಾಂತ್ಯದಲ್ಲಿ ನಿರ್ವಹಿಸಲು ರಿಜಿಸ್ಟ್ರಾರ್ ಜನರಲ್ ಎಂಬ ಅಧಿಕಾರಿಯನ್ನು ನೇಮಕ ಮಾಡಲಾಯಿತು. ೧೯೫೦ರ ಸ್ಥಳೀಯ ಮಂಡಳಿಗಳ ತಿದ್ದುಪಡಿ ಕಾಯ್ದೆಯ ಪ್ರಕಾರ ಜಿಲ್ಲಾ ಮಂಡಳಿ ಮತ್ತು ತಾಲೂಕು ಮಂಡಳಿಗಳ ಅಧ್ಯಕ್ಷರು ಗ್ರಾಮ ಪಂಚಾಯ್ತಿಗಳ ಚಟುವಟಿಕೆಗಳನ್ನು ನಿಯಂತ್ರಿಸುವ ಅಧಿಕಾರ ಹೊಂದಿದ್ದರು ಮತ್ತು ಗ್ರಾಮಾಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಯಿತು.

### ೧೯೫೬ – ರಾಜ್ಯ ಪುನರ್ ವಿಂಗಡಣೆಯ ನಂತರದ ಬೆಳವಣಿಗೆಗಳು

ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಜನಪರ ಕೆಲಸಕಾರ್ಯಗಳನ್ನು ನಿರ್ವಹಿಸುವಾಗ ಜನರ ಸಹಭಾಗಿತ್ವದ ಅನಿವಾರ್ಯತೆ ಯುಂಟಾಯಿತು. ೧೯೫೩ರಲ್ಲಿ ಡಿ.ಎಚ್.ಚಂದ್ರಶೇಖರಯ್ಯ ವಿಚಾರಣಾ ಸಮಿತಿ ಕೆಳಕಂಡಂತೆ ಶಿಫಾರಸ್ಸುಗಳನ್ನು ಪ್ರಕಟಿಸಿತು.

೧) ತಾಲೂಕು ಮಂಡಳಿಗಳ ಸದಸ್ಯರನ್ನುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರೆಸುವುದು.

೨) ತಾಲೂಕು ಮಂಡಳಿಗಳನ್ನು ಪುನರಾರಂಭಿಸುವುದು,

೩) ತಾಲೂಕು ಮಂಡಳಿಯ ಸದಸ್ಯ ಸ್ಥಾನಗಳ ಮೂರನೇ ಒಂದು ಭಾಗವನ್ನು ಗ್ರಾಮ ಪಂಚಾಯ್ತಿ ಮತ್ತು ಪುರಸಭಾ ಮಂಡಳಿಗಳ ಸದಸ್ಯರಿಗೆ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗದ ಸ್ಥಾನಗಳಿಗೆ ಸದಸ್ಯರನ್ನು ಚುನಾವಣೆಗಳಲ್ಲಿ ಆಯ್ಕೆ ಮಾಡುವುದು.

ಆದಾಗ್ಯೂ ರಾಜ್ಯ ಪುನರ್ ವಿಂಗಡನೆಯಾದ ತರುವಾಯ ೧೯೫೯ರಲ್ಲಿ ಜಾರಿಯಾದ ಮೈಸೂರು ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮವು ಹಿಂದಿನ ಮದ್ರಾಸ್ ಸರ್ಕಾರದ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಪರಿಣಮಿಸಿತು. ಈ ಹಿಂದೆ ೧೯೫೭ರಲ್ಲಿ ದೇಶದ ಇತರೆಡೆಗಳಂತೆ ಕರ್ನಾಟಕದಲ್ಲಿಯೂ ಬಲವಂತರಾಯ ಮೆಹ್ತಾ ಸಮಿತಿಯ ವರದಿಯನ್ವಯ ಪಂಚಾಯಿತಿರಾಜ್ ಕಾನೂನನ್ನು ಜಾರಿಗೊಳಿಸಲಾಗಿತ್ತು. ೧೯೫೯ರಲ್ಲಿ ಜಾರಿಯಾದ ಹೊಸ ಕಾಯ್ದೆಯಂತೆ ಹಿಂದಿನ ಜಿಲ್ಲಾ ಮಂಡಳಿಗಳು ರದ್ದಾಗಿ, ಜಿಲ್ಲಾಡಳಿತವು ಮೂರು ಹಂತದಲ್ಲಿ ವಿಕೇಂದ್ರಿಕರಣಗೊಂಡಿತು.

ಅದರಂತೆ ಮೂರು ಹಂತಗಳಲ್ಲಿ, ಗ್ರಾಮಪಂಚಾಯಿತಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳು, ರಚಿತವಾಗಿ ಹೆಚ್ಚಿನ ಜವಾಬ್ದಾರಿ ಹಾಗೂ ಸಂಪನ್ಮೂಲಗಳಿಂದ ಸದೃಢಗೊಂಡವು. ಇದರಿಂದ ಪುನರ್ವಿಂಗಡನಾ ಪೂರ್ವದ ಎಲ್ಲಾ ಪ್ರಾಂತ್ಯಗಳ ವಿವಿಧ ಕಾಯ್ದೆಗಳು ರದ್ದುಗೊಂಡು ಈ ಕಾಯ್ದೆಯು ವಿಶಾಲ ಕರ್ನಾಟಕಕ್ಕೆ ಏಕರೂಪವಾಗಿ ಅನ್ವಯಗೊಂಡಿತು. ಗ್ರಾಮ ಸ್ವರಾಜ್ಯದ ಆಶಯದೊಂದಿಗೆ ಜಾರಿಯಾದ ಈ ಕಾಯ್ದೆಯು ಕರ್ನಾಟಕದ ಪ್ರಪ್ರಥಮ ಶಾಸನವಾಯಿತು. ಕ್ರಮೇಣ ಈ ಕಾಯ್ದೆಯು ೧೯೬೧ರ ೨೬ನೇ, ೧೯೬೪ರ ೨೨ನೇ, ೧೯೬೫ರ ೫ನೇ, ೧೯೭೦ರ ೭ನೇ, ೧೯೭೪ರ ೨೧ನೇ ತಿದ್ದುಪಡಿಗಳೊಂದಿಗೆ ಹೊಸ ರೂಪ ಪಡೆಯಿತು. ೧೯೮೩ರಲ್ಲಿ ಮತ್ತು ಅಂತಿಮವಾಗಿ ೧೯೯೩ರಲ್ಲಿ ವ್ಯಾಪಕ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೊಳಿಸಲಾಯಿತು.

### ಗ್ರಾಮ ಪಂಚಾಯಿತಿಗಳು

೧೯೫೯ರ ಮೈಸೂರು ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿ ಅಧಿನಿಯಮವು ಗ್ರಾಮೀಣ ಜನರ ಆಶೋತ್ತರಗಳಿಗೆ ಸ್ಪಂದಿಸುವ ಆಶಯ ಹೊಂದಿದ್ದಿತು. ಅದರಂತೆ ಹೊಸದಾಗಿ ೧೫೦೦ ರಿಂದ ಹತ್ತು ಸಾವಿರ ಜನಸಂಖ್ಯೆ ಇರುವ ಪ್ರತಿ ಕಂದಾಯಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದರಂತೆ ಗ್ರಾಮಪಂಚಾಯಿತಿಗಳನ್ನು ರಚಿಸಲಾಯಿತು. ಅಂತಹ ಪ್ರತಿ ಪಂಚಾಯಿತಿಗೆ ಸದಸ್ಯ ಬಲವನ್ನು ೧೧ ರಿಂದ ೧೯ ಸ್ಥಾನಗಳಿಗೆ ಮಿತಿಗೊಳಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ವರ್ಗದ ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಮೀಸಲು ನೀಡಲಾಯಿತು ಮತ್ತು ಎರಡು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಯ್ತು. ಜನಸಂಖ್ಯೆಯು ೫,೦೦೦ ಮೀರಿದ ಮತ್ತು ೧೦,೦೦೦ ರೂ. ವಾರ್ಷಿಕ ಆದಾಯವಿರುವ ಗ್ರಾಮಪಂಚಾಯಿತಿ ಮತ್ತು ೧೦ ಸಾವಿರದ ಮಿತಿಯಲ್ಲಿರುವ ಪುರಸಭೆಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಸರ್ಕಾರವೇ ಪರಿವರ್ತಿಸುತ್ತಿತ್ತು. ೧೯೭೭ರಲ್ಲಿ ಜಿಲ್ಲೆಯಲ್ಲಿ ಇದ್ದ ಪಂಚಾಯಿತಿಗಳ ವಿವರ ಕೆಳಕಂಡಂತಿದೆ.

**ಕೋಷ್ಟಕ ೧೨.೧**

| ಕ್ರ.ಸಂ. | ತಾಲೂಕಿನ ಹೆಸರು | ಗ್ರಾಮ ಪಂಚಾಯಿತಿಗಳು | ಪಟ್ಟಣ ಪಂಚಾಯಿತಿ | ಒಟ್ಟು |
|---|---|---|---|---|
| ೧ | ಬೆಳ್ತಂಗಡಿ | ೪೦ | – | ೪೦ |
| ೨ | ಬಂಟ್ವಾಳ | ೫೩ | ೨ | ೫೫ |
| ೩ | ಕುಂದಾಪುರ | ೭೦ | ೨ | ೭೨ |
| ೪ | ಕಾರ್ಕಳ | ೫೨ | ೨ | ೫೪ |
| ೫ | ಮಂಗಳೂರು | ೬೫ | ೭ | ೭೨ |
| ೬ | ಪುತ್ತೂರು | ೫೮ | ೧ | ೫೯ |
| ೭ | ಸುಳ್ಯ | ೪೧ | – | ೪೧ |
| ೮ | ಉಡುಪಿ | ೭೨ | ೨ | ೭೪ |
| | **ಒಟ್ಟು** | **೪೫೧** | **೧೬** | **೪೬೭** |

ಗ್ರಾಮಲೆಕ್ಕಿಗರು ಪಂಚಾಯಿತಿಗಳ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಚುನಾಯಿತ ಸದಸ್ಯರಲ್ಲಿ ಇಬ್ಬರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಗುತ್ತಿತ್ತು. ವಾರ್ಷಿಕ ೧೨,೦೦೦ ರೂ.ಗಳಿಗೂ ಹೆಚ್ಚು ಆದಾಯ ಹೊಂದಿದ ಪಂಚಾಯಿತಿಗಳಿಗೆ ಪ್ರತ್ಯೇಕ ಪಂಚಾಯಿತಿ ಕಾರ್ಯದರ್ಶಿಗಳನ್ನು ನೇಮಿಸಬಹುದಾಗಿತ್ತು. ಪ್ರತಿ ಗ್ರಾಮಪಂಚಾಯಿತಿಗೆ ಗ್ರಾಮದ ಭೂಕಂದಾಯದ ಶೇ.೩೦ ಭಾಗವನ್ನು, ವಿಶೇಷ ಕೆಲಸಗಳಿಗಾಗಿ ಹೆಚ್ಚುವರಿ ಶೇ. ೧೦ ರಷ್ಟು ಅನುದಾನವನ್ನು ಸರ್ಕಾರವು ನೀಡುತ್ತಿತ್ತು. ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಖಾಲಿ ನಿವೇಶನ, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ, ಹಬ್ಬ, ಮನರಂಜನೆ, ವಾಹನ, ಇವುಗಳ ಮೇಲೆ ತೆರಿಗೆ ವಿಧಿಸಬಹುದಾಗಿತ್ತು ಮತ್ತು ಬಸ್ ನಿಲ್ದಾಣ, ಮಾರುಕಟ್ಟೆ, ಗಾಡಿನಿಲ್ದಾಣ ಮತ್ತು ದೋಣಿ ನಿಲ್ದಾಣಗಳ ಮೇಲೆ ಸುಂಕ ವಿಧಿಸುವ ಅಧಿಕಾರ ಹೊಂದಿದ್ದವು. ಪಂಚಾಯ್ತಿಗಳಿಗೆ ಆದಾಯ ತರಬಲ್ಲ ಆಸ್ತಿಗಳ ನಿರ್ಮಾಣಕ್ಕೆ ಸರ್ಕಾರವು ಶೇ. ಆರರ ಬಡ್ಡಿದರದಲ್ಲಿ ಸಾಲ ನೀಡುತ್ತಿತ್ತು. ಈ ಸಾಲಗಳನ್ನು ಪಂಚಾಯಿತಿಗಳು ಬಡ್ಡಿಯನ್ನೊಳಗೊಂಡಂತೆ ೧೦ ಸಮ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗಿತ್ತು. ಪಂಚಾಯಿತಿಗಳ ಕರ್ತವ್ಯಗಳಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ, ಚರಂಡಿ ವ್ಯವಸ್ಥೆ, ಬಾವಿ, ಕೆರೆಗಳ ಅಭಿವೃದ್ಧಿ, ವಿದ್ಯುತ್‌ದೀಪ ವ್ಯವಸ್ಥೆ, ನೈರ್ಮಲ್ಯ, ಕಟ್ಟಡಗಳ ಕಾಮಗಾರಿ ನಿಯಂತ್ರಣ, ಹೋಟೆಲುಗಳಲ್ಲಿ ಸ್ವಚ್ಛತೆ, ಸಾರ್ವಜನಿಕ ಕಟ್ಟಡ ಮತ್ತು ಅರಣ್ಯ ಭೂಮಿಯ ರಕ್ಷಣೆ, ಗೊಬ್ಬರ ಗುಂಡಿಗಳಿಗೆ ಸ್ಥಳ ನಿಗದಿ, ಕೃಷಿ ಅಭಿವೃದ್ಧಿ, ಗುಡಿಕೈಗಾರಿಕೆಗೆ ಉತ್ತೇಜನ, ಆಸ್ಪತ್ರೆ, ಔಷಧಾಲಯ, ಹೆರಿಗೆ ಆಸ್ಪತ್ರೆ, ಸೌಲಭ್ಯ ಒದಗಿಸುವುದು, ಮುಂತಾದವುಗಳು ಒಳಗೊಂಡಿದ್ದವು.

## ತಾಲೂಕು ಅಭಿವೃದ್ಧಿ ಮಂಡಳಿಗಳು

ಮದ್ರಾಸು ಪ್ರಾಂತೀಯ ಸರ್ಕಾರದ ಆಡಳಿತದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೩೦ರ ಸ್ಥಳೀಯ ಮಂಡಳಿಗಳ ತಿದ್ದುಪಡಿ ಕಾಯ್ದೆಯಂತೆ ರೂಪಿಸಲಾಗಿದ್ದ ತಾಲೂಕು ಮಂಡಳಿಗಳನ್ನು ರಾಜ್ಯ ಪುನರ್ವಿಂಗಡನೆಯಾದ ಬಳಿಕ ಪುನರುಜ್ಜೀವನಗೊಳಿಸಲಾಯ್ತು. ೩೦ ವರ್ಷಗಳಷ್ಟು ಹಳೆಯದಾದ ಈ ಮಂಡಳಿಗಳನ್ನು ೧೯೫೯ರ ಮೈಸೂರು ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ಪುನರ್ರೂಪಿಸಿ ಪ್ರತಿ ಕಂದಾಯ ತಾಲೂಕಿಗೊಂದರಂತೆ ತಾಲೂಕು ಅಭಿವೃದ್ಧಿ ಮಂಡಳಿಯನ್ನು ರಚಿಸಲಾಯಿತು. ಮೂರು ಹಂತದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಯು ಪ್ರಧಾನ ಪಾತ್ರವನ್ನು ವಹಿಸಿತ್ತು. ಇದರ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತಿ ಮಂಡಳಿಯಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಒಂದು ಲಕ್ಷ ಜನ ಸಂಖ್ಯೆಗೆ ೧೫ ರಂತೆ ಇದ್ದು ಗರಿಷ್ಠ ೧೯ಕ್ಕೆ ನಿಗಧಿಪಡಿಸಲಾಗಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲು

ಸೌಲಭ್ಯವಿತ್ತು. ಚುನಾಯಿತ ಸದಸ್ಯರ ಅಧಿಕಾರಾವಧಿಯನ್ನು ಐದು ವರ್ಷಕ್ಕೆ ಏರಿಸಲಾಯಿತು. ತಾಲೂಕಿನ ಶಾಸಕರು ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಇದರ ಕಾರ್ಯನಿರ್ವಾಹಕರಾಗಿದ್ದರು. ತಾಲೂಕಿನಲ್ಲಿ ಸಂಗ್ರಹವಾದ ಭೂಕಂದಾಯದ ಶೇ.೫೦ ಭಾಗವನ್ನೇ ಅನುದಾನವಾಗಿ ಮಂಡಳಿಗಳಿಗೆ ನೀಡಲಾಗುತ್ತಿತ್ತು. ಜೊತೆಗೆ ವಿಶೇಷ ಯೋಜನೆಗಳಿಗೆ ಶೇ.೧೦ರಷ್ಟು ಹೆಚ್ಚುವರಿಯಾಗಿ ನೀಡಲಾಗುತ್ತಿತ್ತು. ಸ್ಥಿರಾಸ್ಥಿ ಮತ್ತು ಜಾನುವಾರು ಮಾರಾಟ ಸುಂಕ ವಿಧಿಸುವ ಅಧಿಕಾರ ಮಂಡಳಿಗಿತ್ತು. ತಾಲೂಕಿನ ಭೂಗಂದಾಯದ ಅನುದಾನವು, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ೬೦:೪೦ ಪ್ರಮಾಣದಲ್ಲಿ ಹಂಚಿಕೆ ಮಾಡಲ್ಪಡುತ್ತಿತ್ತು. ಕುಡಿಯುವ ನೀರಿನ ಬಾವಿ, ಕೊಳವೆ ಬಾವಿ ತೋಡುವುದು, ಸಣ್ಣ ನೀರಾವರಿ ಕಾಮಗಾರಿ ನಿರ್ವಹಿಸುವುದು, ರಸ್ತೆಗಳ ನಿರ್ಮಾಣ ಹಾಗೂ ಇನ್ನಿತರ ಸಾರ್ವಜನಿಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ನಿರ್ವಹಿಸುವುದು ಮತ್ತು ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಇವುಗಳ ಕರ್ತವ್ಯವಾಗಿತ್ತು. ೧೯೮೭ರಲ್ಲಿ ಈ ಮಂಡಳಿಗಳು ತಾಲೂಕು ಪಂಚಾಯತ್‌ಗಳಾಗಿ ಬದಲಾದವು.

### ಜಿಲ್ಲಾ ಅಭಿವೃದ್ಧಿ ಸಮಿತಿಗಳು

ಜಿಲ್ಲೆಯಲ್ಲಿ ರಚಿತವಾಗಿದ್ದ ಹಿಂದಿನ ಜಿಲ್ಲಾ ಮಂಡಳಿಗಳನ್ನು ರದ್ದುಗೊಳಿಸಿ ೧೯೫೯ರ ಕರ್ನಾಟಕ ಗ್ರಾಮಪಂಚಾಯತ್‌ಗಳ ಹಾಗೂ ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಎಲ್ಲಾ ಜಿಲ್ಲೆಗಳಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಜಿಲ್ಲಾ ಅಭಿವೃದ್ಧಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ತನ್ನ ಅಧೀನದಲ್ಲಿದ್ದ ಇತರ ಸ್ಥಳೀಯ ಸಂಸ್ಥೆಗಳಾದ ತಾಲೂಕು ಅಭಿವೃದ್ಧಿ ಮಂಡಳಿ, ಗ್ರಾಮಪಂಚಾಯಿತಿಗಳು ಮತ್ತು ಪಟ್ಟಣ ಪಂಚಾಯಿತಿಗಳ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದ ಜವಾಬ್ದಾರಿ ಹೊಂದಿದ್ದಿತು. ಜಿಲ್ಲಾಧಿಕಾರಿಗಳು ಪದನಿಮಿತ್ತ ಅಧ್ಯಕ್ಷರಾಗಿದ್ದು ಈ ಸಮಿತಿಗೆ ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿರುತ್ತಿದ್ದರು. ಸದಸ್ಯರಾಗಿ ಜಿಲ್ಲೆಯ ಲೋಕಸಭಾ, ರಾಜ್ಯಸಭಾ, ವಿಧಾನಸಭಾ ಸದಸ್ಯರು ಜಿಲ್ಲೆಯ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಿದ್ದರು. ಅಲ್ಲದೆ ಒಬ್ಬ ಮಹಿಳೆ ಮತ್ತು ಪರಿಶಿಷ್ಟ ವರ್ಗ ಮತ್ತು ಜಾತಿಯ ಪ್ರತಿನಿಧಿಗಳು ಈ ಸಭೆಗೆ ನಾಮಕರಣಗೊಂಡ ಸದಸ್ಯರಾಗಿರುತ್ತಿದ್ದರು. ಈ ಸಮಿತಿಯ ಪ್ರಮುಖ ಕಾರ್ಯವೆಂದರೆ ತಾಲೂಕು ಅಭಿವೃದ್ಧಿ ಮಂಡಳಿಗಳ ಆಯವ್ಯಯವನ್ನು ಪರಿಶೀಲಿಸಿ ಅನುಮೋದಿಸಿ, ಮಂಜೂರಾತಿ ನೀಡುವುದು, ಅವುಗಳ ಕಾರ್ಯಗಳಲ್ಲಿ ಮಾರ್ಗದರ್ಶನ ಮತ್ತು ಪರಾಮರ್ಶೆ ಮಾಡುವುದಾಗಿತ್ತು.

### ಪಂಚಾಯತ್ ರಾಜ್ ಕಾನೂನು

ಸ್ವತಂತ್ರ ಭಾರತ ಸಂವಿಧಾನವು ಪಂಚಾಯತ್‌ರಾಜ್ ಸಂಸ್ಥೆಗಳನ್ನು ಬಲಪಡಿಸಲು ವಚನಬದ್ಧವಾಗಿದೆ. ಆಡಳಿತದಲ್ಲಿ ವಿಕೇಂದ್ರೀಕರಣ ತರುವ ಮೂಲಕ ಹಾಗೂ ಪ್ರಜೆಗಳು ಆಡಳಿತ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಗ್ರಾಮೀಣ ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಇಂಬು ನೀಡುವುದು ಪಂಚಾಯತ್ ರಾಜ್ ವ್ಯವಸ್ಥೆಯ ಆಶಯವಾಗಿದೆ. ಈ ಆಶಯದ ಈಡೇರಿಕೆಗಾಗಿ ಸರ್ಕಾರವು ೧೯೭೭ರ ಅಶೋಕ ಮೆಹ್ತಾ ಸಮಿತಿಯ ವರದಿಯಂತೆ ಸಮಗ್ರ ತಿದ್ದುಪಡಿಗಳನ್ನೊಳಗೊಂಡ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೫ರಲ್ಲಿ ಜಾರಿಗೊಳಿಸಿತು. ಹೀಗೆ ೧೯೮೫ರ ಪಂಚಾಯತ್ ರಾಜ್ ಕಾಯ್ದೆಯನ್ನು ಸಮಗ್ರವಾಗಿ ಜಾರಿಗೊಳಿಸಿದ ಪ್ರಪ್ರಥಮ ರಾಜ್ಯ ಕರ್ನಾಟಕ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸುವ ಮೂಲಕ ಹೆಚ್ಚು ವ್ಯಾಪಕವಾಗಿ ಮತ್ತು ಅರ್ಥಪೂರ್ಣವಾದ ಮಾರ್ಪಾಡಿನೊಂದಿಗೆ ಈ ಕಾಯ್ದೆ ಜಾರಿಯಾಯಿತು. ಇದರನ್ವಯ ಮಂಡಲ ಪಂಚಾಯ್ತಿ, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರವಾಗಲಿ ಅಥವಾ ಪ್ರತ್ಯೇಕ ಹಣಕಾಸಿನ ಅಧಿಕಾರವಾಗಲಿ ಇರಲಿಲ್ಲ. ಅದು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈ ಹೊಸ ಕಾನೂನಿನಲ್ಲಿ ನ್ಯಾಯ ಪಂಚಾಯ್ತಿಯು ಸೇರ್ಪಡೆಯಾಗಿದ್ದರೂ ಅದು ಜಾರಿಯಾಗಲಿಲ್ಲ. ಜಿಲ್ಲೆಯ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತಿದ್ದವು. ಈ ವಿಧದ ಸ್ಥಳೀಯ ಆಡಳಿತ ವ್ಯವಸ್ಥೆಯು ೧೦ ವರ್ಷಗಳ ಕಾಲ, ಅಂದರೆ ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಜಾರಿಯಾಗುವವರೆಗೆ ಮುಂದುವರೆಯಿತು.

## ಜಿಲ್ಲಾ ಪರಿಷತ್‌ಗಳು

ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳು ವ್ಯಾಪಕ ಅಧಿಕಾರದೊಂದಿಗೆ ಜಿಲ್ಲಾಮಟ್ಟದಲ್ಲಿ ಸಮಾಂತರ ಸರ್ಕಾರಗಳಂತೆ ಕಾರ್ಯನಿರ್ವಹಿಸುತ್ತಿದ್ದುವು. ರಾಜ್ಯದ ಬಹುತೇಕ ಅಭಿವೃದ್ಧಿ ಯೋಜನೆಗಳು ಜಿಲ್ಲಾ ಪರಿಷತ್ ಮೂಲಕ ಕಾರ್ಯರೂಪಕ್ಕೆ ಬರುತ್ತಿದ್ದವು. ಒಟ್ಟು ಅಭಿವೃದ್ಧಿ ವೆಚ್ಚದ ಶೇ.೮೦ರಷ್ಟನ್ನು ಜಿಲ್ಲಾ ಪರಿಷತ್‌ಗೆ ನೀಡಲಾಯಿತು. ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ೧೯೮೭ರಲ್ಲಿ ಸ್ಥಾಪನೆಗೊಂಡು ೧೯-೨-೧೯೮೭ರಂದು ತನ್ನ ಪ್ರಥಮ ಸಭೆಯನ್ನು ಜರುಗಿಸಿತು. ೧೯೮೭ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಪ್ರತಿ ೩೫ ಸಾವಿರ ಪ್ರಜಾ ಸಂಖ್ಯೆಗೊಬ್ಬ ಸದಸ್ಯರಂತೆ ೪೯ ಚುನಾಯಿತ ಸದಸ್ಯರನ್ನು ಹೊಂದಿತ್ತು ೧೯೯೩ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಜಾರಿಗೊಳ್ಳುವುದರೊಂದಿಗೆ ಜಿಲ್ಲಾ ಪರಿಷತ್‌ಗಳು ರದ್ದಾದವು.

## ತಾಲೂಕು ಪಂಚಾಯಿತಿ ಸಮಿತಿಗಳು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೮೩ರಲ್ಲಿ ಸೂಚಿಸಿರುವಂತೆ ಪ್ರತಿ ಕಂದಾಯ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯತ್ ಸಮಿತಿಗಳನ್ನು ರಚಿಸಲು ಸಾಧ್ಯವಾಯಿತು. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ನಡುವೆ ಸಂಪರ್ಕ ಕಲ್ಪಿಸುವ ಕೊಂಡಿಯಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಇವುಗಳದಾಗಿತ್ತು. ತಾಲೂಕನ್ನು ಪ್ರತಿನಿಧಿಸುವ ವಿಧಾನ ಮಂಡಲದ ಸದಸ್ಯರು, ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು ಮತ್ತು ತಾಲೂಕಿನ ಎಲ್ಲ ಮಂಡಲ ಪಂಚಾಯಿತಿಗಳ ಪ್ರಧಾನರು ಈ ಸಮಿತಿಯ ಸದಸ್ಯರಾಗಿರುತ್ತಿದ್ದರು. ಮಂಡಲ ಪಂಚಾಯಿತಿ ಕಾರ್ಯನಿರ್ವಹಣೆಯಲ್ಲಿ ಮಾರ್ಗದರ್ಶನ, ತಾಲೂಕಿನಲ್ಲಿ ಕಾರ್ಯಗತಗೊಳ್ಳುವ ಅಭಿವೃದ್ಧಿ ಯೋಜನೆ ಕಾಮಗಾರಿಗಳ ಪರಿಶೀಲನೆ ಮೊದಲಾದವುಗಳು ತಾಲೂಕು ಪಂಚಾಯಿತಿ ಸಮಿತಿಗಳ ಮುಖ್ಯ ಕಾರ್ಯಗಳಾಗಿದ್ದವು.

## ಮಂಡಲ ಪಂಚಾಯಿತಿಗಳು

ಸರ್ಕಾರವು ಜಾರಿ ಮಾಡಿದ ೧೯೮೩ರ ಪಂಚಾಯಿತಿರಾಜ್ ಅಧಿನಿಯಮದಂತೆ ೮ ಸಾವಿರದಿಂದ ೧೨ ಸಾವಿರ ಜನಸಂಖ್ಯೆಯ ಹಳ್ಳಿಗೆ ಅಥವಾ ಹಳ್ಳಿಗಳ ಗುಂಪಿಗೆ ಒಂದರಂತೆ ಮಂಡಲ ಪಂಚಾಯಿತಿಗಳು ಪ್ರಾರಂಭವಾದವು. ಪ್ರತಿ ೪೦೦ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯಂತೆ ಸದಸ್ಯರನ್ನು ಚುನಾಯಿಸಲಾಗುತ್ತಿತ್ತು. ಸದಸ್ಯರ ಸಂಖ್ಯೆ ಗರಿಷ್ಠ ೩೦ ಆಗಿರುತ್ತಿತ್ತು. ಮಂಡಲ ಪಂಚಾಯಿತಿಗಳು ಅಭಿವೃದ್ಧಿ ಯೋಜನೆಗಳ ಕಾರ್ಯನಿರ್ವಹಣೆಗೆ ಉಪಸಮಿತಿಗಳನ್ನು ರಚಿಸಿಕೊಳ್ಳುತ್ತಿದ್ದವು. ಹಾಗೆ ರಚಿತಗೊಂಡ ಉಪಸಮಿತಿಗಳಲ್ಲಿ ಪ್ರಧಾನ, ಉಪಪ್ರಧಾನರನ್ನೊಳಗೊಂಡಂತೆ ಮೂರರಿಂದ ಐದು ಸದಸ್ಯರಿರುತ್ತಿದ್ದರು. ವಯಸ್ಕರ ಶಿಕ್ಷಣ, ಗೃಹನಿರ್ಮಾಣ, ಗ್ರಾಮೀಣ ನೀರು ಸರಬರಾಜು, ಪರಿಶಿಷ್ಟ ಜಾತಿ ವರ್ಗಗಳ ಕಲ್ಯಾಣ, ಗ್ರಾಮೀಣ ರಸ್ತೆ ಸೇತುವೆ ಅಭಿವೃದ್ಧಿ, ಮುಂತಾದ ಜನೋಪಯೋಗಿ ಕಾರ್ಯಗಳ ಜೊತೆಗೆ ಸರ್ಕಾರದ ಎಲ್ಲ ಯೋಜನೆಗಳನ್ನು ಜಾರಿಗೊಳಿಸುವ ಜವಾಬ್ದಾರಿ ಮಂಡಲ ಪಂಚಾಯಿತಿಗಳದಾಗಿತ್ತು. ೧೯೮೭ರ ನವೆಂಬರ್‌ನಲ್ಲಿ ರಾಜ್ಯದಲ್ಲಿ ೨,೫೨೩ ಮಂಡಲಪಂಚಾಯಿತಿಗಳಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೪೬ ಮಂಡಲ ಪಂಚಾಯಿತಿಗಳು ರಚಿತವಾಗಿದ್ದವು.

## ಗ್ರಾಮಸಭೆ

ಗ್ರಾಮಸಭೆಯು ಗ್ರಾಮಮಟ್ಟದಲ್ಲಿಯ ಅತ್ಯಂತ ಕೆಳಸ್ತರದ ಸಭೆಯಾಗಿತ್ತು. ಇದು ಆಗಿಂದಾಗ್ಗೆ ಸೇರಿ ಸ್ಥಳೀಯ ಅಗತ್ಯಗಳಿಗನುಗುಣವಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿತ್ತು. ಗ್ರಾಮಸಭೆಗಳ ಶಿಫಾರಸ್ಸು ಹಾಗೂ ಸಲಹೆಗಳನ್ನು ಮಂಡಲಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತುಗಳು ಮಾನ್ಯ ಮಾಡುತ್ತಿದ್ದವು. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮದಡಿ ಅರ್ಹ ಫಲಾನುಭವಿಗಳ ಆಯ್ಕೆ ಜವಾಬ್ದಾರಿಯನ್ನು ಗ್ರಾಮಸಭೆಯು ನಿರ್ವಹಿಸುತ್ತಿತ್ತು.

## ೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ

ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಪರಿವರ್ತಿಸುವ ಉದ್ದೇಶದಿಂದ ಸರ್ಕಾರವು ೧೯೯೩ರ ಮೇ ೧೦ರಂದು ಪಂಚಾಯತ್‌ರಾಜ್ ಕಾಯ್ದೆಯನ್ನು ಜಾರಿಗೊಳಿಸಿತು. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ

ಕಾರ್ಯರೂಪಕ್ಕೆ ಬಂದಿರುವ ಪಂಚಾಯತ್ ರಾಜ್ ಕಾಯ್ದೆ ಇದಾಗಿದ್ದು, ಆಡಳಿತ ವಿಕೇಂದ್ರೀಕರಣ, ದಕ್ಷತೆ, ಹಿಂದುಳಿದವರು ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಮುಂತಾದ ವಿಶಿಷ್ಟ ಅಂಶಗಳು ದೇಶದಲ್ಲಿಯೇ ಪ್ರಪ್ರಥಮವಾಗಿ ಇದರಡಿ ಪ್ರಯೋಗವಾಗಿವೆ. ಹಿಂದಿನ ಮಂಡಲ ಪಂಚಾಯ್ತಿ, ತಾಲೂಕು ಪಂಚಾಯ್ತಿ ಸಮಿತಿ ಮತ್ತು ಜಿಲ್ಲಾ ಪರಿಷತ್‌ಗಳು ಕ್ರಮವಾಗಿ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಗಳಾಗಿ ರೂಪಿತವಾಗಿವೆ. ೧೯೯೧ರ ಜನಗಣತಿಯ ವರದಿಯ ಪ್ರಕಾರ ರಾಜ್ಯದಲ್ಲಿ ೫,೬೪೫ ಗ್ರಾಮಪಂಚಾಯಿತಿಗಳಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೫೬ ಗ್ರಾಮಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದವು. ೧೯೯೩ರ ಡಿಸೆಂಬರ್ ಕೊನೆಯಲ್ಲಿ ಗ್ರಾಮಪಂಚಾಯ್ತಿ ಚುನಾವಣೆಗಳು ನಡೆದವು. ಆಗ ಚುನಾಯಿತರಾದ ಸದಸ್ಯರ ಸಂಖ್ಯೆ ೭೯,೮೬೫ ಆಗಿದ್ದು, ಅವರಲ್ಲಿ ೨೩,೪೫೪ ಮಂದಿ ಮಹಿಳಾ ಸದಸ್ಯರಿದ್ದರು. ರಾಜ್ಯದ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಿಗೆ ೧೯೯೫ರ ಮಾರ್ಚ್‌ನಲ್ಲಿ ಚುನಾವಣೆ ನಡೆಯಿತು. ಆಯ್ಕೆಗೊಂಡ ಸದಸ್ಯರ ಸಂಖ್ಯೆ: ಜಿಲ್ಲಾ ಪಂಚಾಯಿತಿ–೯೧೯, ತಾಲೂಕು ಪಂಚಾಯಿತಿ–೩೩೪೦. ೪೦೦ ಜನರಿಗೆ ಒಬ್ಬ ಸದಸ್ಯನಂತೆ ಗ್ರಾಮ ಪಂಚಾಯ್ತಿಗೆ, ೧೦ ಸಾವಿರ ಜನರಿಗೊಬ್ಬ ಪ್ರತಿನಿಧಿಯಂತೆ ತಾಲೂಕು ಪಂಚಾಯಿತಿಗೆ ಮತ್ತು ೪೦ ಸಾವಿರಕ್ಕೊಬ್ಬ ಪ್ರತಿನಿಧಿಯಂತೆ ಜಿಲ್ಲಾಪಂಚಾಯ್ತಿಗಳಿಗೆ ಸದಸ್ಯರು ಚುನಾಯಿತರಾಗುತ್ತಾರೆ. ಹೊಸ ಕಾನೂನಿನಂತೆ ತಾಲೂಕು ಪಂಚಾಯಿತಿಗಳೂ ಸಹ ಚುನಾಯಿತ ಸದಸ್ಯರನ್ನೊಳಗೊಂಡು ಸಕ್ರಿಯವಾಗಿ ಆಡಳಿತ ನಡೆಸುತ್ತಿವೆ. ಶೇ.೫೦ ರಷ್ಟು ಅಭಿವೃದ್ಧಿ ಕಾರ್ಯಕ್ರಮ ಮತ್ತು ಯೋಜನೆಗಳನ್ನು ತಾಲೂಕು ಮಟ್ಟದಲ್ಲಿಯೇ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಹಂತದಲ್ಲಿಯೂ ಗರಿಷ್ಠ ಮೀಸಲಾತಿಯ ಪ್ರಮಾಣ ಶೇ.೫೬ (೨೩+೩೩). ಅದರಂತೆ ಈ ಸಂಸ್ಥೆಗಳ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆಯಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ಮತ್ತು ಮಹಿಳೆಯರಿಗೆ ಮೀಸಲಾತಿ ಇದೆ.

ರಾಜ್ಯಾಂಗದ ೭೪ನೇ ತಿದ್ದುಪಡಿಯನ್ವಯ ಈ ಕಾಯ್ದೆಯಲ್ಲಿ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಅವಕಾಶ ಒದಗಿಸಲಾಗಿದೆ. ಪ್ರತಿ ಯೋಜನೆಯನ್ನು ಪರಿಶೀಲಿಸಿ ಅವುಗಳ ಗುಣಮಟ್ಟವನ್ನು ಸುಧಾರಿಸಿ ಅನುಷ್ಠಾನಕ್ಕೆ ತರುವುದು ಈ ಸಮಿತಿಗಳ ಕರ್ತವ್ಯವಾಗಿದೆ. ಪಂಚಾಯತ್‌ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೊಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಚುನಾವಣೆಗಳನ್ನು ನಿರ್ವಹಿಸಲು ಖಾಯಂ ಆದ ಚುನಾವಣೆ ಆಯೋಗವನ್ನು ರಚಿಸಲಾಗಿದೆ. ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಿದೆ. ಪ್ರತಿ ಹಂತದಲ್ಲಿಯೂ ಚುನಾಯಿತ ಪ್ರತಿನಿಧಿ ಹಾಗೂ ಅಧಿಕಾರಿ ವರ್ಗದ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪಂಚಾಯತ್‌ದ ಮುಖ್ಯ ಕಾರ್ಯದರ್ಶಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ನ ಅಧ್ಯಕ್ಷರುಗಳು ತಮ್ಮ ಕರ್ತವ್ಯಗಳಲ್ಲಿ ಲೋಪವೆಸಗಿದ್ದು ಸಾಬೀತಾದಲ್ಲಿ ಅವರನ್ನು ಬಹುಮತದ (೨/೩) ಆಧಾರದ ಮೇಲೆ ಪದಚ್ಯುತಗೊಳಿಸಬಹುದಾಗಿದೆ. ಸೂಕ್ತ ಸಂದರ್ಭದಲ್ಲಿ ಸರ್ಕಾರವು ಜಿಲ್ಲಾ ಪಂಚಾಯ್ತಿ ಮತ್ತು ತಾಲೂಕು ಪಂಚಾಯ್ತಿಗಳನ್ನು ಕಾರಣವಿದ್ದಲ್ಲಿ ವಿಚಾರಣೆಗೊಳಪಡಿಸಿ ರದ್ದುಪಡಿಸಬಹುದು. ಹೊಸ ಕಾನೂನಿನ್ವಯ ಸರ್ಕಾರವು ಪಂಚಾಯಿತಿ ಸಂಸ್ಥೆಗಳ ಸಿಬ್ಬಂದಿಯನ್ನು ವರ್ಗಾವಣೆ ಮಾಡುವ ಅಧಿಕಾರ ಹೊಂದಿದೆ. ಹಾಗೆಯೇ ಪಂಚಾಯ್ತಿಗಳು ಗ್ರಾಮದ ಹಿತಕ್ಕೆ ಧಕ್ಕೆಯಾಗುವ ಯಾವುದೇ ಕೆಲಸವನ್ನು ಮಾಡಿದಲ್ಲಿ ಮತ್ತು ಜನವಿರೋಧಿ ಕ್ರಮಗಳನ್ನು ಕೈಗೊಂಡಲ್ಲಿ ಅಂತಹ ಗ್ರಾಮಪಂಚಾಯ್ತಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕಿದೆ. ಪ್ರತಿ ಗ್ರಾಮಪಂಚಾಯ್ತಿ, ತಾಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗೆ ಪ್ರತ್ಯೇಕ ನಿಧಿಗಳನ್ನು ಹೊಂದಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾಪಂಚಾಯ್ತಿ, ಕೆಲಸಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸುತ್ತಾರೆ.

### ಪಂಚಾಯ್ತಿಗಳಿಗೆ ಬಹುಮಾನ ಯೋಜನೆ

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಗಳನ್ನು ಮಾಡುವ ಗ್ರಾಮಪಂಚಾಯಿತಿ ಇಲ್ಲವೇ ತಾಲೂಕು ಪಂಚಾಯಿತಿ ಇಲ್ಲ ಜಿಲ್ಲಾ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ೧೯೯೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಇದರ ಅನ್ವಯ ಗ್ರಾಮಪಂಚಾಯಿತಿಗಳಿಗೆ ರಾಜ್ಯಮಟ್ಟದಲ್ಲಿ ಮೂರು ಬಹುಮಾನಗಳನ್ನು ರೂ. ಒಂದು ಲಕ್ಷ, ರೂ.೫೦ ಸಾವಿರ ಮತ್ತು ರೂ. ೨೫ಸಾವಿರ ರಂತೆ ಹಾಗೂ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ೫ ಲಕ್ಷ ರೂ.ಗಳ ಒಂದು ಬಹುಮಾನ ನೀಡುವ ಯೋಜನೆ ಜಾರಿಗೊಳಿಸಲಾಗಿದೆ.

**ಜಿಲ್ಲಾ ಪಂಚಾಯ್ತಿ**

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನನ್ವಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್‌ಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯತ್ ಎಂಬ ಸ್ವಯಮಾಡಳಿತ ಸಂಸ್ಥೆಗಳನ್ನು ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯತ್‌ಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆಗಳು, ನಗರಸಭೆ, ಮಹಾನಗರ ಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಜಿಲ್ಲಾ ಪಂಚಾಯತ್ ಚುನಾಯಿತರಾದ ಎಲ್ಲ ಸದಸ್ಯರು ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆಯ (ಜಿಲ್ಲೆಯಲ್ಲಿ ವಾಸವಾಗಿರುವಂತಹ) ಸದಸ್ಯರು, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಹಾಗೂ ಎಲ್ಲ ತಾಲೂಕು ಪಂಚಾಯಿತಿಗಳ ಅಧ್ಯಕ್ಷರು ಈ ಸಭೆಯಲ್ಲಿ ಸದಸ್ಯರಾಗಿರುತ್ತಾರೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲ ಚುನಾಯಿತ ಸದಸ್ಯರ ಅಧಿಕಾರಾವಧಿ ೫ ವರ್ಷಗಳು.

**ಅಧ್ಯಕ್ಷರು/ ಉಪಾಧ್ಯಕ್ಷರು**

ಚುನಾಯಿತ ಸದಸ್ಯರು ತಮ್ಮಲ್ಲಿಯೇ ಇಬ್ಬರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರೆಂದು ಆಯ್ಕೆ ಮಾಡಿಕೊಳ್ಳುವರು. ಹೀಗೆ ಆಯ್ಕೆಯಾದವರು ಸರ್ಕಾರ ನಿರ್ದಿಷ್ಟಪಡಿಸಿದಷ್ಟು ಸಂಬಳ, ಪ್ರವಾಸಭತ್ಯೆ ಹಾಗೂ ಇತರ ಸೌಲಭ್ಯ ಪಡೆಯುವರು. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಇರುತ್ತದೆ.

**ಆಡಳಿತ**

ಕಾನೂನಿನನ್ವಯ ಜಿಲ್ಲಾ ಪಂಚಾಯತ್ ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು. ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದ ಗೊತ್ತುವಳಿ ನಕಲನ್ನು ವಿಭಾಗೀಯ ಕಮಿಷನರಿಗೆ ಸಲ್ಲಿಸಬೇಕು. ಆಡಳಿತ ಸುಗಮ ಹಾಗೂ ಪರಿಣಾಮಕಾರಿಯಾಗಿ ನಡೆಯಲು ಅನುಕೂಲವಾಗುವಂತೆ ಚುನಾಯಿತ ಸದಸ್ಯರು ಒಳಗೊಂಡಿರುವ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲಾ ಪಂಚಾಯ್ತಿಗಳು ರಚಿಸಿಕೊಂಡ ಸ್ಥಾಯಿಸಮಿತಿಗಳು ಯಾವುವೆಂದರೆ ೧) ಸಾಮಾನ್ಯ ಸಮಿತಿ ೨) ಹಣಕಾಸು, ಲೆಕ್ಕ ತಪಾಸಣೆ, ಯೋಜನೆ ಸಮಿತಿ ೩) ಸಾಮಾಜಿಕ ನ್ಯಾಯ ಸಮಿತಿ ೪) ಶಿಕ್ಷಣ ಮತ್ತು ಆರೋಗ್ಯ ೫) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆ ಕುರಿತಂತೆ ರಾಜ್ಯ ಸರ್ಕಾರವು ಪ್ರತ್ಯೇಕ ಚುನಾವಣಾ ಆಯೋಗ ರಚಿಸಿದೆ, ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಆಡಳಿತದ ಪ್ರತಿಯೊಂದು ವಿಭಾಗ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಆಡಳಿತಾತ್ಮಕ ಹಾಗೂ ಹಣಕಾಸಿನ ನಿರ್ವಹಣೆ, ಸಿಬ್ಬಂದಿ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರವಿರುತ್ತದೆ. ನೈಸರ್ಗಿಕ ವಿಪತ್ತು–ಬರಗಳಂತಹ ತುರ್ತು ಸಂದರ್ಭಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಅನುವಾಗುವಂತೆ ಅಧ್ಯಕ್ಷರು ಒಂದು ಲಕ್ಷ ರೂ.ಗಳನ್ನು ಮಂಜೂರು ಮಾಡಬಹುದು. ಹೊಸ ಕಾನೂನಿನನ್ವಯ ಜಿಲ್ಲೆಗೊಂದರಂತೆ ಜಿಲ್ಲಾ ಯೋಜನಾ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ.

**ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳು**

ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳ ರೂಪಿಸಿ ಅನುಷ್ಠಾನಗೊಳಿಸುವುದು, ತಾಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ನಡುವೆ ಪರಸ್ಪರ ಸಾಮರಸ್ಯ ಉಂಟು ಮಾಡುವುದು, ಅವು ಕೈಗೊಂಡಿರುವ ಅಭಿವೃದ್ಧಿ ಯೋಜನೆಯ ಕಾರ್ಯಪಾಲನೆ ಪ್ರಗತಿ ಪರಿಶೀಲಿಸಿ ಅವಶ್ಯ ಮಾರ್ಗದರ್ಶನ ನೀಡುವುದು ಜಿಲ್ಲಾ ಪಂಚಾಯ್ತಿಯ ಸಾಮಾನ್ಯ ಕರ್ತವ್ಯಗಳಾಗಿವೆ. ಕಾಯ್ದೆಯಲ್ಲಿ ನಿಗದಿಗೊಳಿಸಿರುವಂತೆ ಜಿಲ್ಲಾಪಂಚಾಯ್ತಿಯು ೩೦ ವಿವಿಧ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗುವುದು.

ಅವುಗಳಲ್ಲಿ ಮುಖ್ಯವಾದವೆಂದರೆ ೧) ವ್ಯವಸಾಯ, ತೋಟಗಾರಿಕೆ ೨) ಭೂ ಅಭಿವೃದ್ಧಿ, ಭೂ ಸಾರ ಸಂರಕ್ಷಣೆ, ೩) ಸಣ್ಣ ನೀರಾವರಿ, ೪) ಪಶು ಸಂಗೋಪನೆ, ಹೈನುಗಾರಿಕೆ, ೫) ಆಹಾರ ಸಂರಕ್ಷಣೆ, ೬) ಸಣ್ಣ ಕೈಗಾರಿಕೆ ಅಭಿವೃದ್ಧಿ, ೭) ಗ್ರಾಮೀಣ ವಸತಿ, ನೈರ್ಮಲ್ಯ, ಕುಡಿಯುವ ನೀರಿನ ಪೂರೈಕೆ, ೮) ರಸ್ತೆಗಳು, ಕಟ್ಟಡಗಳು, ಸೇತುವೆ ನಿರ್ಮಾಣ, ೯) ಅಸಂಪ್ರದಾಯಿಕ ಇಂಧನ ಬಳಕೆ ಅಭಿವೃದ್ಧಿ, ೧೦) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಡತನ ನಿರ್ಮೂಲನೆ ಯೋಜನೆಗಳ ಅನುಷ್ಠಾನ, ೧೧) ಪ್ರಾಥಮಿಕ, ಪ್ರೌಢ, ವೃತ್ತಿ ಹಾಗೂ ತಾಂತ್ರಿಕ ಶಿಕ್ಷಣ ವ್ಯವಸ್ಥೆಯ ನಿರ್ವಹಣೆ, ೧೨) ಮಹಿಳಾ ಮತ್ತು ಮಕ್ಕಳ ಕಲ್ಯಾಣ ೧೩) ಸಮಾಜ ಕಲ್ಯಾಣ, ಪರಿಶಿಷ್ಟ ಜಾತಿ, ಪಂಗಡ ಕಲ್ಯಾಣ ಅಭಿವೃದ್ಧಿ ಯೋಜನೆ ೧೪) ಸಾರ್ವಜನಿಕ ಆಸ್ತಿಪಾಸ್ತಿ ಸಂರಕ್ಷಣೆ ೧೫) ಸಾರ್ವಜನಿಕ ಆಹಾರ ಸರಬರಾಜು, ೧೬) ಗ್ರಾಮೀಣ ವಿದ್ಯುದೀಕರಣ ೧೭) ಸಹಕಾರ ೧೮) ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು

**ಹಣಕಾಸು**

ಜಿಲ್ಲಾ ಪಂಚಾಯ್ತಿಗೆ ತನ್ನದೇ ಆದ ಪಂಚಾಯತ್ ನಿಧಿ ಇರುತ್ತದೆ. ಈ ನಿಧಿಯು ೧) ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಿದ ಹಣ, ೨) ಸರ್ಕಾರದ ಅನುದಾನ ೩) ಸಾಲಗಳು, ೪) ಮುಂಗಡಗಳು, ೫) ವಂತಿಕೆಗಳು, ೬) ಆಸ್ತಿಗಳಿಂದ ಸಂದಾಯವಾಗುವ ಬಾಡಿಗೆ ೭) ವಿವಿಧ ಸೇವಾ ಶುಲ್ಕಗಳು ೮) ಬಡ್ಡಿ ಹಣ ಮುಂತಾದ ಸಂಪನ್ಮೂಲಗಳಿಂದ ಆದಾಯ ಸಂಗ್ರಹಿಸುತ್ತದೆ. ಜಿಲ್ಲಾ ಪಂಚಾಯಿತಿಯು ತನ್ನ ಆದಾಯದ ಕನಿಷ್ಠ ಶೇ.೨೦ ರಷ್ಟು ಮೊತ್ತವನ್ನು ಪರಿಶಿಷ್ಟಜಾತಿ/ಪಂಗಡಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು.

**ಜಿಲ್ಲಾ ಪಂಚಾಯಿತಿಯ ವಿವಿಧ ಗ್ರಾಮೀಣ ಅಭಿವೃದ್ಧಿ ಯೋಜನೆಗಳು**

I **ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು**

೧) ಜವಾಹರ್ ಗ್ರಾಮ ಸಮೃದ್ಧಿ ಯೋಜನೆ

೨) ಇಂದಿರಾ ಆವಾಸ್ ಯೋಜನೆ

೩) ದಶಲಕ್ಷ ಬಾವಿ ಯೋಜನೆ

೪) ಉದ್ಯೋಗ ಭರವಸೆ ಯೋಜನೆ

೫) ನೆಮ್ಮದಿ ಭರವಸೆ ಯೋಜನೆ

೬) ಜವಾಹರ್ ರೋಜ್‌ಗಾರ್ ಯೋಜನೆ–೨ನೇ ವಾಹಿನಿ ತೀವ್ರಗೊಳಿಸುವ ಜವಾಹರ್ ರೋಜ್‌ಗಾರ್ ಯೋಜನೆ

೭) ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ

೮) ಸಮಗ್ರ ಬರಡು/ಬಂಜರು ಭೂಮಿ ಅಭಿವೃದ್ಧಿ ಯೋಜನೆ

೯) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ

೧೦) ಜಲರಕ್ಷಣೆ ಕಾರ್ಯಕ್ರಮ ಯೋಜನೆ

೧೧) ಪ್ರಧಾನ ಮಂತ್ರಿಯವರ ಗ್ರಾಮೋದಯ ಯೋಜನೆ

೧೨) ಗ್ರಾಮೀಣ ಆವಾಸ್ ಯೋಜನೆ

೧೩) ಗ್ರಾಮೀಣ ನೀರು ಸರಬರಾಜು ಯೋಜನೆ

೧೪) ಪ್ರಾಥಮಿಕ ಶಿಕ್ಷಣ ಮತ್ತು ಕುಡಿಯುವ ನೀರು ಶೌಚಾಲಯ, ಶಾಲಾಕೊಠಡಿಗಳ ನಿರ್ಮಾಣ ಹಾಗೂ ದುರಸ್ತಿ

೧೫) ಪ್ರಾಥಮಿಕ ಆರೋಗ್ಯ ಶುಶ್ರೂಷೆ

೧೬) ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ

೧೭) ಹೆಚ್ಚುವರಿ ಆಹಾರೋತ್ಪಾದನೆಗೆ ನೂರು ಬಾವಿ ಯೋಜನೆ

೧೮) ಜೀತಮುಕ್ತರ ಪುನರ್ವಸತಿ ಯೋಜನೆ

**II ವಿಶೇಷ ಆರ್ಥಿಕ ಹಾಗೂ ಸ್ವಉದ್ಯೋಗ ಕಾರ್ಯಕ್ರಮಗಳು**

೧) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

೨) ಗ್ರಾಮೀಣ ಪ್ರದೇಶದ ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗ ತರಬೇತಿ

೩) ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು ಕಾರ್ಯಕ್ರಮ

೪) ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಡ್ವಾಕ್ರಾ ಯೋಜನೆ (ಇದು ಐ.ಆರ್.ಡಿ.ಪಿ.ಯ ಯೋಜನೆ)

೫) ಗಂಗಾಕಲ್ಯಾಣ ಯೋಜನೆ

೬) ಸ್ವರ್ಣಜಯಂತಿ, ಗ್ರಾಮ ಸ್ವರೋಜ್‌ಗಾರ್ ಯೋಜನೆ

೭) ಗ್ರಾಮೀಣ ಸಾಮೂಹಿಕ ಗುಂಪು ವಿಮಾ ಯೋಜನೆ

೮) ಬಡತನ ರೇಖೆಯ ಕೆಳಗಿರುವ ಕುಟುಂಬಗಳ ಸಮೀಕ್ಷೆ

೯) ಭಾಗ್ಯಜ್ಯೋತಿ ಕಾರ್ಯಕ್ರಮ

**III ಗ್ರಾಮೀಣ ಇಂಧನ ಕಾರ್ಯಕ್ರಮ (ಆರ್.ಇ.ಪಿ)**

೧) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ

೨) ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ

೩) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ

**IV ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳು**

೧) ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮ

೨) ಪುನಾರಚಿತ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಯೋಜನೆ

೩) ನಿರ್ಮಲ ಕರ್ನಾಟಕ ಯೋಜನೆ

೪) ಸ್ವಚ್ಛ ಗ್ರಾಮ ಯೋಜನೆ

೫) ಆಶ್ರಯ ವಸತಿ ಯೋಜನೆ

೬) ಅಂಬೇಡ್ಕರ್ ವಸತಿ ಯೋಜನೆ

೭) ಗ್ರಾಮಪಂಚಾಯ್ತಿ ವಸತಿ ಯೋಜನೆ

೮) ನವಗ್ರಾಮ ಆಶ್ರಯ ವಸತಿ ಯೋಜನೆ

೯) ವಿಶೇಷ ಉದ್ಯೋಗ ಗುಂಪಿನ ಯೋಜನೆ

೧೦) ಆಶ್ರಯ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಿವೇಶನ ಹಂಚಿಕೆ ಕಾರ್ಯಕ್ರಮ

**ತಾಲೂಕು ಪಂಚಾಯ್ತಿ**

೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯು ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ರಚನೆಗೆ ಅವಕಾಶ ನೀಡಿದೆ. ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಇವು ಆಯಾ ತಾಲೂಕಿನ ನಗರ ಸಭೆ ಪುರಸಭೆಗಳನ್ನು ಹೊರತುಪಡಿಸಿ ಉಳಿದ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿವೆ. ಪ್ರತಿ ತಾಲೂಕು ಪಂಚಾಯ್ತಿಯಲ್ಲಿ ೧೨೧ನೇ ಪ್ರಕರಣದಡಿಯಲ್ಲಿ ನಿರೂಪಿಸಿರುವಂತೆ

ತಾಲೂಕಿನ ಜನಸಂಖ್ಯೆ ಆಧಾರದ ಮೇಲೆ ಪ್ರತಿ ೧೦ ಸಾವಿರ ಜನಸಂಖ್ಯೆ ಇಲ್ಲವೆ ಅದರ ಶೇಷಭಾಗಕ್ಕೆ ಒಬ್ಬ ಸದಸ್ಯರಿರುತ್ತಾರೆ. ಆದರೆ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲೂಕುಗಳಿಗೆ ಕನಿಷ್ಠ ೧೧ ಮಂದಿ ಚುನಾಯಿತ ಸದಸ್ಯರಿರತಕ್ಕದ್ದು. ತಾಲೂಕಿನ ವ್ಯಾಪ್ತಿಯಲ್ಲಿರುವ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಕ್ಷೇತ್ರಗಳನ್ನು ಪೂರ್ಣವಾಗಿ ಇಲ್ಲವೇ ಭಾಗಶಃ ಪ್ರತಿನಿಧಿಸುವ ಚುನಾಯಿತ ಸದಸ್ಯರು, ಆಯಾ ತಾಲೂಕಿನ ಮತದಾರರು ಎಂದು ನೊಂದಾಯಿಸಲ್ಪಟ್ಟ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು ಇದರ ಸದಸ್ಯರಾಗಿರುತ್ತಾರೆ. ಸಮಿತಿಯು ತಾಲೂಕಿನಲ್ಲಿರುವ ಗ್ರಾಮಪಂಚಾಯ್ತಿಗಳ ಐದನೇ ಒಂದು ಭಾಗದಷ್ಟು ಅಧ್ಯಕ್ಷರನ್ನೂ ಸಹ ಸರದಿಯ ಪ್ರಕಾರ ಒಂದು ವರ್ಷದ ಅವಧಿಗೆ ತಾಲೂಕು ಪಂಚಾಯ್ತಿಗೆ ಆಯ್ಕೆ ಮಾಡಲಾಗುತ್ತದೆ. ಸದಸ್ಯ ಸ್ಥಾನಗಳ ಶೇ.೩೦ ರಷ್ಟನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಹಾಗೂ ಒಟ್ಟು ಸ್ಥಾನಗಳ ಪೈಕಿ ೧/೩ರಷ್ಟು ಮಹಿಳೆಯರಿಗೆ ಹಾಗೂ ಹಿಂದುಳಿದವರಿಗೆ ಮೀಸಲಿಡಲಾಗಿದೆ.

ತಾಲೂಕುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಮಾನ್ಯ ಸ್ಥಾಯಿ ಸಮಿತಿ ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸಿಕೊಳ್ಳಬಹುದಾಗಿದೆ. ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಐದು ವರ್ಷಗಳು. ಚುನಾಯಿತ ಸದಸ್ಯರು ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷನಾಗಿ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಈ ಆಯ್ಕೆಯು ಆಗಿಂದಾಗ್ಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ ನಿಯಮಕ್ಕನುಗುಣವಾಗಿರಬೇಕಾಗುತ್ತದೆ. ತಾಲೂಕುಪಂಚಾಯಿತಿಗಳು ಕನಿಷ್ಠ ತಿಂಗಳಿಗೊಮ್ಮೆ ಸಭೆ ಸೇರಿ ತನ್ನ ಕಲಾಪ ನಡೆಸಬೇಕು.

ತಾಲೂಕು ಪಂಚಾಯಿತಿ ಅಧ್ಯಕ್ಷರು ತಾಲೂಕಿನ ಎಲ್ಲ ವಿಧದ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸಿಬ್ಬಂದಿ ಮೇಲ್ವಿಚಾರಣೆ ಹಣಕಾಸಿನ ನಿರ್ವಹಣೆ, ಗೊತ್ತುವಳಿಗಳ ನಿರ್ಣಯ, ಸ್ಥಾಯಿಸಮಿತಿಗಳ ನಿರ್ವಹಣೆ ಮುಂತಾದ ಅಧಿಕಾರಗಳನ್ನು ಹೊಂದಿರುವರು. ಇದರ ಸಿಬ್ಬಂದಿ ವೆಚ್ಚವನ್ನು ಸರ್ಕಾರದ ಅನುದಾನದಿಂದ ಭರಿಸಲಾಗುತ್ತದೆ. ತಾಲೂಕು ಪಂಚಾಯ್ತಿಯು ಕಾಲಕಾಲಕ್ಕೆ ಸರ್ಕಾರ ಸೂಚಿಸುವ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ.

ತಾಲೂಕು ಪಂಚಾಯ್ತಿಗೆ ಸರ್ಕಾರವು ೨೭ ವಿವಿಧ ಕಾರ್ಯಗಳ ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ ಜಿಲ್ಲಾ ಪಂಚಾಯ್ತಿ ಸೂಚಿಸಿದ ವಾರ್ಷಿಕ ಯೋಜನೆಯ ಕರಡು ತಯಾರಿಕೆ ಮತ್ತು ತಾಲೂಕಿನ ಆಯವ್ಯಯ ಪತ್ರ ತಯಾರಿಸುವುದು, ವ್ಯವಸಾಯ ಹಾಗೂ ಅದರ ವಿಸ್ತರಣಾ ಯೋಜನೆಗಳು, ಜಮೀನು ಅಭಿವೃದ್ಧಿ ಹಾಗೂ ಭೂಸಾರ ಸಂರಕ್ಷಣೆ, ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ಪಶುಪಾಲನೆ ಹಾಗೂ ಹೈನು ಅಭಿವೃದ್ಧಿ, ಮೀನುಗಾರಿಕೆ, ಗೃಹ ಕೈಗಾರಿಕೆ, ಗ್ರಾಮೀಣ ವಸತಿ ಯೋಜನೆ, ಗ್ರಾಮಾಂತರ ಕುಡಿಯುವ ನೀರಿನ ಯೋಜನೆ, ಅಸಾಂಪ್ರದಾಯಿಕ ಇಂಧನ ಶಕ್ತಿಯ ಬಳಕೆ, ಗ್ರಾಮೀಣ ನೈರ್ಮಲ್ಯ, ರಸ್ತೆ ಚರಂಡಿಗಳ ನಿರ್ಮಾಣ, ತಾಲೂಕು ಪಂಚಾಯಿತಿಗಳ ಆಸ್ತಿ ನಿರ್ವಹಣೆ ಮತ್ತು ರಕ್ಷಣೆ, ಶಿಕ್ಷಣ (ಪ್ರಾಥಮಿಕ, ಪ್ರೌಢ, ತಾಂತ್ರಿಕ, ವೃತ್ತಿಪರ) ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಚಟುವಟಿಕೆಗಳು, ಸಮಾಜ ಕಲ್ಯಾಣ, ಗ್ರಾಮೀಣ ವಿದ್ಯುದೀಕರಣ ಹಾಗೂ ಸಹಕಾರಿ ಚಟುವಟಿಕೆಗಳು.

## ಗ್ರಾಮಪಂಚಾಯ್ತಿ

ಮಂಡಲ ಪಂಚಾಯ್ತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮಪಂಚಾಯಿತಿಗಳನ್ನು ಪುನ: ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು. ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯ್ತಿಗೆ ಪ್ರಾರಂಭದಲ್ಲಿ ಒಂದು ಲಕ್ಷ ರೂ.ಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು.

## ಜಿಲ್ಲಾ ಪಂಚಾಯತ್, ದಕ್ಷಿಣಕನ್ನಡ

ದಕ್ಷಿಣಕನ್ನಡ ಜಿಲ್ಲಾ ಪಂಚಾಯತ್‌ಯು ೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಂತೆ ೧೯೯೫ರಲ್ಲಿ ಸ್ಥಾಪನೆಗೊಂಡಿತು. ಅಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ತಾಲೂಕುಗಳಿಂದ ೫೫ ಮಂದಿ ಚುನಾಯಿತ ಸದಸ್ಯರಿದ್ದರು. ನಂತರ ೧೯೯೭ರಲ್ಲಿ ಆಡಳಿತ ಹಿತದೃಷ್ಟಿಯಿಂದ ಕುಂದಾಪುರ, ಕಾರ್ಕಳ ಮತ್ತು ಉಡುಪಿ ತಾಲೂಕುಗಳನ್ನೊಳಗೊಂಡ ಉಡುಪಿ ಜಿಲ್ಲೆಯು ಪ್ರತ್ಯೇಕವಾಗಿ

ಅಸ್ತಿತ್ವಗೊಂಡಿತು. ಇಂದಿನ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇರುವ ಐದು ತಾಲೂಕುಗಳೆಂದರೆ, ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು ಹಾಗೂ ಸುಳ್ಯ. ೨೦೦೦ ಇಸವಿಯ ಜೂನ್ ತಿಂಗಳಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಗಳು ನಡೆಸಿದ್ದು, ಆಯ್ಕೆಯಾದ ೩೧ ಸದಸ್ಯರ ಪೈಕಿ ಒಬ್ಬರು ಕರ್ನಾಟಕ ವಿಧಾನಸಭೆ ಸದಸ್ಯರಾಗಿ ೨೦೦೪ ಮೇ ತಿಂಗಳಲ್ಲಿ ಆಯ್ಕೆಗೊಂಡರು. ೨೦೦೪–೦೫ನೇ ಸದಸ್ಯರ ಸಂಖ್ಯೆ ೩೦ ಇದ್ದು, ಸ್ಥಾನಗಳ ಮೀಸಲು ಹಂಚಿಕೆ ವಿವರ ಹೀಗಿತ್ತು.

**ಕೋಷ್ಟಕ ೧೨.೨**

| ಸ್ಥಾನವರ್ಗ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ | ೧೦ | ೬ | ೧೬ |
| ಹಿಂದುಳಿದ ವರ್ಗ ಎ | ೫ | ೩ | ೮ |
| ಹಿಂದುಳಿದ ವರ್ಗ ಬಿ | ೧ | ೧ | ೨ |
| ಅನುಸೂಚಿತ ವರ್ಗ | ೧ | ೧ | ೨ |
| ಅನುಸೂಚಿತ ಜಾತಿ | ೧ | ೧ | ೨ |
| ಒಟ್ಟು | ೧೮ | ೧೨ | ೩೦ |

೩೦ ಚುನಾಯಿತ ಸದಸ್ಯರಲ್ಲದೇ, ಮೂರು ಮಂದಿ ಲೋಕಸಭೆ ಸದಸ್ಯರು, ಒಬ್ಬರು ರಾಜ್ಯಸಭೆ ಸದಸ್ಯರು ಒಂಭತ್ತು ಮಂದಿ ವಿಧಾನಸಭಾಸದಸ್ಯರು ಐದು ಮಂದಿ ವಿಧಾನಪರಿಷತ್ ಸದಸ್ಯರು ಐದು ಮಂದಿ ತಾಲೂಕು ಪಂಚಾಯಿತಿ ಅಧ್ಯಕ್ಷರು ಸದಸ್ಯರಾಗಿದ್ದು, ಒಟ್ಟು ೫೩ ಮಂದಿ ಸದಸ್ಯರಿದ್ದರು. ದಕ್ಷಿಣಕನ್ನಡ ಜಿಲ್ಲಾ ಪಂಚಾಯ್ತಿಯ ಆಶ್ರಯದಲ್ಲಿ ನಡೆಯುವ ಅನೇಕ ಕಾರ್ಯಕ್ರಮ, ಯೋಜನೆಗಳನ್ನು ಜಿಲ್ಲೆಯ ಐದು ತಾಲೂಕು ಪಂಚಾಯ್ತಿಯ ಮತ್ತು ೧೯೯ ಗ್ರಾಮ ಪಂಚಾಯಿತಿಗಳು ಹಲವು ಇಲಾಖೆಗಳ ಮೂಲಕ ನಿರ್ವಹಿಸುತ್ತವೆ. ಹಾಗೂ ಕೆಲವು ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿಯೇ ಕೈಗೊಳ್ಳುತ್ತದೆ. ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಪಾಲಿಕೆ, ಪುರಸಭೆಗಳ ವ್ಯಾಪ್ತಿಯ ಹೊರತಾಗಿ ೭,೯೯,೨೦೫ ಹೆಕ್ಟೇರುಗಳ ಗ್ರಾಮಾಂತರ ಪ್ರದೇಶವಿದೆ. ಜಿಲ್ಲಾ ಪಂಚಾಯ್ತಿಯಲ್ಲಿ ಇರುವ ಐದು ಸ್ಥಾಯಿ ಸಮಿತಿಗಳ ವಿವರ ಹೀಗಿದೆ.

೧) ಸಾಮಾನ್ಯ ಸ್ಥಾಯಿ ಸಮಿತಿ: ಇದು ತನ್ನ ವ್ಯಾಪ್ತಿಯ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ ವ್ಯಾಪ್ತಿ ತೀರ್ಮಾನ ಕೈಗೊಳ್ಳಬಹುದು. ೨) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ: ಇದು ಯೋಜನೆಗಳ ಹಣಕಾಸು, ಲೆಕ್ಕಪತ್ರಗಳ ಪರಿಶೀಲನೆ ಮತ್ತು ತಪಾಸಣೆಯ ನಂತರ ಅನುಮೋದನೆ ಮಾಡಿ ಮಂಜೂರಾತಿ ನೀಡುವುದು. ೩) ಸಾಮಾಜಿಕ ನ್ಯಾಯ ಸಮಿತಿ: ಇದು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಉಸ್ತುವಾರಿ ವಹಿಸುತ್ತದೆ. ೪) ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ: ಇದು ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳ ಉಸ್ತುವಾರಿ ನೋಡಿಕೊಳ್ಳುತ್ತದೆ. ೫) ಕೃಷಿ ಮತ್ತು ಕೈಗಾರಿಕಾ ಸಮಿತಿ: ಜಿಲ್ಲೆಯ ಕೃಷಿ ಮತ್ತು ಕೈಗಾರಿಕೆ ಇಲಾಖೆಗಳ ಉಸ್ತುವಾರಿ ವಹಿಸುತ್ತದೆ. ಈ ಸ್ಥಾಯಿ ಸಮಿತಿಗಳಲ್ಲಿ ಅಧ್ಯಕ್ಷರೂ ಸೇರಿದಂತೆ ಒಟ್ಟು ಏಳು ಮಂದಿ ಸದಸ್ಯರಿರುತ್ತಾರೆ.

೨೦೦೩–೦೪ನೇ ಸಾಲಿನಲ್ಲಿ ದಿ. ೦೫–೦೧–೦೪ರವರೆಗೆ, ಜಿಲ್ಲಾ ಪಂಚಾಯಿತಿಯು ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆ ಹಾಗೂ ಐದು ಸ್ಥಾಯಿ ಸಮಿತಿಗಳ ಸಭೆಗಳೂ ಸೇರಿದಂತೆ ಒಟ್ಟು ೩೩ ಸಭೆಗಳನ್ನು ನಡೆಸಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗುವಂತಹ ನಿರ್ಣಯಗಳನ್ನು ಅಂಗೀಕರಿಸಿರುತ್ತದೆ.

**ಕೋಷ್ಟಕ ೧೨.೩ : ೨೦೦೨–೦೩ ಮತ್ತು ೨೦೦೩–೦೪ನೇ ಸಾಲಿಗೆ ದಕ್ಷಿಣಕನ್ನಡ ಜಿಲ್ಲಾ ಪಂಚಾಯಿತಿಗೆ ಒದಗಿಸಲಾದ ಬಜೆಟ್ ಅನುದಾನದ ವಿವರ**

| ಕ್ರ.ಸಂ | ವಲಯ | ಒದಗಿಸಲಾದ ಅನುದಾನದ ವಿವರ (ಲಕ್ಷ ರೂ.ಗಳಲ್ಲಿ) / ವರ್ಷಗಳು | |
|---|---|---|---|
| | | ೨೦೦೨–೦೩ | ೨೦೦೩–೦೪ |
| ೧ | ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ | ೭೭,೭೬೦ | ೭೭,೭೬೦ |
| ೨ | ವಯಸ್ಕರ ಶಿಕ್ಷಣ | – | – |
| ೩ | ಯುವಜನ ಸೇವೆ ಮತ್ತು ಕ್ರೀಡೆ | ೧೮,೭೮೦ | ೧೮,೭೮೦ |
| ೪ | ವೈದ್ಯಕೀಯ ಮತ್ತು ಜನಾರೋಗ್ಯ ಸೇವೆಗಳು | ೮೬.೮೮೦ | ೮೬.೮೮೦ |
| ೫ | ಭಾರತೀಯ ವೈದ್ಯಕೀಯ ಪದ್ಧತಿ | ೪.೦೧೦ | ೪.೦೧೦ |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೪೩೩.೨೦೦ | ೫೦೮.೨೦೦ |
| ೭ | ಗ್ರಾಮೀಣ ನೀರು ಪೂರೈಕೆ | ೬೧೧.೧೯೦ | ೬೧೧.೧೯೦ |
| ೮ | ಸಮಾಜಕಲ್ಯಾಣ (ಪ.ಜಾ/ಪ.ವರ್ಗದ್ದು) | ೧೦೦.೩೦೦ | ೧೦೭.೦೫೦ |
| ೯ | ವಿಶೇಷ ಘಟಕ ಯೋಜನೆ | ೧೧೯.೬೦೦ | ೧೧೯.೬೦೦ |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | ೩೦.೧೬೦ | ೩೦.೧೬೦ |
| ೧೧ | ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ | ೪೮೦.೮೦೦ | ೪೮೦.೮೦೦ |
| ೧೨ | ಪೌಷ್ಠಿಕ ಆಹಾರ | ೧೯೬.೨೫೦ | ೧೯೬.೨೫೦ |
| ೧೩ | ಕೃಷಿ | ೧೬.೧೩೦ | ೧೬.೧೩೦ |
| ೧೪ | ತೋಟಗಾರಿಕೆ | ೧೧.೩೧೦ | ೧೧.೩೧೦ |
| ೧೫ | ಪಶುಸಂಗೋಪನೆ | ೩೪.೧೮೦ | ೩೪.೧೮೦ |
| ೧೬ | ಮೀನುಗಾರಿಕೆ | ೫.೫೮೦ | ೫.೫೮೦ |
| ೧೭ | ಅರಣ್ಯ | ೨೭.೫೦೦ | ೨೭.೫೦೦ |
| ೧೮ | ಸಹಕಾರ | ೩.೪೯೦ | ೩.೪೯೦ |
| ೧೯ | ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | ೧೨೦೬.೩೫೦ | ೧೩೩೮.೨೬೦ |
| ೨೦ | ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ | ೧೩೦.೫೧೦ | ೧೩೦.೫೧೦ |
| ೨೧ | ಸಣ್ಣ ನೀರಾವರಿ | ೩೮.೦೨೦ | ೩೮.೦೨೦ |
| ೨೨ | ಗ್ರಾಮೋದ್ಯಮ ಮತ್ತು ಚಿಕ್ಕಪುಟ್ಟ ಉದ್ಯಮಗಳು | ೩.೮೮೦ | ೩.೮೮೦ |
| ೨೩ | ರೇಷ್ಮೆ | ೬.೧೭೦ | ೬.೧೭೦ |
| ೨೪ | ರಸ್ತೆ ಮತ್ತು ಸೇತುವೆ | ೬೫.೪೬೦ | ೬೫.೪೬೦ |
| ೨೫ | ಸಚಿವಾಲಯ ಆರ್ಥಿಕ ಸೇವೆ | ೨.೮೮೦ | ೨.೮೮೦ |
| ೨೬ | ಗಿರಿಜನ ಉಪಯೋಜನೆ | ೨೭೭.೪೫೦ | ೨೭೭.೪೫೦ |
| ೨೭ | ಕೈಮಗ್ಗ ಮತ್ತು ಜವಳಿ | ೦.೭೮೦ | ೦.೭೮೦ |
| ೨೮ | ವಿಜ್ಞಾನ ಮತ್ತು ತಂತ್ರಜ್ಞಾನ | ೨.೫೨೦ | ೨.೫೨೦ |
| | ಒಟ್ಟು | ೩೯೯೧.೧೪೦ | ೪೨೦೪.೮೦೦ |

**ಮೂಲ:** ವಾರ್ಷಿಕ ಆಡಳಿತ ವರದಿ ಜಿ.ಪಂ.ದ.ಕ.

**ಕೋಷ್ಟಕ ೧೨.೪**

**ಜಿಲ್ಲಾಪಂಚಾಯತಿಯಲ್ಲಿ ೨೦೦೨–೦೩ ಮತ್ತು ೨೦೦೩–೦೪ನೇ ಸಾಲಿನ ಯೋಜನಾ ವೆಚ್ಚಗಳ ವಲಯವಾರು ವಿಂಗಡಣೆ**

| ಕ್ರ.ಸಂ. | ವಿವರ | ವರ್ಷ (ಲಕ್ಷ ರೂ.ಗಳಲ್ಲಿ) | |
|---|---|---|---|
| | | ೨೦೦೨–೦೩ | ೨೦೦೩–೦೪ |
| ೧) | ಜಿಲ್ಲಾ ಪಂಚಾಯತ್ ಕಾರ್ಯಕ್ರಮ | ೨೦೩೪.೪೯ | ೨೦೫೯.೯೫ |
| ೨) | ತಾಲೂಕು ಪಂಚಾಯತ್ ಕಾರ್ಯಕ್ರಮ | ೧೩೭೫.೫೯ | ೧೩೭೭.೮೫ |
| ೩) | ಗ್ರಾಮ ಪಂಚಾಯತ್ ಕಾರ್ಯಕ್ರಮ | ೫೮೧.೦೬ | ೭೬೭.೦೦ |
| | ಒಟ್ಟು | **೩೯೯೧.೧೪** | **೪೨೦೪.೮೦** |

**ಮೂಲ** : ವಾರ್ಷಿಕ ಆಡಳಿತ ವರದಿ ಜಿ.ಪಂ.ದ.ಕ.

**ಕೋಷ್ಟಕ ೧೨.೫ : ದಕ್ಷಿಣಕನ್ನಡ ಜಿಲ್ಲಾ ಪಂಚಾಯಿತಿಯ ೨೦೦೨–೦೩ ಮತ್ತು ೨೦೦೩–೦೪ನೇ ಸಾಲಿನ ಜಮಾ ಮತ್ತು ಖರ್ಚಿನ ವಿವರ**

( ರೂ.ಗಳಲ್ಲಿ)

| ವಿವರ | ಜಿಲ್ಲಾ ಪಂಚಾಯ್ತಿಯ ಸಾಮಾನ್ಯ ರೆವಿನ್ಯೂ ಹಾಗೂ ಸರಕಾರ ನೀಡಿದ ಅನುದಾನ | | ಅಸಾಧಾರಣ ಸಾಲ ಮತ್ತು ಸಸ್ಪೆನ್ಸ್ ಶೀರ್ಷಿಕೆ | | ಒಟ್ಟು | |
|---|---|---|---|---|---|---|
| | ೨೦೦೨–೦೩ | ೨೦೦೩–೦೪ | ೨೦೦೨–೦೩ | ೨೦೦೩–೦೪ | ೨೦೦೨–೦೩ | ೨೦೦೩–೦೪ |
| ಆರಂಭ ಶಿಲ್ಕು | ೨೭೪೧೯೮೧೧೦೦ | ೩೫೭೦೯೮೧೪೫೩ | –೨೫೬೧೪೪೩೬೩೬ | –೩೪೨೭೭೦೦೩೬೬ | –೧೮೦೫೩೭೪೬೪ | ೧೪೩೨೮೧೦೮೭ |
| ಆದಾಯ | ೧೫೩೨೦೫೧೦೮೩ | ೧೪೦೪೧೪೯೪೩೯ | ೧೭೨೭೫೪೧೦೦ | –೧೧೪೭೨೧೭೭೩ | ೧೭೦೪೮೦೫೧೮೩ | ೧೫೧೮೮೭೧೨೧೨ |
| ಒಟ್ಟು | ೪೨೭೪೦೩೨೧೮೩ | ೪೯೭೫೧೩೦೮೯೨ | –೨೩೮೮೬೮೯೫೩೬ | –೩೩೧೨೯೭೮೫೯೩ | ೧೮೮೫೩೪೨೬೪೭ | ೧೬೬೨೧೫೨೨೯೯ |
| ಖರ್ಚು | ೭೦೩೦೫೦೭೩೦ | ೫೯೭೪೬೫೬೮೬ | ೧೦೩೯೦೧೦೮೩೦ | ೯೮೭೦೪೬೦೦೭ | ೧೭೪೨೦೬೧೫೬೦ | ೧೫೮೪೫೧೧೬೯೩ |
| ಅಂತಿಮ ಶಿಲ್ಕು | ೩೫೭೦೯೮೧೪೫೩ | ೪೩೭೦೬೬೫೨೦೬ | –೩೪೨೭೭೦೦೩೬೬ | –೪೩೦೦೦೨೪೬೦೦ | ೧೪೩೨೮೧೦೮೭ | ೭೭೬೪೦೬೦೬ |

**ಮೂಲ** : ವಾರ್ಷಿಕ ಆಡಳಿತ ವರದಿ, ಜಿ.ಪಂ., ದ.ಕ.

**ಕೋಷ್ಟಕ ೧೨.೬**

**ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತ್‌ಗಳ ೨೦೦೩–೦೪ನೇ ಸಾಲಿನ ಜಮಾ–ಖರ್ಚಿನ ವಿವರ**

| ಜಮೆಯ ವಿವರ | ಮೊತ್ತ (ರೂ.) | ಖರ್ಚಿನ ವಿವರ | ಮೊತ್ತ (ರೂ.) |
|---|---|---|---|
| ಆರಂಭ ಶಿಲ್ಕು | ೧೫೧೮೫೩೩೦ | ವಿದ್ಯುತ್ ವೆಚ್ಚ | ೧೮೪೫೫೭೭ |
| ತಲಾನುದಾನ | ೪೫೯೫೦೬೨೬ | ಚುನಾಯಿತ ಸದಸ್ಯರ ವೇತನ | ೭೧೭೯೦ |
| ಕಂದಾಯ ವಸೂಲಿ | ೫೫೫೪೨೮ | ಸಿಬ್ಬಂದಿ ವೇತನ | ೯೭೭೯೪೯ |
| ಮತ್ತು ಇತರ ಜಮೆ | | ಸಭಾ ಖರ್ಚು ಮತ್ತು ಸಾದಿಲ್ವಾರು | ೩೨೯೯ |
| | | ಕಾಮಗಾರಿ ಮತ್ತು ಇತರ | ೫೩೬೦೦೮೫೭ |
| ಒಟ್ಟು ವೆಚ್ಚ | ೫೬೪೯೯೨೭೨ | ಅಂತಿಮ ಶಿಲ್ಕು | ೫೧೨೧೧೨ |
| ಒಟ್ಟು | ೬೧೬೯೧೩೮೪ | ಒಟ್ಟು | ೬೧೬೯೧೩೮೪ |

**ಕೋಷ್ಟಕ ೧೨.೭**

**ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ ೨೦೦೩-೦೪ನೇ ಸಾಲಿನ ಜಮೆಯ ವಿವರ**

(ರೂ.ಗಳಲ್ಲಿ)

| ಕ್ರಮ ಸಂಖ್ಯೆ | ತಾಲೂಕು | ಆರಂಭ ಶಿಲ್ಕು | ತಲಾನುದಾನ | ಕಂದಾಯ ಮತ್ತು ಇತರೆ | ಒಟ್ಟು |
|---|---|---|---|---|---|
| ೧ | ಬಂಟ್ವಾಳ | ೪೧೩೪೪೯೪ | ೧೧೧೨೨೯೮೪ | ೨೫೭೦೨ | ೧೫೨೮೩೧೮೦ |
| ೨ | ಬೆಳ್ತಂಗಡಿ | ೪೫೯೮೦೩ | ೯೧೯೧೫೭೮ | ೧೦೫೬೦೦ | ೯೭೫೬೯೮೧ |
| ೩ | ಮಂಗಳೂರು | ೫೨೫೨೫೬೬ | ೧೧೭೭೦೬೮೪ | ೩೮೬೭ | ೧೭೦೨೭೧೧೭ |
| ೪ | ಪುತ್ತೂರು | ೩೫೧೯೦೮೩ | ೮೩೭೧೯೯೨ | – | ೧೨೩೧೧೩೩೪ |
| ೫ | ಸುಳ್ಯ | ೧೮೧೯೩೮೪ | ೫೪೯೩೩೮೮ | – | ೭೩೧೨೭೭೨ |
| | ಒಟ್ಟು | ೧೫೧೮೫೩೩೦ | ೪೫೯೫೦೬೨೬ | ೫೫೫೪೨೮ | ೬೧೬೯೧೩೮೪ |

**ಕೋಷ್ಟಕ ೧೨.೮**

**ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯ ಗ್ರಾಮಪಂಚಾಯತ್‌ಗಳ ೨೦೦೩-೦೪ನೇ ಸಾಲಿನ ಖರ್ಚಿನ ವಿವರ. (ರೂ.ಗಳಲ್ಲಿ)**

| ಕ್ರ.ಸಂ | ತಾಲೂಕು | ವಿದ್ಯುತ್ ವೆಚ್ಚ | ಚುನಾಯಿತ ಸದಸ್ಯರ ಮತ್ತು ಸಿಬ್ಬಂದಿ ವಿಚ್ಚ | ಸಭಾ ಖರ್ಚು ಮತ್ತು ಸಾದಿಲ್ವಾರು | ಇತರ ಕಾಮಗಾರಿ | ಒಟ್ಟು ಖರ್ಚು |
|---|---|---|---|---|---|---|
| ೧ | ಬಂಟ್ವಾಳ | ೧೬೬೩೯೬ | ೩೪೧೭೧೬ | ೩೨೯೯ | ೧೩೦೧೪೦೪೮ | ೧೩೫೨೫೯೯೯ |
| ೨ | ಬೆಳ್ತಂಗಡಿ | ೪೦೪೦೨೪ | ೬೦೯೮೬ | – | ೯೮೭೨೭೬೬ | ೧೦೩೩೭೭೭೬ |
| ೩ | ಮಂಗಳೂರು | ೧೧೫೦೦೪೪ | ೩೪೪೪೦೦ | – | ೧೩೨೨೭೫೩೯ | ೧೪೭೨೧೯೮೩ |
| ೪ | ಪುತ್ತೂರು | ೯೫೯೯೩ | ೨೯೩೩೮೨ | – | ೧೦೮೨೯೫೧೪ | ೧೧೨೧೮೮೮೯ |
| ೫ | ಸುಳ್ಯ | ೨೮೫೮೦ | ೯೦೫೫ | – | ೬೬೫೬೯೯೦ | ೬೬೯೪೬೨೫ |
| | ಒಟ್ಟು | ೧೮೪೫೫೭೭ | ೧೦೪೯೫೩೯ | ೩೨೯೯ | ೫೩೬೦೦೮೫೭ | ೫೬೪೯೯೨೭೨ |

ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಯೋಜಿಸಿ, ಆರ್ಥಿಕ ನೆರವು ಹಾಗೂ ಅನುದಾನ ನೀಡುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುಮೋದನೆಗೊಂಡ ಈ ಕೆಳಗೆ ನೀಡಲಾದ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯಿತಿ ಹಣ ಸಹಾಯ ಒದಗಿಸಿ ಮೇಲ್ವಿಚಾರಣೆ ಕೈಗೊಳ್ಳುತ್ತದೆ.

೧)ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆ ೨) ಸ್ವರ್ಣ ಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆ ೩) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ೪) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ ೫) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ೬) ಇಂದಿರಾ ಆವಾಸ್ ಯೋಜನೆ ೭) ಅಂಬೇಡ್ಕರ್ ಅವಾಸ್ ಯೋಜನೆ ೮) ಆಶ್ರಯ ನಿವೇಶನ ಯೋಜನೆ, ೯) ಉದ್ಯೋಗ ಭರವಸೆ ಯೋಜನೆ, ೧೦) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಯೋಜನೆ (ಐ.ಆರ್.ಇ.ಪಿ) ೧೧) ಸುಧಾರಿತ ಅಸ್ತ್ರ ಒಲೆ ಯೋಜನೆ, ೧೨) ಜೈವಿಕ ಅನಿಲ ಯೋಜನೆ, ೧೩) ಗ್ರಾಮೀಣ ಸಾಮೂಹಿಕ ವಿಮಾ ಯೋಜನೆ ೧೪) ಸ್ವಸ್ತಿ ಗ್ರಾಮ ಯೋಜನೆ ೧೫) ನಿರ್ಮಲ ಗ್ರಾಮ ಯೋಜನೆ ೧೬) ನವಗ್ರಾಮ ಯೋಜನೆ ೧೭) ಕುಟೀರ ಜ್ಯೋತಿ ಯೋಜನೆ ೧೮) ನೆರಳಿನ ಭಾಗ್ಯ ಯೋಜನೆ.

**ಕೋಷ್ಟಕ ೧೨.೯**

**೨೦೦೪ರ ಏಪ್ರಿಲ್ ಪ್ರಾರಂಭದಿಂದ ಮಾರ್ಚ್ ೨೦೦೫ರವರೆಗಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳ ಪ್ರಗತಿ ವಿವರ**

(ಲಕ್ಷ ರೂ.ಗಳಲ್ಲಿ)

| ಕ್ರಸಂ. | ಯೋಜನೆಗಳು | ಲಭ್ಯವಿರುವ ಸಂಪನ್ಮೂಲ | ಖರ್ಚು ಮಾಡಿದ ಮೊತ್ತ | ಖರ್ಚು |
|---|---|---|---|---|
| ೧ | ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ | ೮೮೧.೨೩೦ | ೮೬೦.೨೧೪ | ೯೭.೬೨ |
| ೨ | ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ | ೧೧೩.೯೯೭ | ೧೧೩.೯೫೩ | ೯೯.೯೭ |
| ೩ | ಇಂದಿರಾ ಅವಾಸ್ ಯೋಜನೆ | ೩೩೭.೮೯೫ | ೩೦೬.೨೭೯ | ೯೦.೬೪ |
| ೪ | ಗ್ರಾಮೀಣ ಆವಾಸ್ ಯೋಜನೆ | ೩೪.೩೩೮ | ೨೯.೦೩೯ | ೮೪.೫೭ |
| ೫ | ಕೆರೆಗಳ ಹೂಳೆತ್ತುವ ಯೋಜನೆ | ೧೩೦.೦೦೦ | ೧೨೪.೭೨೦ | ೯೫.೯೪ |
| ೬ | ರಸ್ತೆ ಮತ್ತು ಸೇತುವೆ | ೩೧.೯೪೦ | ೩೧.೮೫೦ | ೯೯.೭೨ |
| ೭ | ಸಣ್ಣ ನೀರಾವರಿ ಯೋಜನೆ | ೩೨.೫೭೦ | ೨೦.೩೦೦ | ೬೨.೩೩ |
| ೮ | ಆಶ್ರಯ ಯೋಜನೆ | ೧೬೭.೦೦೦ | ೧೧೨.೩೩೦ | ೬೭.೨೬೩ |
| ೯ | ಅಂಬೇಡ್ಕರ್ ಯೋಜನೆ | ೧೩.೦೦೦ | ೯.೩೭೫ | ೭೦.೦೦೦ |
| ೧೦ | ಬುಡಕಟ್ಟು ವಸತಿ ಯೋಜನೆ | ೩೫.೮೦೦ | ೩೩.೮೭೦ | ೯೪.೬೧ |
| ೧೧ | ನೆರಳಿನ ಭಾಗ್ಯ | ೧೪.೭೫೦ | ೧೩.೬೨೦ | ೯೨.೩೪ |
| ೧೨ | ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (೨ನೇ ಹಂತ) | ೫೭೭.೫೬೦ | ೫೭೧.೮೧೭ | ೯೯.೦೧ |

**ಮೂಲ** : ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ

**ಕೋಷ್ಟಕ ೧೨.೧೦**

**ದಕ್ಷಿಣಕನ್ನಡ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳ ಪ್ರಗತಿ ವಿವರ ೨೦೦೨–೨೦೦೩ ಮತ್ತು ೨೦೦೩–೨೦೦೪**

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ಯೋಜನೆ | ಖರ್ಚು ಮಾಡಿದ ಮೊತ್ತ | |
|---|---|---|---|
| | | ೨೦೦೨–೦೩ | ೨೦೦೩–೦೪ |
| ೧ | ಮಹಿಳಾ ಕಲ್ಯಾಣ ಕೇಂದ್ರಗಳು | ೨.೩೪ | ೨.೯೦ |
| ೨ | ಆಶ್ರಮ ಶಾಲೆಗಳು | ೧೩.೮೪ | ೧೭.೪೧ |
| ೩ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | ೮೧.೧೯ | ೯೨.೮೨೨ |
| ೪ | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು | ೧೧.೨೪ | ೭.೧೨ |
| ೫ | ನವೋದಯ ಮಾದರಿ ಶಾಲೆ | ೧೧.೨೩ | ೧೧.೨೩ |
| ೬ | ಮೊರಾರ್ಜಿ ದೇಸಾಯಿ ವಸತಿ ಶಾಲೆ | ೩೯.೮೩ | ೨೭.೨೩೮ |
| ೭ | ವಿದ್ಯಾರ್ಥಿ ವೇತನ/ಬಹುಮಾನ | ೬೭.೧೩ | ೧೦೦.೩೧೦ |
| ೮ | ಹೊಲಿಗೆ ತರಬೇತಿ ಕೇಂದ್ರ | ೧.೯೬ | ೧.೪೧೩ |
| ೯ | ಕಟ್ಟಡ ನಿರ್ಮಾಣ | ೬.೧೩ | ೨.೯೭೫೯ |
| ೧೦ | ಅಸ್ಪೃಶ್ಯತಾ ನಿವಾರಣೆ ಯೋಜನೆ | ೨.೫೫ | ೦.೭೫ |

**ಮೂಲ** : ವಾರ್ಷಿಕ ವರದಿಗಳು, ಜಿಲ್ಲಾ ಪಂಚಾಯತ್ ದಕ್ಷಿಣಕನ್ನಡ ಜಿಲ್ಲೆ

**ಕೋಷ್ಟಕ ೧೭.೧೧ : ದಕ್ಷಿಣಕನ್ನಡ ಜಿಲ್ಲಾ ಪಂಚಾಯತಿಯ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ೨೦೦೨–೦೩ ಮತ್ತು ೨೦೦೩–೦೪ನೇ ಸಾಲಿನ ಯೋಜನೆಗಳ ಪ್ರಗತಿ ವಿವರ**

**(ಹಣ ಬಿಡುಗಡೆ ಲಕ್ಷ ರೂ.ಗಳಲ್ಲಿ)**

| ಕ್ರ.ಸಂ. | ಯೋಜನೆಗಳು | ೨೦೦೨–೦೩ | ೨೦೦೩–೦೪ |
|---|---|---|---|
| ೧ | ವಿದ್ಯಾರ್ಥಿನಿಲಯಗಳ ನಿರ್ವಹಣೆ | ೧೭೨.೦೮೬ | ೧೫೬.೬೮೦ |
| ೨ | ಕಟ್ಟಡ ನಿರ್ಮಾಣ | ೨.೦೯೫ | ೯.೬೨೫ |
| ೩ | ವಿದ್ಯಾರ್ಥಿ ವೇತನ/ಪ್ರೋತ್ಸಾಹ ಧನ | ೧೮.೩೧೦ | ೨೨.೧೯೧ |
| ೪ | ಹೊಲಿಗೆ ತರಬೇತಿ ಕೇಂದ್ರ | ೩.೩೬೦ | ೩.೨೭೦ |
| ೫ | ಆಶ್ರಮ ಶಾಲೆ | ೨.೭೩೦ | ೩.೨೧೦ |
| ೬ | ಶುಲ್ಕ ವಿನಾಯಿತಿ | ೨೧.೧೦೦ | ೧೩.೭೮೦ |
| ೭ | ವಿದ್ಯಾರ್ಥಿನಿಲಯಗಳಲ್ಲಿ ಸುಧಾರಣೆ/ಸಂಖ್ಯಾಬಲ ಹೆಚ್ಚಳ | ೭.೯೦೦ | ೧೨.೮೯೮ |
| ೮ | ಅನಾಥಾಲಯಗಳ ನಿರ್ವಹಣೆ | ೧೪.೧೬೬ | ೧.೫೧೦ |

**ಮೂಲ** : ವಾರ್ಷಿಕ ವರದಿ, ಜಿಲ್ಲಾ ಪಂಚಾಯತ್, ದಕ್ಷಿಣಕನ್ನಡ ಜಿಲ್ಲೆ

## ಗ್ರಾಮೀಣ ನೀರು ಸರಬರಾಜು

ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಪೂರೈಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಗ್ರಾಮೀಣ ನೀರು ಪೂರೈಕೆಯ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ ವಿಭಾಗಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಸ್ತುತ ಈ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತಿಗಳು ನಿರ್ವಹಿಸುತ್ತಿವೆ. ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯ ವಲಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರ ವಲಯ) ಎಂಬ ವಲಯಗಳನ್ನಾಗಿ ವಿಭಾಗಿಸಲಾಗಿದೆ. ಈ ಪ್ರಮುಖ ಯೋಜನೆಗಳಲ್ಲದೇ ಜಿಲ್ಲಾ ಕಿರುನೀರು ಸರಬರಾಜು ಯೋಜನೆ, ತೆರೆದ ಬಾವಿ ಯೋಜನೆ ಮುಂತಾದ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ/ವರ್ಗಗಳ ವಸತಿ ಪ್ರದೇಶಗಳಿಗೆ ಪ್ರತ್ಯೇಕ ಕುಡಿಯುವ ನೀರಿನ ಯೋಜನೆಗಳನ್ನು ವಿಶೇಷ ಘಟಕ ಯೋಜನೆಗಳಾಗಿ ಅಳವಡಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಮೂಲಕ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಕೊಳಾಯಿಗಳ ಮೂಲಕ ಒದಗಿಸಲಾಗುತ್ತಿದೆ. ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಿಗೆ ಕೊಳಾಯಿ ನೀರು ಸರಬರಾಜು ಯೋಜನೆಗಳನ್ನು ನೀರಿನ ಕೊರತೆ ಇರುವ ಎಲ್ಲಾ ಗ್ರಾಮಗಳಿಗೆ ಕೈಪಂಪಿನೊಂದಿಗೆ ಕೊಳವೆ ಬಾವಿಗಳನ್ನು ಒದಗಿಸಿಕೊಡುವುದು ಸರ್ಕಾರದ ನೀತಿಯಾಗಿದೆ. ಪ್ರತಿ ೨೫೦ ಜನರಿಗೆ ಕೈಪಂಪಿನೊಂದಿಗೆ ಒಂದು ಕೊಳವೆ ಬಾವಿಯನ್ನು ಒದಗಿಸುವುದು ಭಾರತ ಸರ್ಕಾರದ ನೀತಿಯಾಗಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ಕೈಗೊಂಡಿದ್ದು, ೧೯೭೮ರಿಂದ ಭಾರತ ಸರ್ಕಾರದ ನೆರವೂ ಸಹ ದೊರೆತಿದೆ. ಪ್ರಾರಂಭದಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ನೀರು ಸರಬರಾಜು ವೆಚ್ಚವನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಅಂದರೆ ಗ್ರಾಮ ಪಂಚಾಯ್ತಿಯ ಕ್ರಮವಾಗಿ ಶೇ.೫೦–೪೦–೧೦ ರಂತೆ ಹಂಚಿಕೊಳ್ಳಬೇಕಾಗಿತ್ತು. ಈಗ ಈ ಮೊಬಲಗು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಭರಿಸಲ್ಪಡುತ್ತದೆ. ಕೈಪಂಪುಗಳ ದುರಸ್ತಿ ಮತ್ತು ಕೊಳಾಯಿ ನೀರು ಸರಬರಾಜು ಯೋಜನೆಗಳನ್ನು ನೋಡಿಕೊಳ್ಳುವ ಸಲುವಾಗಿ ಸರ್ಕಾರವು ನಿರ್ವಾಹಕ ಘಟಕಗಳನ್ನು ಸಹ ಸ್ಥಾಪಿಸಿದೆ. ಪ್ರಸ್ತುತ ಪ್ರತಿಯೊಂದು ಜಿಲ್ಲೆಯಲ್ಲೂ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ವಿಭಾಗವು (ಪಿ.ಎಚ್.ಇ.) ಕಾರ್ಯನಿರ್ವಹಿಸುತ್ತಿದೆ.

ದಕ್ಷಿಣಕನ್ನಡ ಜಿಲ್ಲಾ ಪಂಚಾಯ್ತಿಯ ವ್ಯಾಪಿಯಲ್ಲಿ ಇಂಜಿನಿಯರಿಂಗ್ ವಿಭಾಗವು ೩೧-೦೩-೨೦೦೪ರವರೆಗೆ ಸಾಧಿಸಿದ ಕುಡಿಯುವ ನೀರಿನ ಯೋಜನೆಗಳ ಪ್ರಗತಿಯು ಕೆಳಕಂಡಂತಿದೆ.

**ಕೋಷ್ಟಕ ೧೨.೧೨**

| ಕ್ರಸಂ | ವಿವರ | ವರ್ಷ | |
|---|---|---|---|
| | | ೩೧-೦೩-೨೦೦೪ರವರೆಗೆ | ೨೦೦೩-೦೪ ವರ್ಷದಲ್ಲಿ |
| ೧ | ರಾಷ್ಟ್ರೀಯ ನೀರು ಸರಬರಾಜು ಯೋಜನೆಗಳು | ೨೮೪ | ೩ |
| ೨ | ಕೇಂದ್ರ ಪುರಸ್ಕೃತ ತ್ವರಿತ ನೀರು ಸರಬರಾಜು ಯೋಜನೆ | ೨೮೫ | – |
| ೩ | ಕಿರು ನೀರು ಸರಬರಾಜು ಯೋಜನೆ | ೬೮೧ | ೧೬ |
| ೪ | ಕೊಳವೆ ಬಾವಿಗಳು | ೬೧೬೩ | ೪೬ |
| ೫ | ಕಿಂಡಿ ಅಣೆಕಟ್ಟು | ೩೯೨ | – |
| ೬ | ಉಪ್ಪುನೀರು ತಡೆ ಅಣೆಕಟ್ಟು | ೮೬ | – |
| ೭ | ನೀರಾವರಿ ಕೆರೆಗಳು | ೧೦೫ | – |

**ಮೂಲ** : ಆಡಳಿತ ವರದಿ, ಜಿ.ಪಂ.ದ.ಕ.

**ಕೋಷ್ಟಕ ೧೨.೧೩**

**೨೦೦೨-೦೩ ಮತ್ತು ೨೦೦೩-೦೪ರ ವರ್ಷದಲ್ಲಿನ ಅನುದಾನದಲ್ಲಿ ಕೈಗೊಳ್ಳಲಾದ ಪಿ.ಎಚ್.ಇ. ಕಾಮಗಾರಿಗಳ ಸಂಖ್ಯೆ**

| ಸಂಖ್ಯೆ | ವಿವರ | ವರ್ಷ | |
|---|---|---|---|
| | | ೨೦೦೨-೦೩ | ೨೦೦೩-೦೪ |
| ೧ | ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ | ೨೬ | ೧೦ |
| ೨ | ಚಿಕ್ಕ ನೀರು ಸರಬರಾಜು ಯೋಜನೆ (ರಾಜ್ಯ) | ೧೮ | ೨೪ |
| ೩ | ಕೊಳವೆ ಬಾವಿಗಳು (ರಾಜ್ಯ) | ೧೮ | ೬ |
| ೪ | ವಿಶೇಷ ಘಟಕ ಯೋಜನೆ ಕೊಳವೆಬಾವಿ | ೮ | ೧೩ |
| ೫ | ಕೊಳವೆ ನೀರು ಪೂರೈಕೆ ಯೋಜನೆಗಳು | ೧೫ | ೭ |
| ೬ | ಕಿರುನೀರು ಸರಬರಾಜು ಯೋಜನೆ (ವಿ.ಘ.ಯೋ) | ೧೩ | ೭ |
| ೭ | ಕೊಳವೆ ನೀರು ಪೂರೈಕೆ ಹೆಚ್ಚಳ | ೩ | ೪ |
| ೮ | ಸಣ್ಣ ನೀರು ಸರಬರಾಜು ಯೋಜನೆ ಪುನಶ್ಚೇತನ | ೧೬ | ೧೨ |
| ೯ | ಕೊಳವೆ ಬಾವಿ ಪುನಶ್ಚೇತನ | ೧೮ | ೩ |
| ೧೦ | ಕೊಳವೆ ಬಾವಿ ಪುನಶ್ಚೇತನ | ೧೪ | ೪ |
| ೧೧ | ಗಿರಿಜನ ಉಪಯೋಜನೆ ಕಿರುನೀರು ಸರಬರಾಜು (ರಾಜ್ಯ) | ೧೨ | ೧೭ |
| ೧೨ | ನೀರು ಸರಬರಾಜು ಯೋಜನೆ (ಕೇಂದ್ರ) | – | ೩೫ |
| ೧೩ | ಕೊಳವೆ ಬಾವಿಗಳು (ಕೇಂದ್ರ) | – | ೨೯ |

**ಮೂಲ:** ವಾರ್ಷಿಕ ಆಡಳಿತ ವರದಿ ಜಿ.ಪಂ.ದ.ಕ.,

## ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ (ವಿಶ್ವ ಬ್ಯಾಂಕ್ ಯೋಜನೆ)

ಕರ್ನಾಟಕ ಸರ್ಕಾರವು ಕರ್ನಾಟಕದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗೆ ೪೪೭.೨೦ ಕೋಟಿ ರೂ.ಗಳ ಸಾಲವನ್ನು ಜಾಗತಿಕ ಬ್ಯಾಂಕ್‌ನಿಂದ ಪಡೆದಿದ್ದು, ಈ ಯೋಜನೆಯು ೧೨೦೦ ಹಳ್ಳಿಗಳನ್ನು ಒಳಗೊಂಡಿದೆ. ಈ ಯೋಜನೆಯ ಮೊದಲನೇ ಹಂತದಲ್ಲಿ ೨೫೦ ಹಳ್ಳಿಗಳು ಮತ್ತು ಎರಡನೇ ಹಂತದಲ್ಲಿ ೯೫೦ ಹಳ್ಳಿಗಳು ಸೇರಿವೆ. ಈ ಹಳ್ಳಿಗಳನ್ನು ಕರ್ನಾಟಕದ ಈ ಕೆಳಗಿನ ೧೨ ಜಿಲ್ಲೆಗಳಿಂದ ಆಯ್ಕೆ ಮಾಡಲಾಗಿದೆ. ಜಿಲ್ಲೆಗಳು ೧. ಬೆಂಗಳೂರು (ಗ್ರಾ), ೨. ಮಂಡ್ಯ, ೩)ಮೈಸೂರು, ೪)ದಕ್ಷಿಣ ಕನ್ನಡ, ೫) ಶಿವಮೊಗ್ಗ, ೬) ಬೆಳಗಾಂ, ೭) ಬಳ್ಳಾರಿ, ೮) ರಾಯಚೂರು, ೯) ಗುಲಬರ್ಗಾ, ೧೦) ಬೀದರ್, ೧೧)ತುಮಕೂರು, ೧೨) ಹಾಸನ

ಈ ಜಿಲ್ಲೆಗಳಲ್ಲಿಯ ಹಳ್ಳಿಗಳನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಮಾನದಂಡಗಳನ್ನನುಸರಿಸಲಾಗುತ್ತದೆ.

೧. ತೀವ್ರವಾದ ನೀರಿನ ಕೊರತೆ ಇರುವ ಹಳ್ಳಿಗಳು

೨. ನಾರು ಹುಣ್ಣಿನ ಹುಳು, ಫ್ಲೂರೋಸಿಸ್, ಹೆಪಟೈಟಸ್, ಕಾಲರಾ, ಜಠರ–ಕರಳುಬೇನೆಯಂತಹ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ಹಳ್ಳಿಗಳು

೩. ಪ್ರಾಂತೀಯ ನೀರು ಸರಬರಾಜು ಅಗತ್ಯವಿರುವ (ಸಾಕಷ್ಟು ಅಂತರ್ಜಲವಿಲ್ಲದ) ಹಳ್ಳಿಗಳು

೪. ೪೦ ಎಲ್.ಪಿ.ಸಿ.ಡಿ ಗಿಂತ ಕಡಿಮೆ ನೀರು ಸರಬರಾಜಾಗುತ್ತಿರುವ ಹಳ್ಳಿಗಳು

೫. ಶೌಚಾಲಯ ಮತ್ತು ಒಳಚರಂಡಿ ಸಮಸ್ಯೆಗಳಿರುವ ಹಳ್ಳಿಗಳು

ಮೇಲಿರುವ ಮಾನದಂಡಗಳನ್ನು ಉಪಯೋಗಿಸಿಕೊಂಡು ತಮ್ಮ ಜಿಲ್ಲೆಯಲ್ಲಿರುವ ಹಳ್ಳಿಗಳನ್ನು ಆದ್ಯತೆಯ ಮೇಲೆ ಆರಿಸಿಕೊಳ್ಳುವ ಜವಾಬ್ದಾರಿಯು ಜಿಲ್ಲಾ ಪಂಚಾಯತ್ತಿಯದಾಗಿದೆ. ಈ ಯೋಜನೆಯ ಮುಖ್ಯ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ.

ಎ. ಅಭಿವೃದ್ಧಿ ಕಾರ್ಯಗಳು

೧. ಗ್ರಾಮೀಣ ನೀರು ಸರಬರಾಜು

೨. ಪರಿಸರ ನೈರ್ಮಲ್ಯ ಗ್ರಾಮದ ರಸ್ತೆಗಳು ಮತ್ತು ಒಳಚರಂಡಿ ವಾಸಸ್ಥಳದ ಅಭಿವೃದ್ಧಿ

೩. ಅಂತರ್ಜಲ ನವೀಕರಣ

೪. ಸೋರುವಿಕೆಯನ್ನು ಕಂಡುಹಿಡಿಯುವ ಸರ್ವೆ ಮತ್ತು ರಿಪೇರಿ ಕಾರ್ಯಗಳು

೫. ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಪ್ರಯೋಗಾಲಯಗಳ ನಿರ್ಮಾಣ

ಬಿ. ಸಂಸ್ಥೆಯ ನಿರ್ಮಾಣ ಮತ್ತು ಯೋಜನೆಯ ಬೆಂಬಲ

೧. ಜಾಗೃತಿಯನ್ನುಂಟು ಮಾಡಲು ಮತ್ತು ಸಮುದಾಯ ಸಹಭಾಗಿತ್ವಕ್ಕೆ ಸರಕಾರೇತರ ಸಂಸ್ಥೆಗಳನ್ನು ತೊಡಗಿಸುವುದು

೨. ತರಬೇತಿ ಕಾರ್ಯಕ್ರಮಗಳು

೩. ಸಮುದಾಯ ಜಾಗೃತಿ ಮತ್ತು ಉತ್ತಮವಾದ ಆರೋಗ್ಯದ ತಿಳಿವಳಿಕೆ

ಕರ್ನಾಟಕ ಸರ್ಕಾರವು ನೀರು ಸರಬರಾಜು ಕಾರ್ಯಗಳಲ್ಲಿ ಶೇ.೧೦೦ ರಷ್ಟು ಹಣ ಒದಗಿಸುತ್ತದೆ. ಆದರೆ ಪರಿಸರ ನೈರ್ಮಲ್ಯ ವೆಚ್ಚದಲ್ಲಿ ಶೇ.೭೦ ರಷ್ಟನ್ನು ಒದಗಿಸಿ ಉಳಿದ ಶೇ.೩೦ರಷ್ಟು ಪರಿಸರ ನೈರ್ಮಲ್ಯದ ವೆಚ್ಚವನ್ನು ಹಣ ಅಥವಾ ವಸ್ತು ಅಥವಾ ಶ್ರಮದ ರೂಪದಲ್ಲಿ ಅಥವಾ ಈ ಮೂರು ಸೇರಿದಂತೆ ಗ್ರಾಮಸ್ಥರು ಒದಗಿಸಬೇಕು. ಕರ್ನಾಟಕ ಸರ್ಕಾರ ಮಾಡಿದ ವೆಚ್ಚವು ತದನಂತರ ವಿಶ್ವ ಬ್ಯಾಂಕ್‌ನಿಂದ ಭರಿಸಲ್ಪಡುತ್ತದೆ.

# ಪುರಸಭೆಗಳು

## ಹಿನ್ನೆಲೆ

ದಕ್ಷಿಣ ಕನ್ನಡ ಜಿಲ್ಲೆಯು ನವೆಂಬರ್ ಒಂದು ೧೯೫೬ಕ್ಕೆ ಮುಂಚೆ ಮದ್ರಾಸ್ ಪ್ರಾಂತ್ಯಾಡಳಿತಕ್ಕೆ ಸೇರಿತ್ತು. ಪಟ್ಟಣಗಳ ಸ್ವಯಮಾಡಳಿತ ವ್ಯವಸ್ಥೆಯು ೧೮೬೫ರ ಮದ್ರಾಸು ಪಟ್ಟಣ ಅಭಿವೃದ್ಧಿ ಕಾಯ್ದೆಯೊಂದಿಗೆ ಮೊದಲಿಟ್ಟಿತು.

## ೧೮೬೫ರ ಪೌರಾಭಿವೃದ್ಧಿ ಕಾಯ್ದೆ

೧೮೬೫ರಲ್ಲಿ ಜಾರಿಯಾದ ೧೦ನೇ ಮದ್ರಾಸು ಪೌರಾಭಿವೃದ್ಧಿ ಕಾಯ್ದೆಯು ಅನ್ಯ ವಿಷಯಗಳೊಂದಿಗೆ, ಸ್ಥಳೀಯರ ರಕ್ಷಣೆಗೆ ನಿಯೋಜಿಸಲ್ಪಟ್ಟ ಪೋಲಿಸ್ ಪಡೆಯ ವೆಚ್ಚವನ್ನು ಸ್ಥಳೀಯರೇ ಭರಿಸಬೇಕೆಂದೂ ಸೂಚಿಸಿತು. ಕ್ರಮೇಣ ಹೀಗೆ ಸ್ಥಳೀಯರಿಂದ ಸಂಗ್ರಹಿತವಾದ ಮೊತ್ತವನ್ನು ಪೋಲಿಸ್ ಇಲಾಖೆಯ ಜೊತೆಗೆ ಊರಿನಲ್ಲಿ ಚರಂಡಿ ವ್ಯವಸ್ಥೆ ನಿರ್ವಹಣೆ, ರಸ್ತೆ ರಚನೆ, ಮತ್ತು ದುರಸ್ತಿ ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಯೋಜನೆಗಳಿಗೂ ಖರ್ಚು ಮಾಡಲು ನಿರ್ಧರಿಸಲಾಯಿತು. ಐದು ಜನ ಸ್ಥಳೀಯರನ್ನು ಪುನರ್ನೇಮಕದ ಅವಕಾಶದೊಂದಿಗೆ ಒಂದು ವರ್ಷದ ಅವಧಿಗೆ ಸರ್ಕಾರವೇ ನೇಮಿಸುತ್ತಿತ್ತು. ಜೊತೆಗೆ ಜಿಲ್ಲಾ ಮ್ಯಾಜಿಸ್ಟ್ರೇಟ್, ಸ್ಥಳೀಯ ಮ್ಯಾಜಿಸ್ಟ್ರೇಟ್, ಲೋಕೋಪಯೋಗಿ ಇಲಾಖೆಯ ವೃತ್ತಾಧಿಕಾರಿಗಳೂ ಪದನಿಮಿತ್ತ ಸದಸ್ಯರಾಗಿರುತ್ತಿದ್ದರು.

## ೧೮೭೧ರ ಪೌರಾಭಿವೃದ್ಧಿ ಕಾಯ್ದೆ

೧೮೭೧ರ ಮೂರನೇ ಪೌರಾಭಿವೃದ್ಧಿ ಕಾಯ್ದೆಯ ಪ್ರಕಾರ ರಸ್ತೆ ದೀಪಗಳು, ನೀರು ಸರಬರಾಜು, ವೈದ್ಯಕೀಯ, ಶೈಕ್ಷಣಿಕ ವ್ಯವಸ್ಥೆ, ಜನನ/ಮರಣ ನೋಂದಣಿ ವ್ಯವಸ್ಥೆ ಮತ್ತು ಪಟ್ಟಣದಲ್ಲಿ ಲಸಿಕೆ ನೀಡುವ ಜವಾಬ್ದಾರಿಯನ್ನು ಪುರಸಭೆಗಳು ನಿರ್ವಹಿಸಬೇಕಾಗಿತ್ತು. ಸದಸ್ಯರ ಅಧಿಕಾರಾವಧಿ ಒಂದು ವರ್ಷದಿಂದ ಮೂರು ವರ್ಷಕ್ಕೆ ಹೆಚ್ಚಿಸಲಾಯಿತು. ಪದನಿಮಿತ್ತ ಸರ್ಕಾರಿ ಸದಸ್ಯರ ಸಂಖ್ಯೆ ಎರಡಕ್ಕೆ ಇಳಿಯಿತು. ಜಿಲ್ಲಾ ಮ್ಯಾಜಿಸ್ಟ್ರೇಟರ ಬದಲಿಗೆ ಜಿಲ್ಲಾಧಿಕಾರಿಯನ್ನು ಇದರ ಅಧ್ಯಕ್ಷ ಹುದ್ದೆಗೆ ನೇಮಿಸಲಾಯಿತು. ತೆರಿಗೆದಾರರು ಕೌನ್ಸಿಲರು ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುತ್ತಿದ್ದರು. ಇದರಿಂದ ಪುರಸಭೆಗಳಲ್ಲಿ ಸರ್ಕಾರಿ ಹಸ್ತಕ್ಷೇಪ ಕಡಿಮೆಯಾಯಿತು ಮತ್ತು ಚುನಾಯಿತ ಸದಸ್ಯರು ಹೆಚ್ಚು ಸ್ವತಂತ್ರವಾಗಿ ಯೋಜನೆ ಕಾರ್ಯಗತಗೊಳಿಸುವಂತಾಯಿತು.

## ಮದ್ರಾಸು ಪುರಸಭಾ ಕಾಯ್ದೆಗಳು ೧೮೮೪, ೧೯೨೦

ಸ್ಥಳೀಯ ಸ್ವಯಮಾಡಳಿತವನ್ನು ಸಮಗ್ರವಾಗಿ ಸುಧಾರಿಸಲು ಸರ್ಕಾರವು ೧೮೮೨ರಲ್ಲಿ ಒಂದು ಸಮಿತಿಯನ್ನು ರಚಿಸಿತು. ಇದರ ಶಿಫಾರಸ್ಸಿನಂತೆ ೧೮೮೪ರಲ್ಲಿ ಮದ್ರಾಸು ಜಿಲ್ಲಾ ಪುರಸಭೆಗಳ ನಾಲ್ಕನೇ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಪ್ರಪ್ರಥಮವಾಗಿ "ಪುರಸಭೆ" ಎಂಬ ಪದ ಪ್ರಯೋಗ ಈ ಕಾಯ್ದೆಯ ಮೂಲಕ ಆಯಿತು. ಪುರಸಭೆಗಳ ಸದಸ್ಯ ಬಲವು ೧೨ಕ್ಕೆ ಏರಿತು. ಸದಸ್ಯರ ಅಧಿಕಾರಾವಧಿ ಮೊದಲಿನಂತೆ ಮೂರು ವರ್ಷಗಳು. ಆ ವಿಭಾಗದ ಕಂದಾಯಾಧಿಕಾರಿಯು ಪದನಿಮಿತ್ತ ಸದಸ್ಯನಾಗಿ ನಾಮಕರಣಗೊಳ್ಳುತ್ತಿದ್ದರು. ಇತರ ಸದಸ್ಯರು ಚುನಾಯಿತರು ಇಲ್ಲವೇ ಸರ್ಕಾರದಿಂದ ನಾಮಕರಣಗೊಳ್ಳುತ್ತಿದ್ದರು. ಪುರಸಭೆಗಳ ಆದಾಯವು ವೃತ್ತಿ ತೆರಿಗೆ, ನೆಲ ಮತ್ತು ಮನೆಗಳ ವಾರ್ಷಿಕ ಬಾಡಿಗೆ ಮೊತ್ತದ ಶೇ ೬.೫ ತೆರಿಗೆ ಮತ್ತು ಅದೇ ಮೊತ್ತದ ಶೇ ೪ರಷ್ಟು ನೀರಿನ ಕಂದಾಯ, ವಾಹನ ತೆರಿಗೆ ಮತ್ತು ವಾಹನ ಹಾಗೂ ಪ್ರಾಣಿಗಳ ಪುರಪ್ರವೇಶಕ್ಕೆ ವಿಧಿಸುತ್ತಿದ್ದ ಸುಂಕ ಅಲ್ಲದೆ ನಿಷಿದ್ಧ/ಅಪಾಯಕಾರಿ ಕಸುಬುಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನೊಳಗೊಂಡಿತ್ತು. ೧೯೨೦ರಲ್ಲಿ ವಿಕೇಂದ್ರಿಕರಣ ಆಯೋಗದ ವರದಿಯಂತೆ ಮದ್ರಾಸು ಜಿಲ್ಲಾ ಪುರಸಭೆಗಳ ಕಾಯ್ದೆ ಜಾರಿಯಾಯಿತು. ಇದು ಪುರಸಭೆಗಳಲ್ಲಿನ ಚುನಾಯಿತ ಸದಸ್ಯರ ಪ್ರಮಾಣವನ್ನು ಹೆಚ್ಚಿಸಿತಲ್ಲದೆ ಅವುಗಳ ಆರ್ಥಿಕ ಸಂಪನ್ಮೂಲಗಳೂ ಹೆಚ್ಚಾಯಿತು. ಈ ಕಾಯ್ದೆಯು ಮತ್ತೆ ೧೯೩೦ರಲ್ಲಿ ಪರಿಷ್ಕರಣಗೊಂಡಿತು. ತದನಂತರ ಸದಸ್ಯರ ನಾಮಕರಣ ವ್ಯವಸ್ಥೆ ರದ್ದಾಯಿತು. ಎಲ್ಲಾ ಸದಸ್ಯರೂ ಚುನಾಯಿತರೇ ಆಗಿರಬೇಕೆಂದು ನಿರ್ದಿಷ್ಟಪಡಿಸಲಾಯ್ತು. ಮುಸ್ಲಿಮರು, ಕ್ರೈಸ್ತರು, ಪರಿಶಿಷ್ಟರು, ಯುರೋಪಿಯನ್ನರು, ಆಂಗ್ಲೋ ಇಂಡಿಯನ್ನರು ಮತ್ತು ಮಹಿಳೆಯರಿಗೆ ಸ್ಥಾನ ಮೀಸಲು ಸೌಲಭ್ಯ ನೀಡಲಾಯಿತು. ಇದರೊಂದಿಗೆ ಮಹಿಳೆಯರು ಚುನಾವಣೆಗೆ ಸ್ಪರ್ಧಿಸಲು ಇದ್ದ ನಿರ್ಬಂಧವು ರದ್ದಾಯಿತು. ಪುರಸಭಾ ಚುನಾವಣೆಗಳು ಯುದ್ಧ ಪ್ರಸಂಗಗಳಿಂದಾಗಿ ಮುಂದೂಡಲ್ಪಟ್ಟು ಅಂತಿಮವಾಗಿ ೧೯೪೭ರಲ್ಲಿ ನಡೆದವು.

## ೧೯೫೦ರ ೧೦ನೇ ಮದ್ರಾಸು ಪುರಸಭಾ ಕಾಯ್ದೆ

ಇದರನ್ವಯ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ, ಪುತ್ತೂರು, ಬಂಟ್ವಾಳ, ಉಳ್ಳಾಲ, ಮುಲ್ಕಿ, ಕಾರ್ಕಳ ಮತ್ತು ಮೂಡಬಿದ್ರೆಗಳಲ್ಲಿ ಪುರಸಭೆಗಳು ಹಾಗೂ ಇತರ ೪೧೫ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದವು. ಆಗಿನ ಪುರಸಭೆಗಳ ವಾರ್ಷಿಕ ಆದಾಯವು ಕನಿಷ್ಠ ೧೦ ಸಾವಿರ ರೂ.ಗಳು ಮತ್ತು ಜನಸಂಖ್ಯೆ ಕನಿಷ್ಠ ೫,೦೦೦ ಆಗಿತ್ತು. ಇತರ ಪಂಚಾಯಿತಿಗಳಲ್ಲಿ ಆದಾಯ ಮತ್ತು ಜನಸಂಖ್ಯೆಯು ಪುರಸಭೆಗಳಿಗಿಂತ ಕಮ್ಮಿ ಇರುತ್ತಿತ್ತು. ಪುರಸಭೆಗಳ ಮೇಲ್ವಿಚಾರಣೆಯನ್ನು ಇಲಾಖಾ ಮುಖ್ಯಸ್ಥರಾದ ಪುರಸಭೆಗಳ ಮಹಾನಿರೀಕ್ಷಕರು ಮದ್ರಾಸಿನಿಂದಲೂ ಹಾಗೂ ಪ್ರಾಂತೀಯ ನಿರೀಕ್ಷಕರು ಕೊಯಮತ್ತೂರಿನಿಂದಲೂ ನಿರ್ವಹಿಸುತ್ತಿದ್ದರು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಅಧಿಕಾರಿ, ತಾಲ್ಲೂಕಿನಲ್ಲಿ ಉಪ ಪಂಚಾಯಿತಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು.

## ಪಟ್ಟಣ ಪಂಚಾಯಿತಿಗಳು

ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯)ಯ ಮೂರನೇ ಕಲಂ ಪ್ರಕಾರ ಗ್ರಾಮಪಂಚಾಯಿತಿ ಹಾಗೂ ಪಟ್ಟಣ ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಸ್ವಯಂ ಆಡಳಿತ ಸಂಸ್ಥೆಯು ಮಧ್ಯವರ್ತಿ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿತ್ತು. ೫೦೦೦ಕ್ಕೂ ಹೆಚ್ಚಿನ ಜನಸಂಖ್ಯೆ ಇದ್ದು ಪಂಚಾಯಿತಿಯ ವಾರ್ಷಿಕ ವರಮಾನವು ರೂ.೧೦,೦೦೦ ಕ್ಕಿಂತಲೂ ಹೆಚ್ಚಿದ್ದರೆ ಅಂತಹ ಪಂಚಾಯಿತಿಗಳನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಕರೆದಿದೆ. ಈ ಸಂಸ್ಥೆಗಳಲ್ಲಿ ೧೧ ರಿಂದ ೧೯ ಜನ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ರೀತ್ಯ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಹಾಗೂ ಮಂಡಲ ಪಂಚಾಯಿತಿಗಳು ರಚನೆಗೊಂಡವು. ಆಗ ಅಸ್ತಿತ್ವದಲ್ಲಿದ್ದ ಪಟ್ಟಣ ಪಂಚಾಯಿತಿಗಳು ೧೯೮೭ರಲ್ಲಿ ಮಂಡಲ ಪಂಚಾಯಿತಿಗಳೆಂದು ಪುನರ್ರಚಿಸಲ್ಪಟ್ಟವು. ೧೯೫೦ರಲ್ಲಿ ಜಿಲ್ಲೆಯ ಏಳು ಪಟ್ಟಣಗಳಲ್ಲಿ ಒಂದನೇ ವರ್ಗದ ಪಟ್ಟಣ ಪಂಚಾಯತ್‌ಗಳು ಇದ್ದವು. ಅವುಗಳೆಂದರೆ ಕುಂದಾಪುರ, ಪುತ್ತೂರು, ಬಂಟ್ವಾಳ, ಉಳ್ಳಾಲ, ಮುಲ್ಕಿ, ಕಾರ್ಕಳ, ಮತ್ತು ಮೂಡಬಿದ್ರೆ

## ೧೯೬೪ರ ಕರ್ನಾಟಕ ಮುನಿಸಿಪಾಲಿಟಿಗಳ ಕಾಯ್ದೆ

ರಾಜ್ಯ ಪುನರ್ವಿಂಗಡಣೋತ್ತರದಲ್ಲಿ ಮುನಿಸಿಪಲ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಏಕರೂಪ ಕಾಯ್ದೆಯ ಅನಿವಾರ್ಯತೆಯುಂಟಾಯಿತು. ಅಲ್ಲಿಯವರೆಗೆ ಜಾರಿಯಲ್ಲಿದ್ದ ಮದ್ರಾಸ್ ಪ್ರಾಂತ್ಯ, ಬಾಂಬೆ ಕರ್ನಾಟಕ ಪ್ರಾಂತ್ಯ ಹಾಗೂ ಹೈದರಾಬಾದ್ ಕರ್ನಾಟಕ ಪ್ರಾಂತ್ಯಗಳ ಕಾಯ್ದೆಗಳು ರದ್ದಾಗಿ ಅಖಿಲ ಕರ್ನಾಟಕಕ್ಕೆ ಅನ್ವಯವಾಗುವ ಕಾಯ್ದೆಯು ೧೯೬೪ರ ಏಪ್ರಿಲ್ ಒಂದರಂದು ಜಾರಿಗೊಂಡಿತು. ಈ ಕಾಯ್ದೆಯ ಪ್ರಕಾರ ಪಟ್ಟಣದ ಜನಸಂಖ್ಯೆಯು ೨೦,೦೦೦ ಮೀರಿರದಿದ್ದರೆ ೧೫ ಸದಸ್ಯರಿರಬೇಕೆಂದು ಮತ್ತು ೨೦,೦೦೦ಕ್ಕಿಂತ ಹೆಚ್ಚಾಗಿದ್ದು, ಮೇಲಿನ ಪ್ರತಿ ೧೦,೦೦೦ ಜನಸಂಖ್ಯೆಗೆ ನಾಲ್ಕು ಸದಸ್ಯರು ಇರಬೇಕೆಂದು ನಿರ್ಧರಿಸಲಾಯಿತು. ಸದಸ್ಯರ ಅಧಿಕಾರಾವಧಿಯು ಕ್ರಮೇಣ ಐದು ವರ್ಷಗಳಾದವು. ಈ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ೧೯೮೩ರಿಂದ ಮತದಾನದ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಲಾಯಿತು. ಈ ಕಾಯ್ದೆಯು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಅನ್ವಯವಾಗುವಂತೆ ಜಾರಿಗೆ ತಂದ ರಾಜ್ಯಗಳಲ್ಲಿ ಕರ್ನಾಟಕವು ಮೊದಲನೆಯದು. ಒಟ್ಟು ಸ್ಥಾನಗಳಲ್ಲಿ ಶೇ ೨೦ ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಲು ನಿರ್ಧರಿಸಲಾಯಿತು. ಮುನಿಸಿಪಾಲಿಟಿಗಳಿಗೆ ತಮ್ಮ ಪ್ರದೇಶದಲ್ಲಿ ಸರ್ಕಾರದ ವಿವಿದ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕೆಲಸವನ್ನು ವಹಿಸಲಾಗಿದೆ. ಪ್ರತಿ ಮುನಿಸಿಪಾಲಿಟಿಯು ತನ್ನ ವಾರ್ಷಿಕ ಆಯವ್ಯಯದಲ್ಲಿ ಶೇ.೧೮ರಷ್ಟನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳಿಗೆ ಖರ್ಚು ಮಾಡಬೇಕು. ೧೯೬೪ರ ಕಾಯ್ದೆಯು ಮುನಿಸಿಪಾಲಿಟಿಗಳಿಗೆ ಅನೇಕ ಜವಾಬ್ದಾರಿಗಳನ್ನು ನಿಗದಿಪಡಿಸಿದೆ. ಅವುಗಳಲ್ಲಿ ನೈರ್ಮಲ್ಯ, ಆರೋಗ್ಯ, ರಸ್ತೆ ಪಾರ್ಕ್, ಮಾರುಕಟ್ಟೆ ಬಸ್‌ನಿಲ್ದಾಣ, ಹೋಟೇಲ್‌ಗಳ ಸ್ವಚ್ಛತೆ ಮುಂತಾದವುಗಳ ನಿರ್ವಹಣೆ ಇತ್ಯಾದಿಗಳಿವೆ. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿಯ ಕೇಂದ್ರ ಪ್ರಾಯೋಜಿತ ಯೋಜನೆಯನ್ನು ಏಳನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಾರಂಭಿಸಲಾಗಿದೆ. (೧೯೭೮ರಿಂದ ೮೩ರವರೆಗೆ) ಒಂದು ಲಕ್ಷ ಜನ ಸಂಖ್ಯೆ ಮಿತಿಯಲ್ಲಿರುವ ಪಟ್ಟಣಗಳಿಗೆ ಈ ಯೋಜನೆಯು ಅನ್ವಯಿಸುತ್ತದೆ. ಉದ್ಯೋಗ ಸೃಷ್ಟಿಯ ಸಲುವಾಗಿ ನಿವೇಶನಗಳು, ರಸ್ತೆ, ನೀರು ಸರಬರಾಜು ಮತ್ತು ಕೈಗಾರಿಕಾ ಎಸ್ಟೇಟ್‌ಗಳಂತಹ ಕಾಮಗಾರಿಗಳನ್ನು ನಿರ್ವಹಿಸುತ್ತದೆ.

## ನಗರ ಸ್ಥಳೀಯ ಸಂಸ್ಥೆಗಳು

ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳನ್ನು ಏಕರೂಪದ ನಿಯಮಾವಳಿಗಳಿಗೊಳಪಡಿಸುವ ಸಲುವಾಗಿ ಭಾರತ ಸಂವಿಧಾನಕ್ಕೆ ೭೪ನೇ ತಿದ್ದುಪಡಿಯನ್ನು ತರಲಾಯಿತು. ಕೆಳ ಹಂತದಿಂದಲೇ ಜನತೆಯನ್ನು ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಸರ್ಕಾರದ ಸದುದ್ದೇಶವಾಗಿದೆ. ೧೯೬೪ರ ಕರ್ನಾಟಕ ಪುರಸಭೆಗಳ ಅಧಿನಿಯಮಕ್ಕೆ ೧೯೯೪ರ ೩೬ನೇ ಪರಿಚ್ಛೇದದಲ್ಲಿ ಸೂಕ್ತ ತಿದ್ದುಪಡಿ ತರಲಾಗಿದೆ. ಅದರನ್ವಯ ೧೯೭೬ರ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮಕ್ಕೂ ತಿದ್ದುಪಡಿ ತಂದು ಪುರಸಭೆ/ನಗರಸಭೆ/ನಗರಪಾಲಿಕೆಗಳ ಕಾರ್ಯ ವೈಖರಿಯಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ತರಲಾಗಿದೆ. ಸರ್ಕಾರ ನಗರ ಸ್ಥಳೀಯ ಸಂಸ್ಥೆಗಳನ್ನು ದೊಡ್ಡನಗರ ಪ್ರದೇಶಗಳು, ಸಣ್ಣ ನಗರ ಪ್ರದೇಶಗಳು ಮತ್ತು ಪರಿವರ್ತನಾಶೀಲ ಪ್ರದೇಶಗಳು ಎಂಬುದಾಗಿ ವಿಂಗಡಿಸಿದೆ. ಈ ನಿರ್ದಿಷ್ಟ ವಿಂಗಡಣೆಗೆ ಆ ಪ್ರದೇಶದ ಜನಸಂಖ್ಯೆ, ಜನಸಾಂದ್ರತೆ, ಸ್ಥಳೀಯ ಸಂಸ್ಥೆಗೆ ದೊರಕುವ ರಾಜಸ್ವ, ಕೃಷಿಯೇತರ ಉದ್ಯೋಗ ಲಭ್ಯತೆ ಪ್ರಮಾಣ, ಆರ್ಥಿಕ ಸ್ಥಿತಿಗತಿ ಮತ್ತು 'ತೆರಿಗೆದಾರರ ಸಂಖ್ಯೆ ಮುಂತಾದವುಗಳು ಆಧಾರವಾಗಿವೆ.

ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ ೧೯೭೬ರ ಪರಿಚ್ಛೇದ ಮೂರರನ್ವಯ ಒಂದು ನಗರ ಸ್ಥಳೀಯ ಪ್ರದೇಶವು ಈ ಕೆಳಕಂಡ ಅಂಶಗಳನ್ನೊಳಗೊಂಡಿದ್ದಲ್ಲಿ ಅದನ್ನು ದೊಡ್ಡನಗರ ಪ್ರದೇಶವೆಂದು ಪರಿಗಣಿಸಲಾಗುತ್ತದೆ.

* ಆ ಪ್ರದೇಶದ ಜನಸಂಖ್ಯೆ ಮೂರು ಲಕ್ಷದ ಮಿತಿ ದಾಟಿರಬೇಕು
* ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿ.ಮೀ.ಗೆ ಮೂರು ಸಾವಿರಕ್ಕಿಂತ ಕಡಿಮೆ ಇರಬಾರದು.
* ಆ ಪ್ರದೇಶದಲ್ಲಿ ಹಿಂದಿನ ಜನಗಣತಿ ವರ್ಷದಲ್ಲಿ ಸ್ಥಳೀಯ ಸಂಸ್ಥೆಗೆ ದೊರಕಿದ್ದ ರಾಜಸ್ವವು ಮೂರು ಕೋಟಿಗೆ ಕಡಿಮೆಯಾಗಿರಕೂಡದು ಅಥವಾ ತಲಾ ಅದಾಯ ರೂ.೨೦೦ಕ್ಕಿಂತ ಕಡಿಮೆಯಾಗಿರಬಾರದು. ಈ ಎರಡು ಅಂಶಗಳಲ್ಲಿ ಯಾವುದು ಹೆಚ್ಚಾಗಿರುವುದೋ ಅದು ಪರಿಗಣಿತವಾಗತಕ್ಕದ್ದು.
* ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾವಾರು ಪ್ರಮಾಣ ಕನಿಷ್ಟ ೫೦ಕ್ಕಿಂತ ಹೆಚ್ಚಾಗಿರಬೇಕು.

ಈ ಅಂಶಗಳನ್ನು ಪರಿಗಣಿಸಿ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅಂತಹ ಪ್ರದೇಶವನ್ನು ದೊಡ್ಡನಗರ ಪ್ರದೇಶವೆಂದು ರಾಜ್ಯಪಾಲರು ಉದ್ಘೋಷಿಸುತ್ತಾರೆ ಮತ್ತು ಇಂತಹ ದೊಡ್ಡ ನಗರ ಪ್ರದೇಶವನ್ನು ಮಹಾನಗರ ಪಾಲಿಕೆಯೆಂದು ಕರೆಯಲಾಗುತ್ತದೆ. ಹಾಗೆಯೇ ಯಾವುದೇ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ನಿಗಧಿ ಮಾಡಬೇಕಾದಲ್ಲಿ ಅಂತಹ ಪ್ರದೇಶದ

* ಜನಸಂಖ್ಯೆ ಕನಿಷ್ಟ ೨೦,೦೦೦ ಮತ್ತು ಗರಿಷ್ಟ ಮೂರು ಲಕ್ಷಗಳಾಗಿರಬೇಕು.
* ಜನಸಾಂದ್ರತೆ ಒಂದು ಚದರ ಕಿ.ಮೀ.ಗೆ ೧೫೦೦ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.
* ಹಿಂದಿನ ಜನಗಣತಿ ವರ್ಷದಲ್ಲಿ ತೆರಿಗೆ ಮತ್ತು ಇತರ ಮೂಲಗಳಿಂದ ಸ್ಥಳೀಯ ಆಡಳಿತಕ್ಕೆ ದೂರಕ್ಕಿದ್ದ ರಾಜಸ್ವವು
* ಒಂಭತ್ತು ಲಕ್ಷಕ್ಕಿಂತ ಕಡಿಮೆಯಾಗಿರಬಾರದು ಅಥವಾ ಆ ಪ್ರದೇಶದ ವಾರ್ಷಿಕ ತಲಾ ಆದಾಯವು ರೂ.೪೫ಕ್ಕಿಂತ ಕಡಿಮೆಯಾಗಿರಬಾರದು. ಈ ಎರಡಂಶಗಳಲ್ಲಿ ಯಾವುದು ಗರಿಷ್ಟವೋ ಅದನ್ನು ಪರಿಗಣಿಸತಕ್ಕದ್ದು.
* ಕೃಷಿಯೇತರ ಉದ್ಯೋಗಾವಕಾಶಗಳು ಒಟ್ಟು ಉದ್ಯೋಗಾವಕಾಶಕ್ಕೆ ಶೇ.೫೦ಕ್ಕಿಂತ ಕಡಿಮೆ ಇರಬಾರದು.

ಈ ಮಾನದಂಡಕ್ಕನುಸಾರವಾಗಿದ್ದಲ್ಲಿ ರಾಜ್ಯಪಾಲರು ಅಂತಹ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ಉದ್ಘೋಷಿಸುತ್ತಾರೆ. ಅಂತಹ ಸಣ್ಣ ನಗರ ಪ್ರದೇಶದ ಜನಸಂಖ್ಯೆ ೫೦,೦೦೦ ಮೀರಿದದಲ್ಲಿ ನಗರಸಭೆಯೆಂದು ಕಡಿಮೆ ಇದ್ದಲ್ಲಿ ಪುರಸಭೆಯೆಂದೂ ಕರೆಯಲಾಗುತ್ತದೆ. ೧೯೬೪ರ ಕರ್ನಾಟಕ ಪುರಸಭೆಯ ಅಧಿನಿಯಮದ ಪರಿಚ್ಛೇದ ೩೪೯ರಂತೆ ಪರಿವರ್ತನಾಶೀಲ ಪ್ರದೇಶವೆಂದು ಪರಿಗಣಿಸಲು ಆ ಪ್ರದೇಶದ ಜನಸಂಖ್ಯೆಯು ೨೦,೦೦೦ಕ್ಕಿಂತ ಕಡಿಮೆ ಇದ್ದು ೧೦,೦೦೦ಕ್ಕಿಂತ ಹೆಚ್ಚಾಗಿರಬೇಕು ಮತ್ತು ಆ ಪ್ರದೇಶದ ಜನಸಾಂದ್ರತೆಯು ಪ್ರತಿ.ಚಕಿ.ಮೀ.ಗೆ ೪೦೦ಕ್ಕಿಂತ ಹೆಚ್ಚು ಇರಬೇಕು ಹಾಗೂ ಕೃಷಿಯೇತರ ಉದ್ಯೋಗದ ಶೇ. ಪ್ರಮಾಣ ಒಟ್ಟು ಉದ್ಯೋಗದ ಶೇ. ೫೦ರಷ್ಟಿರಬೇಕು. ಈ ಅಂಶಗಳು ಅನ್ವಯಿಸುವ ಪ್ರದೇಶವನ್ನು ರಾಜ್ಯಪಾಲರು ಪಟ್ಟಣ ಪಂಚಾಯಿತಿ ಎಂದು ಉದ್ಘೋಷಿಸುತ್ತಾರೆ. ತಾಲೂಕು ಕೇಂದ್ರಗಳಲ್ಲಿ ಜನಸಂಖ್ಯೆ ೧೦,೦೦೦ಕ್ಕಿಂತ ಕಡಿಮೆ ಇದ್ದರೂ ಅದನ್ನು ಪಟ್ಟಣ ಪಂಚಾಯತಿ ಎಂದು ಪರಿಗಣಿಸಲಾಗುತ್ತದೆ.

### ಪುರಸಭೆಗಳಿಗೆ ಚುನಾವಣೆ

ಭಾರತ ಸಂವಿಧಾನದ ಪರಿಚ್ಛೇದ ೨೪೩ರನ್ವಯ ರಾಜ್ಯ ಚುನಾವಣಾ ಆಯುಕ್ತರು ಪುರಸಭೆಗಳಿಗೆ ಚುನಾವಣೆಯನ್ನು ನಡೆಸುತ್ತಾರೆ. ರಾಜ್ಯ ಚುನಾವಣಾ ಆಯೋಗವು ಪಟ್ಟಣ ಪಂಚಾಯತ್ ಮತ್ತು ಪುರಸಭೆಗಳು ಎಲ್ಲಿ ಮತದಾರರ ಪಟ್ಟಿ ತಯಾರಿಸಿ, ನ್ಯಾಯ ಮತ್ತು ನಿಷ್ಪಕ್ಷಪಾತ ಚುನಾವಣೆ ನಡೆಸಲು ಕ್ರಮಕೈಗೊಳ್ಳುತ್ತದೆ. ಚುನಾವಣಾ ಪ್ರಕ್ರಿಯೆಯನ್ನು ಪುರಸಭೆ ಅವಧಿ ಮುಕ್ತಾಯಕ್ಕೆ ಮುಂಚಿತವಾಗಿ ಪೂರ್ಣಗೊಳಿಸಬೇಕಾಗುತ್ತದೆ. ಪುರಸಭೆಯ ಅಧಿಕಾರಾವಧಿಯು ಅದರ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ಐದು ವರ್ಷಗಳ ಕಾಲ ಇರುತ್ತದೆ.

### ಸ್ಥಾನಗಳ ಮೀಸಲಾತಿ

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಮಹಿಳೆಯರಿಗೆ ಸ್ಥಾನಗಳ ಮೀಸಲಾತಿಗೆ ಅಧಿನಿಯಮಗಳನ್ನು ಉಪಬಂಧಗಳನ್ನು ಕಲ್ಪಿಸಲಾಗಿದೆ. ಹೀಗೆ ಮೀಸಲಿಡಲ್ಪಟ್ಟ ಸ್ಥಾನಗಳನ್ನು ವಿವಿಧ ವಾರ್ಡುಗಳಲ್ಲಿ ಸರದಿ ಪ್ರಕಾರ ಹಂಚಿಕೆ ಮಾಡಬಹುದಾಗಿದೆ. ಅದರಂತೆ ಆಯ್ಕೆಗೊಂಡ ಸದಸ್ಯರಿಂದಲೇ ಆಯ್ಕೆಗೊಳ್ಳುವ ಅಧ್ಯಕ್ಷ–ಉಪಾಧ್ಯಕ್ಷರ ಹುದ್ದೆಗಳಿಗೂ ಸಹ ಮೀಸಲಾತಿ ಅವಕಾಶವನ್ನು ನೀಡಲಾಗಿದೆ.

### ಪುರಸಭೆಗಳ ಕರ್ತವ್ಯ

ಸ್ಥಳೀಯ ಸಂಸ್ಥೆಗಳ ಚಟುವಟಿಕೆಯನ್ನು ಸ್ಥೂಲವಾಗಿ ಎರಡು ವರ್ಗಗಳಾಗಿ ವಿಭಾಗಿಸಿದೆ. ಅವು ಕ್ರಮವಾಗಿ ೧. ರಸ್ತೆ ಹಾಗೂ ಬೀದಿ ದೀಪಗಳ ನಿರ್ವಹಣೆ, ನೈರ್ಮಲ್ಯ ವ್ಯವಸ್ಥೆ, ನೀರು ಸರಬರಾಜು, ಜನನ ಮತ್ತು ಮರಣ ನೋಂದಣಿ, ಸಾಂಕ್ರಾಮಿಕಗಳಿಂದ ರಕ್ಷಣೆ ಹಾಗೂ ಕಟ್ಟಡ ನಿರ್ಮಾಣ ಸಕ್ರಮಗೊಳಿಸುವುದು. ೨. ಬಡಾವಣೆ, ಉದ್ಯಾನ, ಶಾಲೆ, ಗ್ರಂಥಾಲಯ ಮತ್ತು ಆಸ್ಪತ್ರೆಗಳೇ ಮೊದಲಾದವುಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ವಿವೇಚನಾಧಿಕಾರದಿಂದ ಸೂಕ್ತವೆನಿಸುವ ಯಾವುದೇ ಚಟುವಟಿಕೆಗಳು

### ಪುರಸಭೆಗಳ ಸಂಪನ್ಮೂಲಗಳು

ಪುರಸಭೆಗಳ ಅಧಿನಿಯಮದ ಸೆಕ್ಷನ್ ೯೪ರನ್ವಯ ಪುರಸಭೆಗಳ ನಿಧಿ ಮೂಲಗಳನ್ನು ಕೆಳಗೆ ತೋರಿಸುವ ವಿಧಾನಗಳಿಂದ ಕ್ರೋಢೀಕರಿಸಿಕೊಳ್ಳಬಹುದಾಗಿದೆ.

೧. ಕಟ್ಟಡ ಹಾಗೂ ಭೂ ತೆರಿಗೆ
೨. ಮೋಟಾರು ವಾಹನ ಹೊರತುಪಡಿಸಿ ಇತರ ವಾಹನಗಳ ಮೇಲೆ ಹಾಕಲಾದ ತೆರಿಗೆಗಳು
೩. ನೀರು ಸರಬರಾಜಿನ ಮೇಲಿನ ತೆರಿಗೆ
೪. ಬೀದಿದೀಪಗಳ ಮೇಲಿನ ತೆರಿಗೆ
೫. ಚರಾಸ್ತಿ ನೋಂದಣಿ, ಬದಲಾವಣೆಗಳ ಮೇಲಿನ ಹೆಚ್ಚುವರಿ ಸಂಪನ್ಮೂಲ ತೆರಿಗೆ
೬. ಜಾಹಿರಾತಿನ ಮೇಲಿನ ತೆರಿಗೆ

### ಪೌರಾಡಳಿತ ನಿರ್ದೇಶನಾಲಯ

ಪೌರಾಡಳಿತ ನಿರ್ದೇಶನಾಲಯವು ೧೯೮೪ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿದ್ದು ತನ್ನ ವ್ಯಾಪ್ತಿಯಲ್ಲಿ ಹಲವಾರು ಸ್ಥಳೀಯ ಸಂಸ್ಥೆಗಳನ್ನು ಹೊಂದಿದೆ. ಸಂವಿಧಾನದ ೭೪ನೇ ತಿದ್ದುಪಡಿಗಳಿಗನುಸಾರವಾಗಿ ಕರ್ನಾಟಕ ಸರ್ಕಾರವು ನಗರಪಾಲಿಕೆಗಳನ್ನು ಹೊರತುಪಡಿಸಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳು ಎಂಬ ನಾಲ್ಕು ಹಂತದ ವ್ಯವಸ್ಥೆಯನ್ನು ಕಲ್ಪಿಸಿದೆ. ನಗರ–ಪಟ್ಟಣಗಳ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ಸ್ಥಳೀಯ ಸಂಸ್ಥೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ೫೦ ಸಾವಿರಕ್ಕಿಂತ ಹೆಚ್ಚು ಮತ್ತು ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವಂತಹ ನಗರ ಸಭೆಗಳು

೨. ೨೦ ಸಾವಿರಕ್ಕಿಂತ ಹೆಚ್ಚು ಮತ್ತು ೫೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವಂತಹವು ಪುರಸಭೆಗಳು

೩. ೧೦ ಸಾವಿರಕ್ಕಿಂತ ಹೆಚ್ಚು ಮತ್ತು ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವಂತಹವುಗಳನ್ನು ಪಟ್ಟಣಪಂಚಾಯಿತಿ ಎಂದು ವರ್ಗೀಕರಿಸಲಾಗಿದೆ.

೪. ಪ್ರಾಜೆಕ್ಟ್ ಪ್ರದೇಶ, ಕೈಗಾರಿಕಾ ಪ್ರದೇಶ ಹಾಗೂ ಪ್ರವಾಸಿ ತಾಣವಿರುವ ಪ್ರದೇಶಗಳಲ್ಲಿ ಅಲ್ಲಿನ ಆಡಳಿತ ನಿರ್ವಹಣೆಗೆ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ರಚಿಸಲಾಗಿದೆ.

## ಮಹಾನಗರಪಾಲಿಕೆ, ಮಂಗಳೂರು

೧೮೬೬ರಲ್ಲಿ ಮದ್ರಾಸು ಟೌನ್ ಇಂಪ್ರೂವ್‌ಮೆಂಟ್ ಆಕ್ಟ್ ೧೮೬೫ರ ಪ್ರಕಾರ ಮಂಗಳೂರು ಪುರಸಭೆಯು ಪ್ರಾರಂಭವಾಯಿತು. ಅಂದಿನ ಪುರಸಭೆಯಲ್ಲಿ ಏಳು ಜನ ನಾಮಕರಣಗೊಂಡ ಸದಸ್ಯರು ಮಾತ್ರ ಇದ್ದರು. ೧೯೫೬ರ ರಾಜ್ಯ ಪುನರ್ವಿಂಗಡಣೆ ನಂತರ ಮಂಗಳೂರು ಮೈಸೂರು ರಾಜ್ಯಕ್ಕೆ ಸೇರಿತು. ೧೯೬೫ರಲ್ಲಿ ಇದು ನಗರಸಭೆಯಾಗಿ ಪರಿವರ್ತನೆಗೊಂಡಿತು ಹಾಗೂ ೧೯೮೦ರಲ್ಲಿ ಮಹಾನಗರಪಾಲಿಕೆಯಾಗಿ ಮಾರ್ಪಾಟಾಯಿತು. ೨೦೦೩-೦೪ರಲ್ಲಿ ನಗರಪಾಲಿಕೆಯ ವ್ಯಾಪ್ತಿಯು ೧೩೨.೪೫ ಚ.ಕಿ.ಮೀ.ಗೆ ವಿಸ್ತರಿಸಿದೆ ಮತ್ತು ಇರುವ ವಾರ್ಡ್‌ಗಳ ಸಂಖ್ಯೆ -೬೦. ಸಂವಿಧಾನದ ೭೪ನೇ ತಿದ್ದುಪಡಿ ಪ್ರಕಾರ ೨೩-೫-೨೦೦೨ರಂದು ನಗರಪಾಲಿಕೆಗೆ ಚುನಾವಣೆ ನಡೆದು ೬೦ ಮಂದಿ ಸದಸ್ಯರು ಆಯ್ಕೆಗೊಂಡಿದ್ದಾರೆ. ಅವರಲ್ಲಿ ೩೩ ಪುರುಷ ಸದಸ್ಯರು ಮತ್ತು ೨೭ ಮಹಿಳಾ ಸದಸ್ಯರು ಇದ್ದಾರೆ. ಸ್ಥಾನಗಳ ಮೀಸಲಾತಿ ವಿವರ: ಸಾಮಾನ್ಯ -೦೪ (ಸ್ತ್ರೀ – ೦೧) ಪರಿಶಿಷ್ಟ ಜಾತಿ -೦೩ (ಸ್ತ್ರೀ-೦೨) ಹಿಂದುಳಿದ ಪಂಗಡ – ೫೩ (ಸ್ತ್ರೀ – ೨೪) ಇವರಲ್ಲದೇ ಇಬ್ಬರು ಲೋಕಸಭಾ ಸದಸ್ಯರು, ನಾಲ್ಕು ಮಂದಿ ರಾಜ್ಯ ವಿಧಾನ ಸಭೆ ಸದಸ್ಯರು ಹಾಗೂ ಇಬ್ಬರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರೂ ಸಹ ನಗರಪಾಲಿಕೆಯ ನಾಮಕರಣಗೊಂಡ ಸದಸ್ಯರಾಗಿದ್ದು ಒಟ್ಟು ಸದಸ್ಯರ ಸಂಖ್ಯೆ ೬೮ ಆಗಿದೆ. ಮಹಾನಗರಪಾಲಿಕೆಯಲ್ಲಿ ಪರಿಣಾಮಕಾರಿ ಆಡಳಿತಕ್ಕಾಗಿ ಐದು ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ. ಅವುಗಳೆಂದರೆ ೧) ಸಾಮಾಜಿಕ ನ್ಯಾಯ ಸಮಿತಿ ೨) ಆರೋಗ್ಯ ಸಮಿತಿ ೩) ತೆರಿಗೆ ಮತ್ತು ಆರ್ಥಿಕ ಸಮಿತಿ ೪) ತೆರಿಗೆ ಅಪೀಲು ಸಮಿತಿ ೫) ಕಾಮಗಾರಿ ಸಮಿತಿ. ಪ್ರತಿ ಸಮಿತಿಯಲ್ಲಿ ಅಧ್ಯಕ್ಷರಲ್ಲದೇ ಎರಡರಿಂದ ಆರು ಮಂದಿ ಸದಸ್ಯರಿರುತ್ತಾರೆ. ಈ ಸಮಿತಿಗಳು ಶಾಸನಬದ್ಧ ಸ್ಥಾಯಿ ಸಮಿತಿಗಳಾಗಿದ್ದು ಪ್ರತಿ ತಿಂಗಳು ಸಭೆ ಸೇರಿ ಸಾರ್ವಜನಿಕ ಹಿತದೃಷ್ಟಿಯ ನಿರ್ಣಯಗಳನ್ನು ಕೈಗೊಳ್ಳುತ್ತವೆ.

೨೦೦೧ರ ಜನಗಣತಿಯ ವರದಿಯಂತೆ ನಗರದ ಜನಸಂಖ್ಯೆಯು ೪,೧೯,೩೦೬ ಆಗಿದ್ದು ೨,೧೦,೪೩೫ ಪುರುಷರು ಮತ್ತು ೨,೦೮,೮೭೧ ಸ್ತ್ರೀಯರೂ ನಗರ ಪ್ರದೇಶದ ನಿವಾಸಿಗಳಾಗಿದ್ದಾರೆ. ನಗರದ ಒಟ್ಟು ಕುಟುಂಬಗಳ (ಮನೆಗಳು) ಸಂಖ್ಯೆ ೧,೩೩,೧೨೪ ಆಗಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿ ೫೩ ಕಂದಾಯ ವಾರ್ಡುಗಳಿದ್ದು ೧,೩೩,೧೨೪ ಮಂದಿ ತೆರಿಗೆ ಸಂದಾಯ ಮಾಡುವವರಿದ್ದು ಸರಾಸರಿ ಕರಭಾರ ೧೭೭.೯೪ ರೂ. ಆಗಿದೆ. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ೧೯೮೮ ರಿಂದ ಅಸ್ತಿತ್ವದಲ್ಲಿದ್ದು ಹೊಸ ಬಡಾವಣೆಗಳ ರಚನೆಯಲ್ಲಿ ತೊಡಗಿದೆ. ಇದು ಒಟ್ಟು ೧೧ ಬಡಾವಣೆಗಳನ್ನು ನಿರ್ಮಿಸಿರುತ್ತದೆ. ಹೊಸದಾಗಿ ಪದವು ಗ್ರಾಮಪ್ರದೇಶದಲ್ಲಿ ಬಡಾವಣೆ ರಚನೆ ಪ್ರಗತಿಯಲ್ಲಿದೆ. (ನಗರಾಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ).

## ನೀರು ಸರಬರಾಜು

೧೯೫೫ರಲ್ಲಿ ಪ್ರಥಮವಾಗಿ ಮಂಗಳೂರು ಪುರಸಭೆಯು ನೇತ್ರಾವತಿ ನದಿಯಿಂದ ನೀರು ಪೂರೈಕೆ ಪ್ರಾರಂಭಿಸಿತು. ಅದು ರೂ. ೮೪.೧೪ ಲಕ್ಷಗಳ ಮೊತ್ತದ ಯೋಜನೆಯಾಗಿದ್ದು ಪ್ರತಿ ಗಂಟೆಗೆ ೧೫ ಗ್ಯಾಲನು ಪ್ರಮಾಣದ ನೀರು ಪೂರೈಸಲಾಗುತ್ತಿತ್ತು. ಈಗ ನೇತ್ರಾವತಿ ನದಿಯಿಂದಲೇ ದಿನಕ್ಕೆ ೯೨ ದಶಲಕ್ಷ ಲೀಟರ್ ನೀರು ಪೂರೈಸಲಾಗುತ್ತಿದೆ. ಕೊಳವೆಬಾವಿಗಳಿಂದ ದಿನವಹಿ ೧೫ ದಶಲಕ್ಷ ಲೀಟರ್ ನೀರು ಲಭ್ಯವಿದೆ ಮತ್ತು ೧೯೭ರಿಂದ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೂರೈಕೆ ನಿರ್ವಹಿಸುತ್ತಿದ್ದು ನಂತರ ನಿರ್ವಹಣೆಯನ್ನು ಮಹಾನಗರ ಪಾಲಿಕೆಗೆ ವಹಿಸಿಕೊಡಲಾಗಿದೆ. ನಗರದಲ್ಲಿ ನೀರು ಪೂರೈಕೆಗೆ ೧೮ ಪೂರಕ

ನೀರು ಸಂಗ್ರಾಹಕಗಳಿದ್ದು ಅವುಗಳ ಸಂಗ್ರಹಣ ಸಾಮರ್ಥ್ಯವು ಮೂರರಿಂದ ೫೦ ಲಕ್ಷ ಲೀಟರ್‌ಗಳವರೆಗಿರುತ್ತದೆ. ನಗರಪಾಲಿಕೆಯು ೫೨,೨೮೭ ಗೃಹಬಳಕೆ ಸಂಪರ್ಕಗಳು ೫,೦೧೨ ಸಾರ್ವಜನಿಕ ನಲ್ಲಿಗಳು, ೪೬೦ ವಾಣಿಜ್ಯ ಸಂಪರ್ಕಗಳು ಹಾಗೂ ೭೫೦೦ ಇತರ ಸಂಪರ್ಕಗಳ ಮೂಲಕ ದಿನದ ೨೪ ಗಂಟೆಗಳ ಕಾಲ ನೀರು ಪೂರೈಕೆ ಮಾಡುತ್ತಿದೆ. ಈ ಮೂಲಕ ನಗರದ ಶೇ.೯೦ರಷ್ಟು ಜನತೆಗೆ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ನಗರದಲ್ಲಿನ ಪ್ರಸ್ತುತ ದಿನವಹಿ ತಲಾವಾರು ನೀರು ಪೂರೈಕೆ ೧೩೫ ಲೀಟರ್‌ಗಳಾಗಿದೆ. ಎ.ಡಿ.ಬಿ. ಸಾಲ ಯೋಜನೆಯಲ್ಲಿ ಹೆಚ್ಚುವರಿ ೮೨ ದಶಲಕ್ಷ ಲೀಟರ್ ಪ್ರಮಾಣದ ನೀರು ಪೂರೈಕೆ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು ೨೦೦೬ರಲ್ಲಿ ಪೂರ್ಣಗೊಂಡು ನೀರು ಪೂರೈಕೆಗೆ ಸಿದ್ಧವಾಗಲಿದೆ. ೨೦೦೪-೦೫ರಲ್ಲಿ ನೀರು ಸರಬರಾಜು ವ್ಯವಸ್ಥೆಗೆ ವ್ಯಯಿಸಲಾದ ಮೊತ್ತ ರೂ.೧೪.೧೬ ಕೋಟಿಗಳಾದರೆ ನಗರಪಾಲಿಕೆಯ ನೀರು ತೆರಿಗೆ ಸಂಗ್ರಹ ಮೊತ್ತ ರೂ.೧೦.೧೯ ಕೋಟಿಗಳಾಗಿದ್ದಿತು.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರದ ಒಳಚರಂಡಿ ವ್ಯವಸ್ಥೆಯು ೧೯೬೯ ರಿಂದ ಪ್ರಾರಂಭವಾಗಿದ್ದು ಜನಾರೋಗ್ಯ ತಾಂತ್ರಿಕ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿತ್ತು. ನಂತರ ಜಲಮಂಡಳಿಯ ನಿರ್ವಹಣೆಯಲ್ಲಿದ್ದ ವ್ಯವಸ್ಥೆಯು ೧೯೯೪ರಿಂದ ಮಹಾನಗರಪಾಲಿಕೆಗೆ ಹಸ್ತಾಂತರಗೊಂಡಿದೆ. ಪ್ರಸ್ತುತ ೧೪ ಚದರ ಕಿ.ಮೀ.ಗಳ ವ್ಯಾಪ್ತಿಯಲ್ಲಿ ೩೦,೪೦೦ ಒಳಚರಂಡಿ ಸಂಪರ್ಕಗಳಿದ್ದು ಎರಡು ಲಕ್ಷ ಜನರು ಇದರ ಲಾಭ ಪಡೆದಿದ್ದಾರೆ. ಈ ವ್ಯವಸ್ಥೆಯ ಜಾಲವು ೨೩೫ ಕಿ.ಮೀ.ಗಳಷ್ಟು ಇದೆ. ಮ್ಯಾನ್‌ಹೋಲ್‌ಗಳ ನಿರ್ಮಾಣ ಹಾಗೂ ದುರಸ್ತಿ, ಅಶುದ್ಧ ನೀರಿನ ಶುದ್ಧೀಕರಣ ಘಟಕ ನಿರ್ಮಾಣ ಹಾಗೂ ನಿರ್ವಹಣೆಯನ್ನು ಪಾಲಿಕೆಯೇ ನಿರ್ವಹಿಸುತ್ತದೆ. ಮಳೆ ನೀರು ಹರಿಯಲು ವಿಶೇಷವಾಗಿ ನಿರ್ಮಿತವಾದ ೧೧೦ ಕಿ.ಮೀ.ಗಳಷ್ಟು ಉದ್ದದ ಹೊರಚರಂಡಿ ವ್ಯವಸ್ಥೆ ಇದ್ದು ಇದರ ಮೂಲಕ ಮಳೆ ನೀರು ಸಮುದ್ರ ಸೇರುತ್ತದೆ. ನಗರವು ಸಿಡುಬು, ಪ್ಲೇಗ್ ಹಾಗೂ ಕಾಲರಾ ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಮೂರು ಸರ್ಕಾರಿ ಆಸ್ಪತ್ರೆಗಳೂ ಸೇರಿದಂತೆ ಒಟ್ಟು ೫೩ ಆರೋಗ್ಯ ಕೇಂದ್ರಗಳಿದ್ದು ಒಟ್ಟು ೫೭೧೧ ಹಾಸಿಗೆ ವ್ಯವಸ್ಥೆಯ ಸಾಮರ್ಥ್ಯವಿದೆ. ಸೊಳ್ಳೆಗಳಿಂದ ಹರಡುವ ಮಲೇರಿಯಾ ರೋಗದ ನಿಯಂತ್ರಣಕ್ಕೆ ಪಾಲಿಕೆ ಆರೋಗ್ಯ ಶಾಖೆಯ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿಯ ಸಲಹೆ ಸೂಚನೆಗಳನ್ನು ಸೂಕ್ತವಾಗಿ ಕಾರ್ಯಗತಗೊಳಿಸಲಾಗಿದೆ. ಪಾಲಿಕೆಯ ೩೭ ವಾರ್ಡುಗಳಲ್ಲಿ ನೈರ್ಮಲೀಕರಣ ಕೆಲಸವನ್ನು ಗುತ್ತಿಗೆದಾರರ ಮೂಲಕ ಹಾಗೂ ೨೩ ವಾರ್ಡುಗಳಲ್ಲಿ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿದೆ. ಸಾಂಕ್ರಾಮಿಕ ಪಿಡುಗುಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಮಲೇರಿಯಾ ನಿರೋಧಕ ದಳ ಇದ್ದು ಆರೋಗ್ಯಾಧಿಕಾರಿಗಳು ಇದರ ನೇತೃತ್ವ ವಹಿಸಿದ್ದಾರೆ. ಮೂರು ಮಂದಿ ಸಹಾಯಕ ಆರೋಗ್ಯಾಧಿಕಾರಿಗಳೂ ಸೇರಿದಂತೆ ಒಟ್ಟು ೩೯೯ ಮಂದಿಯ ಸಿಬ್ಬಂದಿ ವರ್ಗವು ನೈರ್ಮಲೀಕರಣ ಮತ್ತು ಜನಾರೋಗ್ಯಕ್ಕಾಗಿ ಶ್ರಮಿಸುತ್ತಿದೆ. ಜನನ ಮರಣ ದಾಖಲೆಗಳನ್ನು ಗಣಕೀಕರಣಗೊಳಿಸಲಾಗಿದೆ. ಪಾಲಿಕೆಯ ಆರೋಗ್ಯಾಧಿಕಾರಿಯು ಜನನ ಮರಣಗಳ ನೋಂದಣಾಧಿಕಾರಿಯಾಗಿದ್ದು ಕಿರಿಯ ಮತ್ತು ಹಿರಿಯ ನೈರ್ಮಲ್ಯ ನಿರೀಕ್ಷಕರ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ.

## ಇತರ ಸೌಲಭ್ಯಗಳು

ಪಾಲಿಕೆಯ ವ್ಯಾಪ್ತಿಯಲ್ಲಿ ಜನತೆಯ ಸೌಕರ್ಯಕ್ಕಾಗಿ ೧೧ ಉದ್ಯಾನವನಗಳನ್ನು ನಿರ್ಮಿಸಲಾಗಿದೆ. ೨೦೦೪ರಲ್ಲಿದ್ದಂತೆ ಪಾಲಿಕೆ ವ್ಯಾಪ್ತಿಯಲ್ಲಿ ೪೯ ಕಿ.ಮೀ. ಮಣ್ಣಿನ ರಸ್ತೆ, ೬೦೭ ಕಿ.ಮೀ.ಟಾರ್ ರಸ್ತೆ ಹಾಗೂ ೧೬.೦ ಕಿ.ಮೀ. ಸಿಮೆಂಟ್ ಕಾಂಕ್ರೀಟ್ ರಸ್ತೆ ಸೇರಿದಂತೆ ಒಟ್ಟು ೬೭೨ ಕಿ.ಮೀ.ಉದ್ದದ ರಸ್ತೆ ಇದೆ. ೧೯೩೪ರಲ್ಲಿ ಮಂಗಳೂರು ನಗರದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಬೀದಿದೀಪವನ್ನು ಬೆಳಗಿಸಲಾಯಿತು. ೨೦೦೨–೦೩ನೇ ವರ್ಷದವರೆಗೆ ಅಳವಡಿಸಲಾದ ಬೀದಿ ದೀಪಗಳ ಸಂಖ್ಯೆ:೪೦,೮೦೮ ಆಗಿದೆ. ಇವುಗಳಲ್ಲಿ ೩೮೦೫೦ ಟ್ಯೂಬ್‌ಲೈಟ್‌ಗಳು ಮತ್ತು ೨,೫೦೦ ಸೋಡಿಯಂ ವೇಪರ್, ದೀಪಗಳು ಸೇರಿವೆ. ನಗರದ ಜನತೆಯ ದೈನಂದಿನ ಗೃಹೋಪಯೋಗಿ ವಸ್ತುಗಳ ಮಾರಾಟಕ್ಕೆ ೬೦ ವಿವಿಧ ಮಾರುಕಟ್ಟೆ ಪ್ರದೇಶದ ವ್ಯವಸ್ಥೆ ಇದೆ. ಒಂಭತ್ತು ಸಾರ್ವಜನಿಕ ಆಟದ ಮೈದಾನಗಳನ್ನು ನಿರ್ವಹಿಸಲಾಗುತ್ತಿದೆ. ೧೯೯೫ ರಿಂದ ೧೯೯೮ರವರೆಗೆ ನಗರ ಪಾಲಿಕೆಯ ಆಕ್ಟ್ರಾಯ್ (ಸುಂಕ) ವಿವರವು ಕೆಳಗಿನಂತಿದೆ. ೧೯೯೫–೯೬ ರೂ. ೬,೧೮,೭೬೨೪.೦೦ ೧೯೯೬–೯೭ ರೂ.೫,೮೩,೩೫೦೮೦.೦೦, ೧೯೯೭–೯೮ ರೂ.೬೫೫೪೧೭೪೮.೦೦ ರೂ.ಗಳಾಗಿದೆ. ೨೦೦೧–೦೨ ರಿಂದ ಪಾಲಿಕೆ ಪಡೆದ ಅನುದಾನ/ಸಹಾಯಧನದ ವಿವರ ಹೀಗಿದೆ. ೨೦೦೧–೦೨ ಎಸ್.ಎಫ್.ಸಿ. ವೇತನಾನುದಾನ, ರೂ.೯,೮೨,೯೧,೦೦೦–೦೦ ಮತ್ತು ೨೦೦೩–೦೪ರ ವಿದ್ಯುತ್ ಬಿಲ್ ಪಾವತಿ ಅನುದಾನ ರೂ.೧,೮೮,೮೧,೬೦೬ ಆಗಿತ್ತು. ೨೦೦೪–೦೫ಕ್ಕೆ ಅಂತ್ಯಗೊಂಡಂತೆ ಪಾಲಿಕೆಯು ಕಳೆದ ಮೂರು

ವರ್ಷಗಳಲ್ಲಿ ಪರಿಶಿಷ್ಟ ಜಾತಿ/ಪಂಗಡಗಳಿಗಾಗಿ ಶೇ.೧೮ ಕಾದಿರಿಸಿದ ನಿಧಿಯ ವೆಚ್ಚದ ವಿವರ ಹೀಗಿದೆ. ೨೦೦೨–೦೩ ರೂ.೮೫,೨೮,೧೨೧–೦೦, ೨೦೦೩–೦೪ ರೂ.೧,೧೨,೨೮,೯೭–೦೦, ೨೦೦೪–೦೫ ರೂ.೧,೩೨,೨೫,೯೨೨–೦೦ ಆಗಿತ್ತು

**ಕೋಷ್ಟಕ ೧೨.೧೪ : ನಗರಪಾಲಿಕೆಯು ವಿವಿಧ ಬಾಬ್ತುಗಳಿಗೆ ಆಯ್ದ ವರ್ಷಗಳಲ್ಲಿ ಮಾಡಿದ ಖರ್ಚಿನ ವಿವರ**

| ಕ್ರ.ಸಂ. | ವಿವರ | ಖರ್ಚು | |
|---|---|---|---|
| | | ೧೯೯೮–೯೯ | ೨೦೦೧–೦೨ |
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೯,೬೭,೯೬,೨೫೯.೦೦ | ೧೬,೮೦,೧೦,೦೦೦.೦೦ |
| ೨ | ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗಳು | ೩,೧೮,೫೬,೯೨೦.೦೦ | ೧,೮೧,೬೦,೦೦೦.೦೦ |
| ೩ | ನೀರು ಸರಬರಾಜು | ೬,೮೬,೯೬,೨೫೯.೦೦ | ೧೨,೦೬೫೦,೦೦೦.೦೦ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೫,೬೬,೯೫,೭೮೮.೦೦ | ೩,೬೦,೦೦,೦೦೦.೦೦ |
| ೫ | ಚರಂಡಿ ಮತ್ತು ರೋಗ ನಿಯಂತ್ರಣ | ೧,೫೬,೮೦,೮೫೦.೦೦ | ೧,೪೦,೧೦,೦೦೦.೦೦ |
| ೬ | ಸಿಬ್ಬಂದಿ ಪ್ರಭಾರ ವೇತನ | – | – |
| ೭ | ಇತರೆ | ೧,೪೩,೬೦,೦೩೧ | ೨,೮೯,೩೦,೦೦೦.೦೦ |

**ಮೂಲ** : ಮಹಾನಗರಪಾಲಿಕೆ – ಮಂಗಳೂರು.

**ಕೋಷ್ಟಕ ೧೨.೧೫ : ಪಾಲಿಕೆಯಲ್ಲಿ ೧೯೯೯ ರಿಂದ ೨೦೦೪ರವರೆಗಿನ ಆದಾಯ ವೆಚ್ಚ ತ:ಖ್ತೆ (ರೂ.ಲಕ್ಷಗಳು)**

| ವಿವರ | ೧೯೯೯–೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ |
|---|---|---|---|---|---|
| ಆರಂಭದ ಶಿಲ್ಕು | ೪೧೬.೨೯೫ | ೫೭೮.೨೪೦ | ೪೭೭.೯೨೮ | ೧೦೦೬.೭೦೩ | ೬೩೬.೦೪೩ |
| ಆದಾಯ | ೩೨೨೯.೯೨೦ | ೩೪೬೮.೧೨೦ | ೩೭೩೨.೧೯೦ | ೩೧೦೨,೩೧೦ | ೩೮೯೪.೯೭೦ |
| ಖರ್ಚು | ೩೨೭೪.೪೮೦ | ೩೮೬೦.೧೩೦ | ೪೦೯೬.೪೭೦ | ೨೭೯೮.೨೨೦ | ೩೩೫೨.೧೩೦ |
| ಅಖೈರು ಶಿಲ್ಕು | ೫೭೮.೨೪೦ | ೪೭೭.೯೨೮ | ೧೦೦೬.೭೦೩ | ೬೩೬.೦೪೩ | ೪೫೮.೧೦೯ |

**ಮೂಲ**: ನಗರಪಾಲಿಕೆ, ಮಂಗಳೂರು.

## ನಗರ ಪಂಚಾಯ್ತಿ, ಸುಳ್ಯ

ಸುಳ್ಯ ಪುರಸಭೆಯು ಜನವರಿ ೧೯೭೫ರಲ್ಲಿ ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ೧೨ ಚುನಾಯಿತ ಸದಸ್ಯರಿದ್ದರು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ೨೦೦೧ರ ನವೆಂಬರ್‌ನಲ್ಲಿ ಪುರಸಭಾ ಚುನಾವಣೆ ನಡೆಯಿತು. ಪ್ರಸ್ತುತ ಚುನಾಯಿತ ಸದಸ್ಯರ ಸಂಖ್ಯೆ–೧೫. ಸ್ಥಾನಗಳ ಮೀಸಲಾತಿ ವಿವರ ಸಾಮಾನ್ಯ– ೦೭ (೩–ಮಹಿಳೆ), ಹಿಂದುಳಿದ ವರ್ಗ ಎ–೦೪ (೨ ಮಹಿಳೆ), ಹಿಂದುಳಿದ ವರ್ಗ ಬಿ–೦೧, ಅನುಸೂಚಿತ ಜಾತಿ–೦೧ (ಮಹಿಳಾ), ಆನುಸೂಚಿತ ಪಂಗಡ–೦೧ (ಮಹಿಳೆ). ೨೦೦೪ರಲ್ಲಿ ಸುಳ್ಯ ನಗರ ಪಂಚಾಯಿತಿ ವ್ಯಾಪ್ತಿ ೭.೬೧ ಚ.ಕಿ.ಮೀ. ಇದ್ದು ೧೫ ವಾರ್ಡುಗಳಾಗಿ ವಿಂಗಡಣೆಯಾಗಿದೆ. ೨೦೦೩–೦೪ರಲ್ಲಿ ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ೪,೨೨೩ ಮನೆಗಳಿದ್ದವು. ೨೦೦೩–೦೪ ವರ್ಷದಲ್ಲಿ ತೆರಿಗೆ ಸಂದಾಯ ಮಾಡಿದವರ ಸಂಖ್ಯೆ – ೩,೨೦೫, ಖಾತೆಗಳ ಸಂಖ್ಯೆ ೪,೨೨೩ ಇದ್ದು ತಲಾವಾರು ಸರಾಸರಿ ಕರಭಾರ ರೂ.೪೪೪ ಆಗಿದೆ.

**ಕೋಷ್ಟಕ ೧೨.೧೬ : ನಗರಪಂಚಾಯಿತ್ತಿ ವ್ಯಾಪ್ತಿಯಲ್ಲಿ ರಚಿಸಲಾದ ಬಡಾವಣೆಗಳ ವಿವರ ಹೀಗಿದೆ.**

| ಬಡಾವಣೆ | ಖರ್ಚು (ರೂ.) | ಅಂದಾಜು ಮನೆಗಳು |
|---|---|---|
| ಜಯನಗರ | ೯೦೭೮೯ | ೧೨೦ |
| ಬೆಟ್ಟಂಪಾಡಿ | ೧೦೪೦೬೮ | ೭೫ |
| ನಾವೂರು ಗಾಂಧೀನಗರ | ೫೫೨೦೩೩ | ೧೦೮ |
| ಜಮೀಪಳ್ಳಿ | ೫೯೨೮೩೧ | ೬೦ |

ಹುಡ್ಕೊ ಯೋಜನೆಯಲ್ಲಿ ದುಗ್ಗಲಡ್ಕ, ನೀರಬಿದಿರೆ, ಅಮ್ಮೆ, ಕೊಡಿಯಾಲಬೈಲ್‌ಗಳಿಗೆ ರಸ್ತೆ ಅಭಿವೃದ್ಧಿಗೊಳಿಸಲಾಗಿದ್ದು ೧೫೦ ಮನೆಗಳನ್ನೂ ನಿರ್ಮಾಣ ಮಾಡಲಾಗಿದೆ.

## ನೀರು ಸರಬರಾಜು

ಬಹಳ ಹಿಂದಿನಿಂದಲೂ ನಗರಕ್ಕೆ ಪಯಸ್ವಿನಿ ನದಿಯೇ ನೀರಿನ ಮೂಲವಾಗಿದೆ. ೧೯೭೪ರಲ್ಲಿ ಕೆ.ಯು.ಡಬ್ಲ್ಯು.ಎಸ್. ವತಿಯಿಂದ ಯಾಂತ್ರೀಕೃತ ನೀರು ಪೂರೈಕೆ ಯೋಜನೆ ಪೂರ್ಣಗೊಂಡಿದ್ದು ಅಂದಿನಿಂದಲೂ ನಗರ ಪಂಚಾಯಿತ್ತಿಯೇ ನೀರಿನ ಪೂರೈಕೆಯನ್ನು ನಿರ್ವಹಿಸುತ್ತಿದೆ. ಕೆಲವು ಬಡಾವಣೆಗಳಿಗೆ ಕೊಳವೆ ಬಾವಿಗಳಿಂದಲೂ ನೀರಿನ ಪೂರೈಕೆಯಾಗುತ್ತಿದೆ. ನಗರ ನೀರು ಪೂರೈಕೆಗೆ ಪೂರಕವಾಗುವಂತೆ ವೆಂಟೆಡ್ ಡ್ಯಾಮ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಈ ಯೋಜನೆಯ ಅಂದಾಜು ವೆಚ್ಚ ೧.೮೭ ಕೋಟಿ ರೂ.ಗಳು. ನಗರ ಪಂಚಾಯಿತ್ತಿ ವ್ಯಾಪ್ತಿಯಲ್ಲಿ ಐದು ಪೂರಕ ನೀರು ಸಂಗ್ರಾಹಕಗಳಿದ್ದು ಇವುಗಳ ಸಂಗ್ರಹಣಾ ಸಾಮರ್ಥ್ಯವು ೨೦ ಸಾವಿರ ಲೀಟರ್‌ಗಳಿಂದ ೪.೫ ಲಕ್ಷ ಲೀಟರ್‌ಗಳಾಗಿದೆ. ೨೦೦೪ರಲ್ಲಿ ನಗರದಲ್ಲಿ ೨೦೩೩ ಗೃಹಬಳಕೆ ಸಂಪರ್ಕಗಳು ಮತ್ತು ೭೦ ಸಾರ್ವಜನಿಕ ಬೀದಿ ನಲ್ಲಿಗಳಿದ್ದವು. ದಿನವಹಿ ನೀರು ಸರಬರಾಜು ಪ್ರಮಾಣ ೧.೪೫ ದಶಲಕ್ಷ ಲೀಟರ್‌ಗಳಾಗಿದ್ದು ದಿನವಹಿ ತಲಾವಾರು ನೀರಿನ ಹಂಚಿಕೆ ೧೦೦ ಲೀಟರ್ ಆಗಿದೆ. ೨೦೦೪ ವರ್ಷದವರೆಗೆ ಕೆಲ ಹಿಂದಿನ ವರ್ಷಗಳ ನೀರು ಸರಬರಾಜಿನ ವೆಚ್ಚ ಮತ್ತು ನೀರು ತೆರಿಗೆ ಆದಾಯದ ವಿವರಗಳು ಹೀಗಿವೆ

**ಕೋಷ್ಟಕ ೧೨.೧೭**

| ವರ್ಷ | ಆದಾಯ | ತಗುಲಿದ ಒಟ್ಟು ವೆಚ್ಚ |
|---|---|---|
| ೧೯೯೮–೯೯ | ೯,೯೨,೩೧೩ | ೧೦,೧೯೭೯೮.೦೦ |
| ೧೯೯೯–೦೦ | ೧೦,೫೧,೫೧೯ | ೧೨,೩೮,೮೧೬.೦೦ |
| ೨೦೦೦–೦೧ | ೧೧,೧೯,೫೨೪ | ೧೩,೧೩,೪೧೬.೦೦ |
| ೨೦೦೧–೦೨ | ೧೨,೩೦,೭೭೭ | ೮,೫೭,೭೧೬.೦೦ |
| ೨೦೦೨–೦೩ | ೧೬,೦೫,೧೧೫ | ೧೫,೭೯,೨೭೫.೦೦ |
| ೨೦೦೩–೦೪ | ೧೫,೯೨,೪೨೬ | ೨೩,೩೯,೨೦೩.೦೦ |

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರವು ಈಗ ಸಿಡುಬು, ಪ್ಲೇಗ್, ಕಾಲರಾ ಮತ್ತು ಮಲೇರಿಯಾ ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಇಲಿಗಳ ನಿಯಂತ್ರಣ, ಸಾರ್ವತ್ರಿಕ ಲಸಿಕೆ ನೀಡುವಿಕೆ, ಹೋಟೆಲ್‌ಗಳ ನೈರ್ಮಲ್ಯ, ಪರಿಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಗರಪಂಚಾಯಿತ್ತಿ ವ್ಯಾಪ್ತಿಯಲ್ಲಿ ಆರೋಗ್ಯ ನಿರೀಕ್ಷಕರು ಜನನ–ಮರಣ ದಾಖಲಾತಿಗಳನ್ನು ನಿರ್ವಹಿಸುತ್ತಾರೆ.

೨೦೦೨–೦೩ರಿಂದ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿದೆ. ಇದಕ್ಕೆ ತಗುಲಿದ ವೆಚ್ಚ ೨.೮೭ ಕೋಟಿ. ಈ ಮೊತ್ತದ ಶೇ.೨೫ ನಗರ ಪಂಚಾಯಿತಿ ಭರಿಸಿದೆ. ಶೇ.೫೦ ಮೊತ್ತವನ್ನು ಸಾಲ ರೂಪದಲ್ಲಿ ಪಡೆದಿದ್ದು ಉಳಿದ ಶೇ.೨೫ರ ಮೊತ್ತವು ರಾಜ್ಯ ಸರಕಾರದ ಅನುದಾನದ ರೂಪದಲ್ಲಿ ದೊರಕಿದೆ. ನಗರ ನೈರ್ಮಲ್ಯ ನಿರ್ವಹಣೆಗೆ ಮೂರು ಮಂದಿ ಕಾರ್ಮಿಕರಿದ್ದು ಕಸ ಸಂಗ್ರಹಣೆ ಹಾಗೂ ವಿಲೇವಾರಿ ಕೆಲಸಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ ಗುತ್ತಿಗೆ ನೀಡಿ ನಿರ್ವಹಿಸಲಾಗುತ್ತಿದೆ.

## ಇತರೆ ಸೌಲಭ್ಯಗಳು

ಪಂಚಾಯಿತಿ ವ್ಯಾಪ್ತಿಯಲ್ಲಿ ೨೦೦೧ರಲ್ಲಿ ೫೦ ಸಾವಿರ ರೂ.ಗಳ ವೆಚ್ಚದಲ್ಲಿ ಒಂದು ಉದ್ಯಾನವನ ನಿರ್ಮಿಸಲಾಗಿತ್ತು. ಮತ್ತೆ ೨೦೦೪ರಲ್ಲಿ ೧,೧೭,೫೦೦ ರೂ.ಗಳ ವೆಚ್ಚದಲ್ಲಿ ಮತ್ತೊಂದು ಉದ್ಯಾನವನ ನಿರ್ಮಿಸಲಾಗಿದೆ. ಪಂಚಾಯಿತಿ ವ್ಯಾಪ್ತಿಯ ರಸ್ತೆಗಳ ವಿವರ ಹೀಗಿದೆ. ೩೫ ಕಿ.ಮೀಗಳಷ್ಟು ಉದ್ದದ ಟಾರ್ ರಸ್ತೆ ಮತ್ತು ೩೧ ಕಿ.ಮೀ. ಉದ್ದದ ಮಣ್ಣಿನ ರಸ್ತೆಗಳಿವೆ. ಪಂಚಾಯಿತಿಯು ಸಾಂಸ್ಕೃತಿಕ ಚಟುವಟಿಕೆಗಳಿಗೂ ಸೂಕ್ತ ಬೆಂಬಲ ನೀಡಿದ್ದು, ಸಂಸ್ಥೆಗಳ ಮೂಲಕ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಅನುದಾನ ನೀಡುತ್ತಿದೆ. ೨೦೦೨ರಲ್ಲಿ ರೂ.೧೬೦೦.೦೦, ೨೦೦೩ರಲ್ಲಿ ರೂ.೪೫೦೦.೦೦ ಮತ್ತು ೨೦೦೪ರಲ್ಲಿ ರೂ.೩೦,೫೦೦.೦೦ಗಳನ್ನು ಅನುದಾನದ ರೂಪದಲ್ಲಿ ನೀಡಿದೆ.

**ಕೋಷ್ಟಕ ೧೨.೧೮ : ೧೯೯೯ ವರ್ಷದಿಂದ ೨೦೦೪ರವರೆಗೆ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ದೀಪ ಅಳವಡಿಸಿದ ವಿವರ ಕೆಳಕಂಡಂತಿದೆ.**

| ವರ್ಷ | ಮನೆದೀಪ | ಬೀದಿ ದೀಪ | ವಾಣಿಜ್ಯ ಸಂಸ್ಥೆ |
|---|---|---|---|
| ೧೯೯೯–೦೦ | ೧೧೬೦೦ | ೧೩೬ | ೩ |
| ೨೦೦೦–೦೧ | ೧೪೦೧೦ | ೧೭೦ | ೬ |
| ೨೦೦೧–೦೨ | ೧೬೦೮೦ | ೧೯೬ | ೯ |
| ೨೦೦೨–೦೩ | ೧೭೧೬೦ | ೨೦೬ | ೧೦ |
| ೨೦೦೩–೦೪ | ೧೮೬೦೦ | ೨೧೬ | ೧೧ |

**ಕೋಷ್ಟಕ ೧೨.೧೯ : ೨೦೦೧–೦೨ ರಿಂದ ನಗರ ಪಂಚಾಯ್ತಿಯು ಪಡೆದ ವಿವಿಧ ಅನುದಾನದ ವಿವರಗಳು**

| ಕ್ರ.ಸಂ. | ವಿವರ | ೨೦೦೧–೦೨ | ೨೦೦೨–೦೩ | ೨೦೦೩–೦೪ |
|---|---|---|---|---|
| ೧ | ವೇತನ ಅನುದಾನ | ೧೮,೦೪,೭೫೨ | ೧೧,೯೦,೦೧೯ | ೧೨,೯೮,೧೦೮ |
| ೨ | ಶಹರಿ ರೋಜಗಾರ್ | ೩೫,೦೯೦ | – | – |
| ೩ | ಮಳೆಹಾನಿ ದುರಸ್ತಿ | ೨,೨೫,೦೦೦ | – | – |
| ೪ | ಲೋಕಸಭಾ ಸದಸ್ಯರ ಅನುದಾನ | ೫,೦೦,೦೦೦ | ೫,೭೫,೦೦೦ | – |
| ೫ | ಶಾಸಕರ ಪ್ರದೇಶಾಭಿವೃದ್ಧಿ ನಿಧಿ | – | ೪,೪೯,೭೧೭ | – |
| ೬ | ಎಸ್.ಎಫ್.ಸಿ. ವಿಶೇಷ ಅನುದಾನ | – | ೮,೫೦,೦೦೦ | ೧೧,೪೧,೩೨೯ |
| ೭ | ವಿದ್ಯುತ್ ವೆಚ್ಚ ಹೊಂದಾಣಿಕೆ | – | ೬,೩೩,೨೨೫ | ೫,೦೦,೦೦೦ |
| ೮ | ೧೧ನೇ ಹಣಕಾಸು ಆಯೋಗದ ಅನುದಾನ | – | – | – |

**ಮೂಲ:** ನಗರ ಪಂಚಾಯ್ತಿ, ಸುಳ್ಯ

ನಗರ ಪಂಚಾಯ್ತಿಯು ೨೦೦೧ ರಿಂದ ೨೦೦೪ರವರೆಗೆ ಪರಿಶಿಷ್ಟಜಾತಿ/ಪರಿಶಿಷ್ಟ ಜಾತಿ ಪಂಗಡ ಮೀಸಲಿಟ್ಟ ಶೇ ೧೮ ರ ನಿಧಿಯ ವೆಚ್ಚದ ವಿವರ ಹೀಗಿದೆ. ೨೦೦೧–೦೨ರಲ್ಲಿ ರೂ.೧,೫೬,೧೬೭.೦೦, ೨೦೦೨–೦೩ರಲ್ಲಿ ರೂ.೧,೩೪,೧೫೧ ಮತ್ತು ೨೦೦೩–೦೪ರಲ್ಲಿ ರೂ..೨,೪೩,೭೯೮ ಗಳನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ.

**ಕೋಷ್ಟಕ ೧೨.೨೦**

**ನಗರ ಪಂಚಾಯಿತ್ತಿಯು ಕಳೆದ ಕೆಲವು ವರ್ಷಗಳಲ್ಲಿ ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚು ವಿವರ**

(ಲಕ್ಷ ರೂ.ಗಳಲ್ಲಿ)

| ಕ್ರ.ಸ | ವಿವರ | ವರ್ಷಗಳು | | | |
|---|---|---|---|---|---|
| | | ೯೮–೯೯ | ೯೯–೦೦ | ೦೦–೦೧ | ೦೧–೦೨ |
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧.೭೩ | ೪.೦೧ | ೪.೨೨ | ೫.೦೨ |
| ೨ | ಪುರಸಭೆ ವತಿಯಿಂದ ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗಳು | ೧೬.೮೨ | ೨೫.೧೨ | ೧೮.೬೧ | ೨೦.೪೭ |
| ೩ | ನೀರು ಸರಬರಾಜು | ೧೫.೩೨ | ೨೦.೯೧ | ೧೮.೪೪ | ೧೧.೭೦ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೨.೬೨ | ೫.೦೫ | ೩.೦೨ | ೩.೯೪ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | – | – | – | – |
| ೬ | ಸಿಬ್ಬಂದಿ ವೇತನ | ೧೨.೯೩ | ೧೮.೮೭ | ೧೫.೧೪ | ೨೫.೮೧ |
| ೭ | ಇತರೆ ವೆಚ್ಚಗಳು | ೫೦.೫೮ | ೨೬.೦೧ | ೪೦.೫೭ | ೩೩.೦೬ |

**ಕೋಷ್ಟಕ ೧೨.೨೧ : ನಗರ ಪಂಚಾಯಿತ್ತಿಯಲ್ಲಿ ೧೯೯೭ ರಿಂದ ೨೦೦೪ರವರೆಗೆ ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

| ಕ್ರ.ಸಂ. | ಕಾರ್ಯಕ್ರಮಗಳು | ಅನುದಾನ | ಖರ್ಚು | ಫಲಾನುಭವಿ ಸಂಖ್ಯೆ |
|---|---|---|---|---|
| ೧ | ಸಣ್ಣ ಉದ್ದಿಮೆ | ೨,೮೮,೦೭೬ | ೨,೮೮,೦೭೬ | ೬೨ ಮಂದಿ |
| ೨ | ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ | ೨,೫೦,೦೦೦ | ೨,೫೦,೦೦೦ | ೩ ಗುಂಪು |
| ೩ | ನಿರಂತರ ಉಳಿತಾಯ ಮತ್ತು ಸಾಲ ಗುಂಪುಗಳು | ೩,೬೦,೦೦೦ | ೩,೬೦,೦೦೦ | ೩೬೦ ಮಂದಿ |
| ೪ | ತರಬೇತಿ | ೩,೪೫,೨೬೫ | ೨,೫೪,೫೫೬ | ೧೧೫ ಮಂದಿ |
| ೫ | ಸಮುದಾಯ ಭವನ | ೧೦,೦೦,೦೦೦ | ೧೦,೦೦,೦೦೦ | ೧ ಕಾಮಗಾರಿ |
| ೬ | ನಗರ ಕೂಲಿ ಉದ್ಯೋಗ | ೧೨,೦೦,೪೨೯ | ೧೧,೩೭,೯೮೧ | ೪೨ ಕಾಮಗಾರಿಗಳು |
| ೭ | ಸಾಮಾಜಿಕ ಸೇವಾ ಚಟುವಟಿಕೆ | ೨,೦೮,೨೩೪ | ೨,೦೮,೨೩೪ | ೨೮ ಚಟುವಟಿಕೆಗಳು |
| ೮ | ಆಡಳಿತ ವೆಚ್ಚ | ೬,೯೨,೪೭೮ | ೬,೯೨,೪೭೮ | – |
| ೯ | ಬಡ್ಡಿ | ೩೧,೪೨೬ | ೧೯,೩೫೨ | – |
| | ಒಟ್ಟು | ೪೩,೭೫,೯೦೯ | ೪೨,೧೦,೬೭೭ | ಉಳಿಕೆ ೧,೬೫,೨೩೨ |

**ಕೋಷ್ಟಕ ೧೨.೨೨ : ೧೯೯೯–೨೦೦೦ ದಿಂದ ೨೦೦೩–೦೪ರವರೆಗಿನ ಆದಾಯ ವೆಚ್ಚದ ವಿವರ**

| ವರ್ಷ | ಆದಾಯ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೯–೦೦ | ೨೮.೦೨ | – |
| ೨೦೦೦–೦೧ | ೨೮.೮೬ | – |
| ೨೦೦೧–೦೨ | ೩೦.೪೬ | – |
| ೨೦೦೨–೦೩ | ೩೫.೧೩ | – |
| ೨೦೦೩–೦೪ | ೪೧.೧೯ | – |

**ಮೂಲ** : ನಗರ ಪಂಚಾಯ್ತಿ, ಸುಳ್ಯ

## ಪುರಸಭೆ ಪುತ್ತೂರು

ಪುತ್ತೂರು ಪುರಸಭೆಯು ೧೯೭೩ರಲ್ಲಿ ಪ್ರಾರಂಭವಾಯಿತು. ಆಗಿನ ಚುನಾಯಿತ ಸದಸ್ಯರ ಸಂಖ್ಯೆ –೧೩. ಸಂವಿಧಾನದ ೭೪ನೇ ತಿದ್ದುಪಡಿಯನ್ವಯ ೨೦೦೧ರ ನವೆಂಬರ್‌ನಲ್ಲಿ ಪುರಸಭೆ ಚುನಾವಣೆ ನಡೆದು ೨೭ ಸದಸ್ಯರು ಆಯ್ಕೆಗೊಂಡಿರುತ್ತಾರೆ. ಸದಸ್ಯರಲ್ಲಿ ಸಾಮಾನ್ಯ ವರ್ಗದ ೧೦ ಹಾಗೂ ಮೀಸಲಿರಿಸಿದ ಸ್ಥಾನಗಳ ೧೭ ಮಂದಿ ಇರುತ್ತಾರೆ. ೨೦೦೪ರಲ್ಲಿ ಪುತ್ತೂರು ಪುರಸಭೆಯ ವ್ಯಾಪ್ತಿ ೩೬.೧೧ ಚ.ಕಿ.ಮೀ. ಗಳಷ್ಟಿತ್ತು. ೨೭ ವಾರ್ಡುಗಳಾಗಿ ವಿಂಗಡಿಸಲ್ಪಟ್ಟ ನಗರದಲ್ಲಿ ಅದೇ ವರ್ಷ ೧೩,೭೩೬ ಮನೆಗಳಿದ್ದವು. ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೧೦,೧೦೦ ಮಂದಿ. ಸರಾಸರಿ (ತಲಾವಾರು) ಕರಭಾರ ರೂ.೩೯೬.೦೦ ಆಗಿದೆ.

## ನೀರು ಸರಬರಾಜು

ನಗರಕ್ಕೆ ಪುರಸಭೆಯ ವತಿಯಿಂದಲೇ ನೀರು ಸರಬರಾಜು ಆಗುತ್ತದೆ. ಕುಮಾರಧಾರ ನದಿಯು ನೀರಿನ ಮೂಲವಾಗಿದೆ. ೧೯೭೭ರಲ್ಲಿ ಪುರಸಭೆಯ ವತಿಯಿಂದ ನದಿ ನೀರು ಸರಬರಾಜು ಪ್ರಾರಂಭವಾಗಿ ೧೯೯೬ ರಿಂದ ನೀರು ಸರಬರಾಜು ನಿರ್ವಹಣೆಯನ್ನು ಪುರಸಭೆಗೆ ವಹಿಸಲಾಗಿದೆ. ೧೯೮೩ರಲ್ಲಿ ೯೧.೫೦ ಲಕ್ಷ ರೂ.ಗಳ ವೆಚ್ಚದಲ್ಲಿ ವಿರೇಚಕ ಸ್ಥಾವರ, ಜಲಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ. ಒಂದು ದಿನಕ್ಕೆ ೪೫ ಲಕ್ಷ ಲೀಟರ್ ನೀರು ಸರಬರಾಜಾಗುತ್ತದೆ. ಯೋಜನೆಯ ವೆಚ್ಚವನ್ನು ಹುಡ್ಕೊ ಹಾಗೂ ಭಾರತೀಯ ಜೀವ ವಿಮಾ ನಿಗಮಗಳಿಂದ ಸಾಲ ಪಡೆದು ಭರಿಸಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ೧೮ ಪೂರಕ ನೀರು ಸಂಗ್ರಹಾಗಾರಗಳಿದ್ದು ಅವುಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ ೧೮ ಲಕ್ಷ ಲೀಟರ್‌ಗಳಾಗಿದೆ. ನಗರದ ವ್ಯಾಪ್ತಿಯಲ್ಲಿ ೪೭೧೨ ಗೃಹಬಳಕೆ ನೀರಿನ ಸಂಪರ್ಕಗಳು ಹಾಗೂ ೯೫೫ ಸಾರ್ವಜನಿಕ ನಲ್ಲಿಗಳಿವೆ. ದಿನವೊಂದಕ್ಕೆ ೪.೯೮ ದಶಲಕ್ಷ ಲೀಟರ್‌ನಷ್ಟು ನೀರನ್ನು ಸರಬರಾಜು ಮಾಡಲಾಗುತ್ತದೆ. ದಿನವಹಿ ತಲಾವಾರು ನೀರು ಹಂಚಿಕೆ ೯೬.೬ ಲೀಟರ್ ಆಗಿದೆ. ೨೦೦೧ರಲ್ಲಿ ನೀರು ಸರಬರಾಜು ವೆಚ್ಚ ರೂ.೫೦,೨೧,೩೯೩.೦೦ ಮತ್ತು ನೀರು ತೆರಿಗೆ ಆದಾಯ ರೂ.೧೫,೬೨,೩೩೨.೦೦, ೨೦೦೪ರಲ್ಲಿ ನೀರು ಸಬರಾಜು ವೆಚ್ಚ ರೂ.೪೬,೩೪,೬೧೩ ಹಾಗೂ ನೀರು ತೆರಿಗೆ ಆದಾಯ ರೂ.೨೮,೮೮,೭೭೨ ಆಗಿತ್ತು.

## ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ನಗರವು ಸಾಂಕ್ರಾಮಿಕ ರೋಗಮುಕ್ತವಾಗಿದೆ. ಸಿಡುಬು, ಪ್ಲೇಗ್, ಕಾಲರಾ ಮತ್ತು ಮಲೇರಿಯಾದಂತ ರೋಗಗಳ ತಡೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ನೀಡುವುದು, ಇಲಿಗಳ ನಿಯಂತ್ರಣ, ಸೊಳ್ಳೆ ನಿವಾರಣೆಗೆ ಔಷಧಿ ಸಿಂಪಡಣೆ (ಬೆಟೆಕ್ಸ್) ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ನಿರೀಕ್ಷಕರು ಜನನ–ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನಗರದ ಒಳಚರಂಡಿ ವ್ಯವಸ್ಥೆ ಅಂಗವಾಗಿ ಪುರಸಭೆಯ ವತಿಯಿಂದ ಸೆಪ್ಟಿಕ್ ಟ್ಯಾಂಕ್ ಸೌಲಭ್ಯ ಕಲ್ಪಿಸಲಾಗಿದೆ. ಪುರಸಭೆಯಲ್ಲಿರುವ ೨೬ ಮಂದಿ ಪುರಸಭೆಯ ಪೌರಕಾರ್ಮಿಕರು ನಗರ ನೈರ್ಮಲ್ಯ ವ್ಯವಸ್ಥೆಯನ್ನು ನಿರ್ವಹಿಸುತ್ತಾರೆ. ಉಸ್ತುವಾರಿ ವಹಿಸಲು ಒಬ್ಬ ಪರಿಸರ ಅಭಿಯಂತರರು, ಒಬ್ಬ ಆರೋಗ್ಯ ನಿರೀಕ್ಷಕರು ಮತ್ತು ಒಬ್ಬ ಸ್ಯಾನಿಟರಿ ದಫೇದಾರ್ ಇದ್ದಾರೆ. ಪುರಸಭೆ ವತಿಯಿಂದ ಮಳೆ ನೀರು ಹರಿಯುವ ಹೊರ ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

## ಇತರೆ ಸೌಲಭ್ಯಗಳು

ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ೧೨೦೦ ಚ.ಕಿ.ಮೀ. ವಿಸ್ತೀರ್ಣದ ಒಂದು ಉದ್ಯಾನವನ್ನು ನಿರ್ಮಿಸಿದೆ. ನಗರ ವ್ಯಾಪ್ತಿಯಲ್ಲಿ ಒಟ್ಟು ೧೨೯.೭೨ ಕಿ.ಮೀ. ರಸ್ತೆ ಸೌಲಭ್ಯವಿದ್ದು ಪುರಸಭೆ ೯೯.೭೨ ಕಿ.ಮೀ. ರಸ್ತೆ ನಿರ್ವಹಿಸುತ್ತದೆ. ಉಳಿದಂತೆ ೨೪ ಕಿ.ಮೀ. ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿದ್ದು, ನಗರ ವ್ಯಾಪ್ತಿಯಲ್ಲಿ ಆರು ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯೂ ಇದೆ. ಪುರಸಭೆಯು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳನ್ನು ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಈ ನಿಟ್ಟಿನಲ್ಲಿ ಅದು ನೀಡಿದ ಅನುದಾನದ ವಿವರ ಹೀಗಿದೆ. ವರ್ಷ ೨೦೦೩–೦೪ರಲ್ಲಿ ರೂ.೯೦,೦೦೦.೦೦, ೨೦೦೪–೦೫ರಲ್ಲಿ ಒಂದು ಲಕ್ಷ ಮತ್ತು ೨೦೦೫–೦೬ರಲ್ಲಿ ಒಂದು ಲಕ್ಷಗಳನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ ಹಾಗೂ ಒಟ್ಟು ೬೭ ಸಾವಿರದಷ್ಟು ಹಣವನ್ನು ಖರ್ಚು ಮಾಡಲಾಗಿದೆ. ೨೦೦೧ ರಿಂದ ೨೦೦೪ರವರೆಗೆ ಪುರಸಭೆ ನಡೆದ ವೇತನಾನುದಾನ ಈ ರೀತಿ ಇದೆ. ೨೦೦೧–೦೨ರಲ್ಲಿ ರೂ.೩೩,೩೫,೪೮೬, ೨೦೦೨–೦೩ರಲ್ಲಿ

ರೂ.೨೫,೧೦,೮೪೨ ಹಾಗೂ ೨೦೦೩–೦೪ರಲ್ಲಿ ರೂ.೫೫,೮೮,೨೬೭ ರಂತೆ ಪಡೆದಿದೆ. ಪುರಸಭೆಯು ೨೦೦೧ರಿಂದ ಈವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗಾಗಿ ಕಾಯ್ದಿರಿಸಿದ ಶೇ.೧೮ರ ನಿಧಿಯ ವಿವರ ಹೀಗಿದೆ. ೨೦೦೧–೦೨ ರೂ.೧೭,೫೦,೦೦೦, ೨೦೦೨–೦೩ ರೂ.೧೨,೭೩,೦೦೦ ಮತ್ತು ೨೦೦೩–೦೪ ರೂ.೧೩,೭೧,೦೦೦ ಆಗಿದ್ದು ಖರ್ಚು ಅನುಕ್ರಮವಾಗಿ ರೂ.೧೬,೦೭,೪೩೫, ರೂ.೧೧,೭೮,೫೦೦ ಹಾಗೂ ೭,೯೬,೦೫೦ ಆಗಿದೆ.

**ಕೋಷ್ಟಕ ೧೨.೨೩ : ೧೯೯೮ ರಿಂದ ೨೦೦೨ರವರೆಗೆ ಪುರಸಭೆಯ ಖರ್ಚಿನ ವಿವರ**

(ರೂ.ಗಳಲ್ಲಿ)

| ಕ್ರ.ಸಂ. | ವಿವರ | ೯೮–೯೯ | ೯೯–೨೦೦೦ | ೨೦೦೦–೦೧ | ೨೦೦೧–೦೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧,೧೩,೬೩೯ | ೫,೯೨,೬೩೧ | ೪,೦೫,೩೯೯ | ೯,೬೪,೮೬೪ |
| ೨ | ಸಾರ್ವಜನಿಕ ಕಾಮಗಾರಿ | ೧,೪೨,೨೫೬ | ೧,೦೬,೭೮೭ | ೧೪,೪೪,೮೦೧ | ೨,೦೦,೦೦೦ |
| ೩ | ನೀರು ಸರಬರಾಜು | ೧೯,೩೧,೦೧೨ | ೩೧,೪೮,೫೭೫ | ೨೪,೩೭,೭೪೦ | ೪೨,೧೬,೦೪೫ |
| ೪ | ರಸ್ತೆ ಮತ್ತು ದೀಪನಿರ್ವಹಣೆ | ೧೫,೯೦,೮೯೯ | ೨೧,೪೪,೪೫೫ | ೭,೭೫,೩೩೦ | ೧೮,೧೦,೬೩೫ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೪,೯೧,೩೭೨ | ೪,೯೯,೨೫೮ | ೩,೪೦,೦೬೨ | ೩,೦೭,೪೭೧ |
| ೬ | ಸಿಬ್ಬಂದಿ ಪ್ರಭಾರ | ೨೮,೪೪,೭೬೨ | ೨೩,೯೪,೧೬೩ | ೩೦,೬೬,೭೫೩ | ೩೨,೧೪,೪೯೪ |
| ೭ | ಇತರೆ | ೨೮,೩೪,೪೭೭ | ೨೩,೭೯,೫೫೬ | ೨೪,೦೮,೧೪೫ | ೪೮,೪೦,೯೯೯ |
| | ಒಟ್ಟು | ೯೯,೪೮,೪೧೭ | ೧,೧೨,೬೫,೪೨೫ | ೧,೦೮,೭೮,೨೩೦ | ೧,೫೫,೫೪,೫೦೮ |

**ಮೂಲ** : ಪುರಸಭೆ ಪುತ್ತೂರು

**ಕೋಷ್ಟಕ ೧೨.೨೪ : ಪುತ್ತೂರು ಪುರಸಭೆಯು ೧೯೯೯ರಿಂದ ೨೦೦೪ರವರೆಗೆ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ರೂ.ಗಳಲ್ಲಿ)

| ಕ್ರ.ಸಂ. | ವಿವರ | ಅನುದಾನ | ಖರ್ಚು |
|---|---|---|---|
| ೧ | ತರಬೇತಿ | ೩,೯೦,೬೧೧ | ೩,೯೦,೬೧೧ |
| ೨ | ಸಾಮಾಜಿಕ ಸೇವೆ | ೩,೪೨,೧೮೦ | ೩,೪೨,೧೮೦ |
| ೩ | ನಗರ ಕೂಲಿ ಉದ್ಯೋಗ | ೧೯,೧೨,೧೬೯ | ೧೯,೧೨,೧೬೯ |
| ೪ | ನಿರಂತರ ಉಳಿತಾಯ ಗುಂಪು ರಚನೆ | ೮,೮೩,೦೦೦ | ೩,೫೧,೦೦೦ |
| ೫ | ಆಡಳಿತ ವೆಚ್ಚ | ೭,೫೯,೯೪೫ | ೬,೬೭,೭೮೫ |
| ೬ | ಡ್ವಾಕ್ವಾ ಯೋಜನೆ | ೪,೨೫,೦೦೦ | ೪,೨೫,೦೦೦ |
| ೭ | ಸ್ವಯಂ ಉದ್ಯೋಗ ಯೋಜನೆ | ೪,೭೫,೦೯೪ | ೩,೪೮,೨೧೮ |

**ಕೋಷ್ಟಕ ೧೨.೨೫ : ೧೯೯೯–೨೦೦೦ ದಿಂದ ೨೦೦೩–೦೪ರವರೆಗಿನ ಆದಾಯ ವೆಚ್ಚದ ವಿವರ**

| ವರ್ಷ | ಆದಾಯ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೯–೦೦ | ೧೪೪.೮೦ | ೧೧೨.೬೫ |
| ೨೦೦೦–೦೧ | ೨೦೬.೧೯ | ೧೦೯.೪೦ |
| ೨೦೦೧–೦೨ | ೨೧೯.೯೭ | ೧೬೩.೨೧ |
| ೨೦೦೨–೦೩ | ೨೫೭.೫೬ | ೧೪೫.೪೪ |
| ೨೦೦೩–೦೪ | ೨೬೦.೦೯ | ೧೯೩.೧೭ |

**ಮೂಲ:** ಪುರಸಭೆ ಪುತ್ತೂರು

ಪುತ್ತೂರು ಪುರಸಭೆಯು ನಗರದ ಜನತೆಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ಕಾರ್ಯದಲ್ಲಿ ಉತ್ತಮ ಸಾಧನೆ ಮಾಡಿರುವುದಕ್ಕಾಗಿ ರಾಜ್ಯ ಸರ್ಕಾರದಿಂದ ೧೯೯೨–೯೩ ಸಾಲಿನಲ್ಲಿ ಪ್ರಥಮ ಬಹುಮಾನ ಪಡೆದಿದೆ.

## ನಗರ ಪಂಚಾಯ್ತಿ – ಬೆಳ್ತಂಗಡಿ

ಬೆಳ್ತಂಗಡಿಯಲ್ಲಿನ ಮಂಡಲ ಪಂಚಾಯ್ತಿಯು ೧೯೯೬ರ ಜನವರಿಯಲ್ಲಿ ನಗರ ಪಂಚಾಯತ್ ಆಗಿ ಪರಿವರ್ತನೆಗೊಂಡಿತು. ಇತ್ತೀಚೆಗೆ ೨೦೦೨ರ ಡಿಸೆಂಬರ್‌ನಲ್ಲಿ ಪಂಚಾಯಿತಿಗೆ ನಡೆದು ಚುನಾವಣೆಯಲ್ಲಿ ೧೧ ಸದಸ್ಯರು ಆಯ್ಕೆಗೊಂಡಿದ್ದಾರೆ. ಸದಸ್ಯರ ಸ್ಥಾನಗಳ ಮೀಸಲು ವಿವರ ಹೀಗಿದೆ: ಸಾಮಾನ್ಯ–೦೬ (ಮಹಿಳೆ–೦೨) ಹಿಂದುಳಿದ ಪಂಗಡ–ಎ–೦೩ (ಮಹಿಳೆ–೦೨) ಹಿಂದುಳಿದ ಪಂಗಡ –ಬಿ–೦೧, ಪರಿಶಿಷ್ಟ ಜಾತಿ–ಮಹಿಳೆ–೦೧. ೨೦೦೪ರಲ್ಲಿ ನಗರ ಪಂಚಾಯ್ತಿ ವ್ಯಾಪ್ತಿಯು ೮.೮೭ ಚದರ ಕಿ.ಮೀ.ಗಳಷ್ಟಿತ್ತು. ಎಂಟು ವಾರ್ಡುಗಳಾಗಿ ವಿಭಾಗಿಸಲ್ಪಟ್ಟ ನಗರಪ್ರದೇಶದಲ್ಲಿ ಒಟ್ಟು ೨,೫೫೭ ಮನೆಗಳಿವೆ. ೨೦೦೪ರಲ್ಲಿ ಪಂಚಾಯಿತಿ ಪ್ರದೇಶದಲ್ಲಿ ತೆರಿಗೆ ಸಂದಾಯ ಮಾಡಿದವರ ಸಂಖ್ಯೆ – ೨೪೬೦. ಸರಾಸರಿ ಕರಭಾರ ರೂ.೩೮೦.೦೦ ಆಗಿದ್ದು ಸದರಿ ವರ್ಷದಲ್ಲಿ ಪಂಚಾಯ್ತಿಗೆ ಸಂದಾಯವಾದ ತೆರಿಗೆ ಮೊಬಲಗು ರೂ.೯,೩೫,೬೩೭೦೦ ಆಗಿದೆ. ಪಟ್ಟಣದ ಪ್ರದೇಶದಲ್ಲಿ ಜನವಸತಿ ಸೌಕರ್ಯಕ್ಕಾಗಿ ಬಡಾವಣೆಗಳನ್ನು ನಿರ್ಮಿಸಲಾಗಿದೆ. ಹುಡ್ಕೊ ನೆರವಿನೊಂದಿಗೆ ರಚಿಸಲಾದ ಬಡಾವಣೆಯಲ್ಲಿ ೩೮ ಮನೆಗಳನ್ನು ನಿರ್ಮಿಸಲಾಗಿದೆ. ೨೦೦೧–೨೦೦೨ರಲ್ಲಿ ರೆಂಕೆದಗುತ್ತು ಎಂಬಲ್ಲಿ ರಚಿಸಲಾದ ದಿ.ರಾಜೀವಗಾಂಧಿ ಹೆಸರಿನ ಬಡಾವಣೆಯಲ್ಲಿ ೮೨ ಮನೆಗಳನ್ನು ನಿರ್ಮಿಸಲಾಗಿದೆ. ಈ ಬಡಾವಣೆಗಳ ನಿವಾಸಿಗಳಿಗೆ ವಿದ್ಯುತ್, ನೀರು, ನೈರ್ಮಲ್ಯ ವ್ಯವಸ್ಥೆ ಮುಂತಾದ ಪೌರಸೌಲಭ್ಯಗಳನ್ನು ಪಂಚಾಯ್ತಿ ವತಿಯಿಂದ ಒದಗಿಸಲಾಗಿದೆ.

## ನೀರು ಸರಬರಾಜು

ನಗರದಲ್ಲಿ ನೀರು ಸರಬರಾಜು ವ್ಯವಸ್ಥೆಯು ಪಂಚಾಯ್ತಿಯ ವತಿಯಿಂದ ನಿರ್ವಹಿಸಲ್ಪಡುತ್ತದೆ. ನೇತ್ರಾವತಿ ನದಿಯು ಇಲ್ಲಿನ ಜನತೆಯ ನೀರಿನ ಮುಖ್ಯ ಮೂಲವಾಗಿದೆ. ಇದಕ್ಕೆ ಪೂರಕವಾಗಿ ಕೊಳವೆ ಬಾವಿಗಳಿಂದಲೂ ನೀರು ಲಭ್ಯವಾಗುತ್ತಿದೆ. ೧೯೯೩ರಲ್ಲಿ ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿರುವ ಜಲಶುದ್ಧೀಕರಣ ಕೇಂದ್ರದಲ್ಲಿ ನೀರನ್ನು ಸಂಸ್ಕರಿಸಿ ಸರಬರಾಜು ಮಾಡಲಾಗುತ್ತದೆ. ೧೯೯೫ರಲ್ಲಿ ಕೆ.ಯು.ಡಬ್ಲ್ಯೂ.ಎಸ್.ಬಿ ನವರಿಂದ ಜಲರೇಚಕ ಕೇಂದ್ರವು ನಿರ್ಮಾಣಗೊಂಡಿದ್ದು ನಂತರ ನಗರಪಂಚಾಯ್ತಿಗೆ ವಹಿಸಲ್ಪಟ್ಟಿದೆ. ಈಗ ಪಂಚಾಯ್ತಿಯೇ ನೀರಿನ ಸಂಸ್ಕರಣೆ ಕಾರ್ಯ ಹಾಗೂ ಸರಬರಾಜಿನ ಕೆಲಸ ನಿರ್ವಹಿಸುತ್ತಿದೆ. ಪಂಚಾಯ್ತಿ ವ್ಯಾಪ್ತಿಯಲ್ಲಿ ಎರಡು ಜಲ ಸಂಗ್ರಹಣಾಗಾರಗಳಿವೆ. ೧೯೮೬ರಲ್ಲಿ ನಿರ್ಮಿಸಲ್ಪಟ್ಟ ಇವುಗಳ ಸಾಮರ್ಥ್ಯ ೨.೫ ಲಕ್ಷ ಲೀಟರ್ ಮತ್ತು ೧.೫೦ ಲಕ್ಷ ಲೀಟರ್‌ಗಳಾಗಿದೆ. ಅಲ್ಲದೆ ೨೦೦೧ರಲ್ಲಿ ೩.೫ ಲಕ್ಷ ರೂ.ಗಳ ವೆಚ್ಚದಲ್ಲಿ ಪೂರ್ಣಗೊಂಡ ರೆಂಕೆದಗುತ್ತ ನೀರು ಪೂರೈಕೆ ಯೋಜನೆಯು ನಗರದ ಜನತೆಯ ನೀರಿನ ಅಗತ್ಯವನ್ನು ಪೂರೈಸುವಲ್ಲಿ ಸಫಲವಾಗಿದೆ. ನಗರ ಪಂಚಾಯ್ತಿಯ ನೀರು ಸರಬರಾಜಿನ ೭೭೨ ಗೃಹಬಳಕೆ ಸಂಪರ್ಕಗಳು ಮತ್ತು ೧೦೨ ಸಾರ್ವಜನಿಕ ನಲ್ಲಿಗಳಿವೆ. ಪ್ರಸ್ತುತ ನೀರು ಸರಬರಾಜಿನ ದಿನವಹಿ ಪ್ರಮಾಣ ಐದು ಲಕ್ಷ ೧೨ ಸಾವಿರ ಲೀಟರ್‌ಗಳಾಗಿವೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೭೦ ಲೀಟರ್ ಆಗಿದೆ. ೧೯೯೯ರಿಂದ ೨೦೦೪ರವರೆಗಿನ ನೀರು ಸರಬರಾಜು ಯೋಜನೆಗೆ ಆದ ವೆಚ್ಚ ಈ ಕೆಳಕಂಡಂತಿದೆ.

**ಕೋಷ್ಟಕ ೧೨.೨೬**

| ವರ್ಷ | ವೆಚ್ಚ (ರೂ.ಗಳು) |
|---|---|
| ೧೯೯೯–೨೦೦೦ | ೧,೩೭,೩೨೨ |
| ೨೦೦೦–೨೦೦೧ | ೨,೩೬,೭೩೧ |
| ೨೦೦೧–೨೦೦೨ | ೩,೩೪,೨೦೨ |
| ೨೦೦೨–೨೦೦೩ | ೨,೯೩,೧೭೭ |
| ೨೦೦೩–೨೦೦೪ | ೮,೭೮,೨೯೧ |

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರವು ಎಲ್ಲಾ ರೀತಿಯ ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಕಾಲಕಾಲಕ್ಕೆ ಸರಿಯಾಗಿ ಚರಂಡಿಗಳು, ಗಲ್ಲಿಗಳು, ಕೊಳಚೆ ಪ್ರದೇಶಗಳಲ್ಲಿ ಔಷಧ ಸಿಂಪಡಿಸಲಾಗುತ್ತಿದೆ. ಕೊಳಚೆ ನಿಲ್ಲದಂತೆ ಇಂಗು ಗುಂಡಿಗಳ ರಚನೆ ಮಾಡಲಾಗಿದೆ. ಜನಾರೋಗ್ಯವನ್ನು ಉತ್ತಮಗೊಳಿಸಲು ಕ್ರಮವರಿತು ಲಸಿಕೆ ನೀಡುವುದು, ಇಲಿಗಳ ನಿಯಂತ್ರಣ ಹಾಗೂ ಸೊಳ್ಳೆ ನಿಯಂತ್ರಣಕ್ಕೆ ಗಮನಹರಿಸಲಾಗುತ್ತಿದೆ. ಶುದ್ಧ ಕುಡಿಯುವ ನೀರನ್ನು ಒದಗಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಹೋಟೆಲ್‌ಗಳಲ್ಲಿ ಬಿಸಿ ನೀರು ಸರಬರಾಜು ಮಾಡಲಾಗುವುದು. ಸ್ವಚ್ಛತೆಯ ಬಗ್ಗೆ ಆರೋಗ್ಯ ನಿರೀಕ್ಷಕರು ಮೇಲ್ವಿಚಾರಣೆ ನಡೆಸುತ್ತಾರೆ. ಪಂಚಾಯ್ತಿಯ ಮುಖ್ಯಾಧಿಕಾರಿಗಳು ನಗರದ ಜನನ–ಮರಣ ನೋಂದಣಿಯ ದಾಖಲೆ ನಿರ್ವಹಿಸುತ್ತಾರೆ. ಮೂರು ಮಂದಿ ಪೌರ ಕಾರ್ಮಿಕರು ನಗರದ ಸ್ವಚ್ಛತೆಗೆ ಶ್ರಮಿಸುತ್ತಿದ್ದಾರೆ. ನಗರಪ್ರದೇಶದಲ್ಲಿ ಯಾವುದೇ ಕೊಳಚೆ ಪ್ರದೇಶಗಳಿಲ್ಲ. ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ.

## ಇತರ ಸೌಲಭ್ಯಗಳು

೨೦೦೩ರಲ್ಲಿ ಎಸ್.ಸಿ.ಡಿ.ಸಿಸಿ. ಬ್ಯಾಂಕ್ ವತಿಯಿಂದ ಸಾರ್ವಜನಿಕ ಸೌಕರ್ಯಕ್ಕಾಗಿ ಮಂಜೂವನ ಎಂಬ ಉದ್ಯಾನವನ್ನು ನಿರ್ಮಿಸಲಾಗಿದೆ. ಇದರಲ್ಲಿ ರೂ.೧೦,೨೦೦ಗಳ ವೆಚ್ಚದಲ್ಲಿ ವಿದ್ಯುತ್ ದೀಪ ವ್ಯವಸ್ಥೆ ಮಾಡಲಾಗಿದೆ. ಉದ್ಯಾನವು ನಗರ ಪಂಚಾಯ್ತಿಯಿಂದ ನಿರ್ವಹಿಸಲ್ಪಡುತ್ತದೆ. ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ೩೩ ಕಿ.ಮೀ. ಟಾರ್ ರಸ್ತೆ ಮತ್ತು ಮೂರು ಕಿ.ಮೀ. ಮಣ್ಣಿನ ರಸ್ತೆ ಇದೆ. ೧೯೭೧ರಲ್ಲಿ ಪ್ರಥಮ ಬಾರಿಗೆ ನಗರದಲ್ಲಿ ವಿದ್ಯುತ್ ದೀಪ ವ್ಯವಸ್ಥೆ ಕಲ್ಪಿಸಲಾಯಿತು. ೨೦೦೫ರಲ್ಲಿದ್ದಂತೆ ೪೩೭ ಬೀದಿ ದೀಪಗಳನ್ನು ಅಳವಡಿಸಲಾಗಿದೆ ಹಾಗೂ ವಾಣಿಜ್ಯ ವಿದ್ಯುತ್ ಬಳಕೆ ಸಂಪರ್ಕಗಳ ಸಂಖ್ಯೆ–೩೬. ಹಿಂದಿನ ವರ್ಷಗಳಲ್ಲಿ ನಗರ ಪಂಚಾಯ್ತಿಯು ೧೦ನೇ ಹಣಕಾಸು ಯೋಜನೆಯ ಅನುದಾನವಾಗಿ ರೂ.೩೫,೩೦,೩೩೨.೦೦ ಪಡೆದಿದ್ದು ೧೧ನೇ ಹಣಕಾಸು ಯೋಜನೆಯಲ್ಲಿ ಪಡೆದ ಒಟ್ಟು ಅನುದಾನ ರೂ.೩೭,೨೮,೦೬೩. ಹಣಕಾಸು ಆಯೋಗದ ಶಿಫಾರಸ್ಸಿನಂತೆ ಪಂಚಾಯ್ತಿಯು ಪಡೆದ ಎಸ್.ಎಫ್.ಸಿ ಅನುದಾನದ ವಿವರ ಹೀಗಿದೆ. (ರೂ.ಗಳಲ್ಲಿ)

**ಕೋಷ್ಟಕ ೧೨.೨೭**

| ವಿವರ | | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|---|
| ೧) ಸಿಬ್ಬಂದಿ ವೇತನ | ರೂ. | ೫,೧೯,೦೭೬.೦೦ | ೪,೯೩,೭೧೧.೦೦ | ೭,೫೭,೮೬೦.೦೦ |
| ೨) ಅಧಿಭಾರ ಶುಲ್ಕ | ರೂ. | ೩,೦೯,೪೪೧.೦೦ | ೯೧,೨೦೦.೦೦ | ೨೦,೦೭೯.೦೦ |

ನಗರ ಪಂಚಾಯ್ತಿಯು ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗಾಗಿ ಶೇ.೧೮ರ ಕಾಯ್ದಿರಿಸಿದ ನಿಧಿಯ ಖರ್ಚಿನ ವಿವರ ಹೀಗಿದೆ. ೨೦೦೨–೦೩ರಲ್ಲಿ ರೂ.೨,೭೨,೧೨೯, ೨೦೦೩–೦೪ರಲ್ಲಿ ರೂ.೫,೩೧,೮೯೩ ಮತ್ತು ೨೦೦೪–೦೫ರಲ್ಲಿ ರೂ.೪,೮೪,೫೫೬ ಗಳನ್ನು ಕಾಯ್ದಿರಿಸಲಾಗಿದ್ದು ಖರ್ಚು ಮಾಡಲಾದ ಮೊತ್ತವು ಅನುಕ್ರಮವಾಗಿ ರೂ.೧೧,೯೮೦, ರೂ.೩,೧೭,೩೫೭ ಮತ್ತು ರೂ.೩,೫೭,೦೪೫ ಆಗಿದೆ.

**ಕೋಷ್ಟಕ ೧೨.೨೮ : ಕಳೆದ ನಾಲ್ಕು ವರ್ಷಗಳಲ್ಲಿ ನಗರ ಪಂಚಾಯ್ತಿಯು ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ**

(ರೂ.ಗಳು)

| ಕ್ರ.ಸಂ. | ವಿವರ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧,೯೬,೭೦೮ | ೨,೬೨,೧೭೫ | ೩,೨೦,೬೦೮ | ೧,೯೬,೭೦೮ |
| ೨ | ಲೋಕೋಪಯೋಗಿ ಸಾರ್ವಜನಿಕ ಕಾಮಗಾರಿಗಳು | ೪,೩೫,೫೦೫ | ೧೮,೨೩,೯೩೦ | ೧೪,೭೦,೪೩೪ | ೫,೧೬,೩೭೩ |
| ೩ | ನೀರು ಸರಬರಾಜು | ೩,೧೯,೦೨೮ | ೫,೩೪,೨೦೨ | ೩,೧೭,೬೦೨ | ೧೦,೮೮,೪೯೬ |
| ೪ | ರಸ್ತೆ ನಿರ್ವಹಣೆ | ೧,೧೭,೧೦೫ | ೫,೬೫,೫೭೩ | ೧೨,೮೫,೧೯೪ | ೧೩,೧೮,೩೮೧ |
| ೫ | ಬೀದಿ ದೀಪಗಳ ನಿರ್ವಹಣೆ | ೧,೪೪,೯೬೬ | ೨,೪೪,೯೬೬ | ೩,೨೦,೬೦೮ | ೨,೦೬,೦೫೧ |
| ೬ | ಸಿಬ್ಬಂದಿ ಪ್ರಭಾರ | ೫,೯೩,೮೫೯ | ೪,೫೯,೪೯೮ | ೯,೪೦,೮೦೭ | ೮,೦೨,೦೮೧ |
| ೭ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೧,೭೮,೧೯೬ | ೨,೬೨,೧೭೫ | ೨೬,೨೬,೪೨೦ | ೨,೧೧,೪೨೩ |
| ೮ | ಇತರೆ | ೨,೦೮,೫೦೭ | ೩,೫೮,೭೬೮ | ೨೨,೨೬,೫೦೪ | ೧೯,೨೫,೧೦೯ |
| | ಒಟ್ಟು | ೨೧,೯೩,೮೭೪ | ೪೫,೨೭,೨೭೬ | ೭೫,೪೪,೩೯೯ | ೬೨,೭೩,೯೬೫ |

**ಮೂಲ** : ನಗರ ಪಂಚಾಯ್ತಿ, ಬೆಳ್ತಂಗಡಿ.

**ಕೋಷ್ಟಕ ೧೨.೨೯ : ನಗರ ಪಂಚಾಯ್ತಿಯ ಸ್ವರ್ಣಜಯಂತಿ ಶಹರೀ ರೋಜ್‌ಗಾರ್ ಯೋಜನೆಯಡಿ ೧೯೯೭ ರಿಂದ ೨೦೦೫ರವರೆಗೆ ಸಾಧಿಸಿದ ಪ್ರಗತಿ ವಿವರ**

(ರೂ.ಗಳಲ್ಲಿ)

| ಕ್ರ.ಸಂ. | ವಿವರ | ಅನುದಾನ | ಖರ್ಚು | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧ | ಸಣ್ಣ ಉದ್ದಿಮೆ | ೧,೭೬,೧೦೪ | ೧,೭೫,೨೦೦ | ೩೮ |
| ೨ | ಡ್ವಾಕ್ವಾ ಯೋಜನೆ | ೨,೨೫,೦೦೦ | ೨,೨೫,೦೦೦ | ೩೦ |
| ೩ | ಉಳಿತಾಯ ಮತ್ತು ಸಾಲ ಗುಂಪುಗಳು | ೧,೮೦,೦೦೦ | ೧,೮೦,೦೦೦ | ೧೯೪ |
| ೪ | ತರಬೇತಿ | ೨,೧೩,೭೦೬ | ೨,೦೧,೦೦೧ | ೧೨,೭೦೫ |
| ೫ | ಸಮುದಾಯ ಭವನ ರಚನೆ | ೩,೯೯,೦೦೦ | ೩,೯೯,೦೦೦ | ೭೮೪ ಕುಟುಂಬಗಳು |
| ೬ | ನಗರ ಕೂಲಿ ಉದ್ಯೋಗ ಕಾರ್ಯಕ್ರಮ | ೧೧,೨೯,೯೦೫ | ೧೧,೧೪,೨೩೩ | ೭೮೪ ಕುಟುಂಬಗಳು |
| ೭ | ಸಾಮಾಜಿಕ ಸೇವಾ ಚಟುವಟಿಕೆ | ೧,೫೭,೮೧೦ | ೧,೫೭,೮೧೦ | ೨,೨೦೮ |
| | ಒಟ್ಟು | ೨೪,೮೧,೫೨೫ | ೨೪,೫೨,೨೪೪ | ಉಳಿಕೆ:೨೯,೨೮೧ |

**ಕೋಷ್ಟಕ ೧೨.೩೦ : ೧೯೯೯–೨೦೦೦ ದಿಂದ ೨೦೦೩–೦೪ರವರೆಗೆ ಆದಾಯ ಮತ್ತು ವೆಚ್ಚದ ವಿವರ.**

| ವರ್ಷ | ಆದಾಯ (ಲಕ್ಷ ರೂ.) | ವೆಚ್ಚ (ಲಕ್ಷ ರೂ.) |
|---|---|---|
| ೧೯೯೯–೦೦ | ೬೬.೨೮ | ೧೧.೮೮ |
| ೨೦೦೦–೦೧ | ೭೫.೨೨ | ೧೧.೮೭ |
| ೨೦೦೧–೦೨ | ೬೭.೧೫ | ೨೭.೨೬ |
| ೨೦೦೨–೦೩ | ೫೭.೯೪ | ೨೫.೫೦ |
| ೨೦೦೩–೦೪ | ೬೦.೬೬ | ೨೫.೪೭ |

**ಆಧಾರ** : ಪುರಸಭೆ, ಬೆಳ್ತಂಗಡಿ

ಬೆಳ್ತಂಗಡಿ ನಗರಪಂಚಾಯ್ತಿಯು ಉತ್ತಮ ಕಾರ್ಯ ನಿರ್ವಹಣೆಗಾಗಿ ೧೯೯೬–೯೭ನೇ ಸಾಲಿನಲ್ಲಿ ಪೌರಾಡಳಿತ ಇಲಾಖೆಯ ರಾಜ್ಯ ಮಟ್ಟದ ಒಂದು ಲಕ್ಷ ರೂ. ಬಹುಮಾನ ಪಡೆದಿದೆ.

## ಪುರಸಭೆ ಮೂಡುಬಿದಿರೆ

ಮದ್ರಾಸ್ ಪ್ರಾಂತ್ಯಾಡಳಿತದ ಕಾಲದಿಂದಲೂ ಮೂಡುಬಿದಿರೆಯಲ್ಲಿ ಪಟ್ಟಣ ಪಂಚಾಯಿತಿ ಅಸ್ತಿತ್ವದಲ್ಲಿತ್ತು. ೧೯೭೫ರ ಜನವರಿಯಲ್ಲಿ ಸರ್ಕಾರಿ ಅಧಿಸೂಚನೆಯಂತೆ ಇದು ಪುರಸಭೆಯಾಗಿ ಮಾರ್ಪಟ್ಟಿತು. ೧೯೭೪ರವರೆಗೆ ೧೨ ಮಂದಿ ಚುನಾಯಿತ ಸದಸ್ಯರಿದ್ದರು. ಸಂವಿಧಾನದ ೭೮ನೇ ತಿದ್ದುಪಡಿಯ ೨೦೦೦ ವರ್ಷದ ಪುರಸಭೆ ಕಾಯ್ದೆಯನ್ವಯ ೨೦೦೧ರಲ್ಲಿ ಪುರಸಭೆಯ ೨೩ ವಾರ್ಡ್‌ಗಳಿಗೆ ಚುನಾವಣೆಗಳು ನಡೆದವು. ಸರ್ಕಾರದಿಂದ ನಾಮಕರಣಗೊಂಡಿರುವ ಐದು ಮಂದಿಯೂ ಸೇರಿದಂತೆ ಒಟ್ಟು ಸದಸ್ಯರ ಸಂಖ್ಯೆ ೨೮. ಸ್ಥಾನಗಳ ಮೀಸಲು ವಿವರ ಹೀಗಿದೆ ; ಸಾಮಾನ್ಯ ೧೨, ಹಿಂದುಳಿದ ಪಂಗದ ಎ ಆರು ಹಿಂ.ಪಂ.ಬಿ–ಎರಡು, ಪ.ಜಾತಿ–ಮೂರು, ಒಟ್ಟು ೨೩ ಪುರಸಭೆಯು ತನ್ನ ವ್ಯಾಪ್ತಿಯಲ್ಲಿ ಐದು ಕಂದಾಯ ಗ್ರಾಮಗಳನ್ನೊಳಗೊಂಡಿದ್ದು, ೨೦೦೪ರಲ್ಲಿ ಪುರಸಭೆ ವ್ಯಾಪ್ತಿ ೩೯.೬೨ ಚ.ಕಿ.ಮೀ. ಇತ್ತು. ೧೯೭೧ರಲ್ಲಿ ನಗರದಲ್ಲಿ ೮೨೭೮ ಮನೆಗಳಿದ್ದವು. ೨೦೦೪ರಲ್ಲಿ ಮನೆಗಳ ಸಂಖ್ಯೆ ೮೬೯೫ ಆಗಿತ್ತು. ೨೦೦೪ರಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಮನೆತೆರಿಗೆ ಸಂದಾಯ ಮಾಡಿದವರ ಸಂಖ್ಯೆ ೮೬೯೫ ಆಗಿದ್ದು, ತಲಾವಾರು ಸರಾಸರಿ ಕರಬಾರ ರೂ.೨೪೫–೦೦ ಆಗಿದೆ. ಮೂಡಬಿದಿರೆ ಪುರಸಭೆ ವ್ಯಾಪ್ತಿಯ ಪ್ರಾಂತ್ಯ ಗ್ರಾಮದಲ್ಲಿ ಎರಡು ಕಡೆ ಏಳು ಎಕರೆ ಜಮೀನಿನಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವತಿಯಿಂದ ಬಡಾವಣೆಗಳನ್ನು ರಚಿಸಲಾಗಿದೆ. ಇಲ್ಲಿ ಸುಮಾರು ೧೧೨ ಮನೆಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ನಿವಾಸಿಗಳಿಗೆ ನೈರ್ಮಲೀಕರಣ, ನೀರು ಸರಬರಾಜು, ಬೀದಿದೀಪ, ಚರಂಡಿ ವ್ಯವಸ್ಥೆ ಮುಂತಾದ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಪುರಸಭೆಯೇ ಒದಗಿಸಿದೆ.

## ನೀರು ಸರಬರಾಜು

ಮೂಡುಬಿದ್ರೆ ಪಟ್ಟಣದ ನಿವಾಸಿಗಳಿಗೆ ಪುಚ್ಚಮೊಗ್ರು, ಪಲ್ಗುಣಿ ನದಿಯಿಂದ ಹಾಗೂ ಕೊಳವೆ ಬಾವಿಗಳಿಂದ ನೀರಿನ ಸರಬರಾಜು ಮಾಡಲಾಗುತ್ತಿದೆ. ನಾಲ್ಕು ಕೋಟಿ ವೆಚ್ಚದ ಯಾಂತ್ರೀಕೃತ ನೀರು ಸರಬರಾಜು ಯೋಜನೆಯ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸಿದೆ. ಯಾಂತ್ರೀಕೃತ ಘಟಕದ ಮೂಲಕ ಪುರಸಭೆಯೇ ನೀರು ಸರಬರಾಜು ನಿರ್ವಹಣೆ ಮಾಡುತ್ತಿದೆ. ಈ ಯೋಜನೆಯಲ್ಲಿ ಪುಚ್ಚಮೊಗ್ರು ಪಲ್ಗುಣಿ ನದಿಯಿಂದ ನೀರು ಸೆಳೆಯಲು ಪಂಪಿಂಗ್ ಸ್ಟೇಷನ್ ಒಂದರ ನಿರ್ಮಾಣವಾಗಿದೆ. ಈ ಘಟಕವು ೨೦೦೧ ರಿಂದ ಕಾರ್ಯನಿರ್ವಹಿಸುತ್ತಿದೆ. ಪುರಸಭಾ ವ್ಯಾಪ್ತಿಯಲ್ಲಿ ನೀರು ಸರಬರಾಜಿಗಾಗಿ ಐದು ಪೂರಕ ಜಲ ಸಂಗ್ರಹಣಾಗಾರಗಳಿವೆ. ಇವುಗಳಲ್ಲೊಂದರ ಸಾಮರ್ಥ್ಯ ೫೦ ಸಾವಿರ ಗ್ಯಾಲನ್ ಹಾಗೂ ಇನ್ನುಳಿದ ನಾಲ್ಕು ಸಂಗ್ರಹಣಾಗಾರಗಳು ತಲಾ ೨೫ ಸಾವಿರ ಗ್ಯಾಲನ್ ಸಾಮರ್ಥ್ಯದ್ದಾಗಿವೆ. ಇವಲ್ಲದೇ ಅಗತ್ಯವಿರುವ ಕಡೆಗಳಲ್ಲಿ ಕೊಳವೆ ಬಾವಿಗಳಿಂದಲೂ ನೀರು ಪೂರೈಕೆ

ಮಾಡಲಾಗುತ್ತಿದೆ. ೨೦೦೪ರಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ೧೮೬೨ ಗೃಹಬಳಕೆ ನೀರಿನ ಸಂಪರ್ಕಗಳು ಮತ್ತು ೧೪೨ ಸಾರ್ವಜನಿಕ ನಳಗಳಿದ್ದವು. ಪಟ್ಟಣದ ದೈನಂದಿನ ನೀರಿನ ಅಗತ್ಯ ಸರಾಸರಿ ೧೩ ಲಕ್ಷ ಲೀಟರ್‌ಗಳಾಗಿವೆ. ೨೦೦೪–೦೫ನೇ ಸಾಲಿನಲ್ಲಿ ಪುರಸಭೆಯ ನೀರು ಪೂರೈಕೆ ವೆಚ್ಚವು ೨೩,೯೮,೦೦೦ ರೂ.ಗಳು ಮತ್ತು ನೀರು ತೆರಿಗೆ ರೂಪದಲ್ಲಿ ಸಂಗ್ರಹವಾದ ಮೊತ್ತ ೧೫,೧೨,೭೦೦ ರೂ.ಗಳಾಗಿದ್ದಿತು.

## ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ಪುರಸಭೆಯ ವ್ಯಾಪ್ತಿಯಲ್ಲಿ ಪಟ್ಟಣವು ಸಾಂಕ್ರಾಮಿಕ ರೋಗಗಳಾದ ಸಿಡುಬು, ಪ್ಲೇಗ್ ಮತ್ತು ಕಾಲರಾಗಳಿಂದ ಮುಕ್ತವಾಗಿದೆ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ನೀಡುವುದು, ಔಷಧಿ ಸಿಂಪರಣೆ, ಇಲಿ ನಿಯಂತ್ರಣ ಶುದ್ಧ ಕುಡಿಯುವ ನೀರು ಪೂರೈಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೋಟೆಲ್‌ಗಳಲ್ಲಿ ಕುಡಿಯಲು ಬಿಸಿನೀರು ಒದಗಿಸಲಾಗುತ್ತದೆ. ಇಂಗುಗುಂಡಿಗಳನ್ನು ನಿರ್ವಹಿಸುವ ಮೂಲಕ ಕೊಳಚೆ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಲಾಗಿದೆ. ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಯೋಜನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಅನುಮೋದನೆ ನಿರೀಕ್ಷಿಸಲಾಗಿದೆ. ಪ್ರಸ್ತುತ ಪ್ರತಿ ಮನೆಗೆ ಇಂಗುಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ಪುರಸಭೆಯ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ. ಪಟ್ಟಣದಲ್ಲಿ ೧೧ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಗುರುತಿಸಿ ಸರ್ಕಾರದ ಅಧಿಸೂಚನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ೫೧೩ ಗುಡಿಸಲುಗಳಿರುವ ಈ ಪ್ರದೇಶದಲ್ಲಿನ ನಿವಾಸಿಗಳ ಸಂಖ್ಯೆ ೨೬೮೬ ಆಗಿದೆ. ಸರಕಾರದಿಂದ ಅಥವಾ ಕೊಳಚೆ ನಿರ್ಮೂಲನೆ ಮಂಡಳಿಯಿಂದ ಯಾವುದೇ ಅನುದಾನ ಪಡೆಯದೇ ಪುರಸಭೆಯೇ ತನ್ನ ಆದಾಯದಿಂದ ಈ ಪ್ರದೇಶಕ್ಕೆ ಮೂಲಭೂತ ಸೌಕರ್ಯವನ್ನು ಒದಗಿಸಿದೆ. ಪುರಸಭೆಯಲ್ಲಿ ಜನನ–ಮರಣ ದಾಖಲಾತಿಯನ್ನು ಮುಖ್ಯಾಧಿಕಾರಿಗಳೇ ನಿರ್ವಹಿಸುತ್ತಾರೆ. ಪಟ್ಟಣದ ನೈರ್ಮಲೀಕರಣ ವ್ಯವಸ್ಥೆಯನ್ನು ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲಾಗುತ್ತದೆ. ದಿನಂಪ್ರತಿ ೨೦ ಜನ ಕಾರ್ಮಿಕರು ಪುರಸಭೆಯ ಸ್ಯಾನಿಟರಿ ಮೇಸ್ತ್ರಿಯ ಮೇಲುಸ್ತುವಾರಿಯಲ್ಲಿ ನಿರ್ಮಲೀಕರಣ ಕಾರ್ಯನಿರ್ವಹಿಸುತ್ತಾರೆ. ಪುರಸಭಾ ಕಟ್ಟಡದಲ್ಲಿ ಸರಕಾರದಿಂದ ಮಂಜೂರಾಗಿರುವ ಅಗ್ನಿಶಾಮಕ ಠಾಣೆ ಕಾರ್ಯನಿರ್ವಹಿಸುತ್ತಿದೆ. ಈ ಮೂಲಕ ಪುರಸಭಾ ವ್ಯಾಪ್ತಿಯಲ್ಲಿ ಬೆಂಕಿ ಆಕಸ್ಮಿಕಗಳನ್ನು ಎದುರಿಸಲಾಗುತ್ತಿದೆ.

## ಇತರೆ ಸೌಲಭ್ಯಗಳು

ಪುರಸಭೆ ವ್ಯಾಪ್ತಿಯಲ್ಲಿ ೬೪ ಕಿ.ಮೀ. ಡಾಂಬರು ರಸ್ತೆ ೧೦ ಕಿ.ಮೀ.ಗಳ ಜಲ್ಲಿ ರಸ್ತೆ ೨೮ ಕಿ.ಮೀ.ಗಳಷ್ಟು ಮಣ್ಣಿನ ರಸ್ತೆ ಮತ್ತು ಅರ್ಧ ಕಿ.ಮೀ. ಸಿಮೆಂಟ್ ರಸ್ತೆ ಇದೆ. ಪಟ್ಟಣದಲ್ಲಿ ೧೯೫೬ರಲ್ಲಿ ಪ್ರಥಮ ಬಾರಿಗೆ ಕೆ.ಇ.ಬಿ. ವತಿಯಿಂದ ವಿದ್ಯುತ್ ಸಂಪರ್ಕ ನೀಡಲಾಯಿತು. ಪ್ರಸ್ತುತ ಮನೆ ದೀಪಗಳ ಸಂಖ್ಯೆ ೬೦೩೧, ಬೀದಿದೀಪಗಳ ಸಂಖ್ಯೆ ೧೧೪೦, ವಾಣಿಜ್ಯ ಸಂಪರ್ಕಗಳು ೧೨೬೪ ಮತ್ತು ೧೪೮ ಕೈಗಾರಿಕೆ ಸಂಪರ್ಕಗಳು ಇವೆ. ಪುರಸಭೆಗಳಿಗೆ ಆಕ್ಟ್ರಾಯ್ ರದ್ದಾದ ನಂತರ ಕಳೆದ ನಾಲ್ಕು ವರ್ಷಗಳಲ್ಲಿ ಪುರಸಭೆಯು ಪಡೆದ ಅನುದಾನದ ವಿವರ ೨೦೦೧–೦೨ರಲ್ಲಿ ರೂ.೨೬,೪೪,೬೪೪, ೨೦೦೨–೦೩ ರಲ್ಲಿ ರೂ. ೨೦,೫೭,೦೧೪, ೨೦೦೩–೦೪ ರಲ್ಲಿ ರೂ. ೨೫,೪೭,೫೫೫, ೨೦೦೪–೦೫ರಲ್ಲಿ ರೂ.೧೬,೩೬,೦೨೬ ಪುರಸಭೆಯು ಹಿಂದಿನ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟ ಶೇ ೧೮ರ ನಿಧಿ ವಿವರ ಹೀಗಿದೆ (ರೂ.ಗಳಲ್ಲಿ).

**ಕೋಷ್ಟಕ ೧೨.೩೧**

| ವರ್ಷ | ಶೇ.೧೮ ಮೀಸಲು ನಿಧಿ | ಖರ್ಚು |
|---|---|---|
| ೨೦೦೧–೦೨ | ೩,೫೦,೦೦೦ | ೩,೫೦,೫೦೦ |
| ೨೦೦೨–೦೩ | ೨,೭೦,೦೦೦ | ೨,೭೦,೦೦೦ |
| ೨೦೦೩–೦೪ | ೩,೧೫,೦೦೦ | ೩,೧೫,೦೦೦ |
| ೨೦೦೪–೦೫ | ೩,೫೦,೦೦೦ | ೩,೫೦,೦೦೦ |

ಪುರಸಭೆಯು ೧೯೯೨–೯೩ರಲ್ಲಿ ರೂ.೩೫ ಲಕ್ಷಗಳ ವೆಚ್ಚದಲ್ಲಿ ದಿ.ರಾಜೀವ ಗಾಂಧಿ ಹೆಸರಿನ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿದೆ ಹಾಗೂ ೨೦೦೨–೦೩ರಲ್ಲಿ ರೂ.೩೮.ಲಕ್ಷಗಳ ವೆಚ್ಚದಲ್ಲಿ ದಿ.ಇಂದಿರಾಗಾಂಧಿಯವರ ಹೆಸರಿನ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿದೆ.

**ಕೋಷ್ಟಕ ೧೨.೩೨ : ಹಿಂದಿನ ಕೆಲವರ್ಷಗಳಲ್ಲಿ ಪುರಸಭೆಯು ಮಾಡಿದ ಖರ್ಚಿನ ವಿವರ**

(ರೂ.ಗಳಲ್ಲಿ)

| ಕ್ರ.ಸಂ. | ವಿವರ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ |
|---|---|---|---|---|---|
| ೧. | ಜನಾರೋಗ್ಯ ಮತ್ತು ನೈರ್ಮಲ್ಯ | ೩೬೦೦೦೦ | ೬೭೮೫೮೦ | ೫೬೪೨೬ | ೭೦೬೬೪೦ |
| ೨. | ಪುರಸಭೆವತಿಯಿಂದ ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗಳು | ೨೪೩೧೦೪೩ | ೬೦೯೮೭೭೯ | ೪೭೨೩೭೬೭ | ೨೬೪೯೪೮ |
| ೩. | ನೀರು ಸರಬರಾಜು | ೫೯೫೯೯೫ | ೧೧೯೬೨೦೦ | ೧೬೬೭೪೩೦ | ೨೨೫೪೧೯೩ |
| ೪. | ರಸ್ತೆ ಮತ್ತು ದೀಪ ನಿರ್ವಹಣೆ | ೫೧೯೨೨೭ | ೪೫೩೫೦೬ | ೭೬೩೭೪೪ | ೫೦೮೧೦೪ |
| ೫. | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೪೪೭೨೬೧ | – | ೧೧೯೪೬೮೩ | ೩೦೩೦೧೮ |
| ೬. | ಸಿಬ್ಬಂದಿ ಪ್ರಭಾರ | ೧೦೩೦೦೫೮ | ೧೧೫೪೩೨೧ | ೧೪೭೬೬೪೬ | ೫೮೯೨೮೭ |
| ೭. | ಇತರೆ | ೧೧೫೬೧೯ | ೭೭೪೫೧ | ೩೩೭೯೯ | ೧೯೯೧೩೨ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ಗಾತ್ರದ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ೨೦೦೪–೦೫ರ ಸಾಲಿನಲ್ಲಿ ರೂ.೬೪,೨೫,೦೦೦ ಬಿಡುಗಡೆಯಾಗಿದ್ದು, ೩,೨೭,೭೦೦ ರೂ.ಗಳ ವೆಚ್ಚದಲ್ಲಿ ೧೦ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲಾಗಿದೆ ಹಾಗೂ ಎರಡು ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯಲ್ಲಿ ಉಳಿಕೆಯಾದ ಅನುದಾನದ ಮೊತ್ತ ರೂ. ೩೧,೪೩,೦೦೦, ೧೧ನೇ ಹಣಕಾಸು ಆಯೋಗದ ಅನುದಾನದ ರೂಪದಲ್ಲಿ ೨೦೦೪–೦೫ ವರ್ಷದಲ್ಲಿ ಪುರಸಭೆಗೆ ೫೯೫೩೭೫೨ ರೂ.ಗಳ ಮೊತ್ತ ಬಿಡುಗಡೆಯಾಗಿದ್ದು, ೩೯೪೬೭೩ ರೂ.ಗಳ ವೆಚ್ಚದಲ್ಲಿ ೩೨ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ೨೨ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇನ್ನೂ ೨೬೫೯೧೨೯ ರೂ.ಗಳ ಮೊತ್ತವನ್ನು ಖರ್ಚು ಮಾಡಬೇಕಾಗಿದೆ. ೧೯೯೯ ರಿಂದ ೨೦೦೫ರವರೆಗೆ ಪುರಸಭೆಗೆ ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆಯಡಿಯಲ್ಲಿ ದೊರಕಿದ ಅನುದಾನದ ಮೊತ್ತ ೪೪ ಲಕ್ಷ ೩೪ ಸಾವಿರ ರೂ.ಗಳು. ಈ ಮೊತ್ತದಲ್ಲಿ ಪುರಸಭೆಯು ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿ ವಿವರ ಹೀಗಿದೆ.

**ಕೋಷ್ಟಕ ೧೨.೩೩**

| ಕ್ರ. ಸಂ | ವಿವಿಧ ಅಭಿವೃದ್ಧಿ ಯೋಜನೆ | ಅನುದಾನ (ರೂ.ಗಳು) | ಖರ್ಚು (ರೂ.ಗಳು) | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧ | ನಗರ ಸ್ವಯಂ ಉದ್ಯೋಗ ಕಾರ್ಯಕ್ರಮ | ೨೫೯೫೩೫ | ೨೫೯೫೩೫ | ೬೮ |
| ೨ | ಡ್ವಾಕ್ವಾ | ೨೨೫೦೦೦ | ೨೨೫೦೦೦ | ೨೬ |
| ೩ | ನಿರಂತರ ಉಳಿತಾಯ ಗುಂಪು | ೩೬೦೦೦೦ | ೩೬೦೦೦೦ | ೩೯೬ |
| ೪ | ತರಬೇತಿ ಕಾರ್ಯಕ್ರಮ | ೨೮೦೧೭೮ | ೨೮೦೧೭೮ | ೧೭೮ |
| ೫ | ಮೂಲಭೂತ ಸೌಕರ್ಯ | ೫೦೦೦೦೦ | ೫೦೦೦೦೦ | ೫೦೦ |
| ೬ | ಸಾಮಾಜಿಕ ಸೇವಾ ಕಾರ್ಯಕ್ರಮ | ೭೦೮೮೩೮ | ೭೦೮೮೩೮ | ೪೭೩೮ |
| ೭ | ನಗರ ವೇತನಾಧಾರಿತ ಉದ್ಯೋಗ ಕಾರ್ಯಕ್ರಮ | ೨೧೦೯೭೪ | ೨೦೦೯೭೪ | ೨೫೦೦ |

**ಕೋಷ್ಟಕ ೧೨.೩೪ : ೧೯೯೯–೨೦೦೦ದಿಂದ ೨೦೦೩–೦೪ರವರೆಗೆ ಆದಾಯ ಮತ್ತು ವೆಚ್ಚದ ವಿವರ**

| ವರ್ಷ | ಆದಾಯ (ಲಕ್ಷ ರೂ.) | ವೆಚ್ಚ (ರೂ.) |
|---|---|---|
| ೧೯೯೯–೨೦೦೦ | ೧೭೮.೮೫ | ೧೨೦.೬೪ |
| ೨೦೦೦–೦೧ | ೧೫೬.೩೧ | ೧೫೪.೮೦ |
| ೨೦೦೧–೦೨ | ೧೬೪.೦೭ | ೧೯೯.೩೯ |
| ೨೦೦೨–೦೩ | ೧೮೫.೩೫ | ೧೧೪.೯೪ |
| ೨೦೦೩–೦೪ | ೧೮೭.೭೨ | ೧೨೦.೧೧ |

**ಮೂಲ** : ಪುರಸಭೆ ಮೂಡಬಿದ್ರೆ

ಪುರಸಭೆಯು ೧೯೯೨ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಣೆಗೆ ವಿಭಾಗೀಯ ಮಟ್ಟದ ದ್ವಿತೀಯ ಬಹುಮಾನವನ್ನು ಪಡೆದಿದೆ.

## ನಗರ ಪಂಚಾಯ್ತಿ ಬಂಟ್ವಾಳ

೧೯ನೇ ಶತಮಾನದ ಮಧ್ಯಭಾಗದಿಂದಲೂ ಬಂಟ್ವಾಳದಲ್ಲಿ ಗ್ರಾಮ ಪಂಚಾಯ್ತಿಯು ಕಾರ್ಯನಿರ್ವಹಿಸುತ್ತಿದ್ದು, ಇದು ೧೯೭೫ರ ಮಾರ್ಚ್ ತಿಂಗಳಲ್ಲಿ ನಗರ ಪಂಚಾಯ್ತಿಯಾಗಿ ಪರಿವರ್ತನೆಯಾಯಿತು. ಆಗಿನ ಚುನಾಯಿತ ಸದಸ್ಯರ ಸಂಖ್ಯೆ ಐದು ಆಗಿತ್ತು. ಸಂವಿಧಾನದ ೭೮ನೇ ತಿದ್ದುಪಡಿಯನ್ವಯ ಪುರಸಭಾ ಕಾಯ್ದೆ ೨೦೦೦ರಡಿಯಲ್ಲಿ ನಿರ್ಧಿಷ್ಠ ಪಡಿಸಿದ ಹಾಗೆ ೨೦೦೧ನೇ ಇಸವಿಯಲ್ಲಿ ಪಂಚಾಯ್ತಿಯ ೨೧ ವಾರ್ಡ್‌ಗಳಿಗೆ ಚುನಾವಣೆಗಳು ನಡೆದವು. ಚುನಾಯಿತ ಸದಸ್ಯರ ಸಂಖ್ಯೆ ೨೦. ೨೦೦೪ರಲ್ಲಿ ಪಂಚಾಯ್ತಿ ವ್ಯಾಪ್ತಿಯ ವಿಸ್ತೀರ್ಣವು ೬೩೫೭.೫೭ ಎಕರೆ ಇತ್ತು ಮತ್ತು ೮೭೫೧ ಮನೆಗಳು ಪಟ್ಟಣದಲ್ಲಿವೆ. ೨೦೦೩–೦೪ರಲ್ಲಿ ಈ ಪಟ್ಟಣದ ತಲಾವಾರು ಕರಭಾರ ರೂ. ೨೪೫.೦೦ ಆಗಿದೆ. ಈ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಶಿವಶಂಕರಾನಂದ ಲೇಔಟ್ ಎಂಬ ಖಾಸಗಿ ಬಡಾವಣೆ ನಿರ್ಮಾಣಗೊಂಡಿದ್ದು, ಅಲ್ಲಿ ೧೦ ಮನೆಗಳಿವೆ. ಇಲ್ಲಿನ ನಿವಾಸಿಗಳಿಗೆ ಅಗತ್ಯ ಸೌಲಭ್ಯಗಳಾದ ರಸ್ತೆ, ಶೌಚಾಲಯ, ನೀರು, ವಿದ್ಯುತ್, ಚರಂಡಿ ಮುಂತಾದವನ್ನು ಪಂಚಾಯ್ತಿ ವತಿಯಿಂದ ಕಲ್ಪಿಸಲಾಗಿದೆ.

## ನೀರು ಸರಬರಾಜು

ಬಂಟ್ವಾಳ ಪಟ್ಟಣಕ್ಕೆ ನೇತ್ರಾವತಿ ನದಿಯೇ ನೀರಿನ ಮುಖ್ಯ ಮೂಲವಾಗಿದೆ. ಈ ನದಿಯಿಂದ ನೀರನ್ನು ಸಂಗ್ರಹಿಸಿ, ಶುದ್ಧೀಕರಿಸಿ ಸರಬರಾಜು ಮಾಡುವ ಕೆಲಸವನ್ನು ಪಂಚಾಯ್ತಿಯೇ ನಿರ್ವಹಿಸುತ್ತಿದೆ. ೧೯೯೬–೯೭ನೇ ಸಾಲಿನಲ್ಲಿ ರೂ.೩.೩೦ ಕೋಟಿ ವೆಚ್ಚದಲ್ಲಿ ಯಾಂತ್ರೀಕೃತ ನೀರು ಸರಬರಾಜು ಘಟಕವನ್ನು ಸ್ಥಾಪಿಸಲಾಗಿದೆ. ನದಿ ನೀರನ್ನು ಈ ಘಟಕದ ಮೂಲಕ ಶುದ್ಧೀಕರಣ ಕೇಂದ್ರದಲ್ಲಿ ಸಂಗ್ರಹಿಸಿ, ಶುದ್ಧೀಕರಣಗೊಳಿಸಿ ಸಂಗ್ರಹಣಾಗಾರಗಳ ಮೂಲಕ ಪಟ್ಟಣಕ್ಕೆ ಸರಬರಾಜು ಮಾಡಲಾಗುತ್ತದೆ. ನೀರು ಸರಬರಾಜಿಗೆ ಅಗತ್ಯವಾದ ೧೫ ಜಲಸಂಗ್ರಹಣಾಗಾರಗಳಿದ್ದು, ಅವುಗಳ ಒಟ್ಟು ಶೇಖರಣಾ ಸಾಮರ್ಥ್ಯ ೧೭ ಲಕ್ಷ ಲೀಟರ್‌ಗಳಾಗಿದೆ. ಇದಲ್ಲದೇ ೬೮ ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ೧೭ ಕಿರುನೀರು ಸರಬರಾಜು ಘಟಕಗಳ ಮೂಲಕ ಪಟ್ಟಣದ ನೀರಿನ ಅಗತ್ಯವನ್ನು ಪೂರೈಸಲಾಗುತ್ತಿದೆ. ಅವಶ್ಯವಿದ್ದಲ್ಲಿ ಕೊಳವೆಬಾವಿಗಳಿಂದ ನೀರನ್ನು ಪಡೆದು ಪೂರೈಕೆ ಮಾಡಲಾಗುತ್ತದೆ. ತಲಾವಾರು ದೈನಂದಿನ ನೀರು ಸರಬರಾಜು ಪ್ರಮಾಣ ೯೦ ಲೀಟರ್ ಆಗಿದೆ.

೨೦೦೪ರಲ್ಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ ೨೯೬೬ ಗೃಹಬಳಕೆ ನೀರು ಸಂಪರ್ಕಗಳು ಮತ್ತು ೨೬೦ ಸಾರ್ವಜನಿಕ ಬೀದಿ ನಲ್ಲಿಗಳಿವೆ. ಆ ವರ್ಷದ ನೀರು ಪೂರೈಕೆಗೆ ತಗುಲಿದ ವೆಚ್ಚ ರೂ.೪೨ ಲಕ್ಷಗಳು ಮತ್ತು ನೀರಿನ ತೆರಿಗೆ ರೂಪದಲ್ಲಿ ೨೦೦೧–೦೨ರಲ್ಲಿ ೧೦,೬೮,೪೪೦ ರೂ.ಗಳು ೨೦೦೨–೦೩ರಲ್ಲಿ ೧೫೭೬೬೮೩ ರೂ.ಗಳು, ೨೦೦೩–೦೪ರಲ್ಲಿ ೧೨೦೮೯೩೪ ರೂ.ಗಳು ಮತ್ತು ೨೦೦೪–೦೫ರಲ್ಲಿ ೧೫೫೩೯೦೦ ರೂ.ಗಳನ್ನು ಸಂಗ್ರಹಿಸಲಾಗಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ಪಂಚಾಯ್ತಿಯ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ಲಸಿಕೆ ನೀಡುವುದು, ಇಲಿಗಳ ನಿಯಂತ್ರಣ, ಸೊಳ್ಳೆ ನಾಶಕ ಔಷಧಿ ಸಿಂಪಡಿಸುವುದು, ಶುದ್ಧ ಕುಡಿಯುವ ನೀರು ಪೂರೈಕೆ, ಚರಂಡಿ ವ್ಯವಸ್ಥೆ ಮಾಡುವುದರ ಮೂಲಕ ಜನಾರೋಗ್ಯವನ್ನು ಉತ್ತಮಪಡಿಸಲಾಗಿದೆ. ಹೋಟೇಲ್‌ಗಳಲ್ಲಿ ಕುಡಿಯಲು ಬಿಸಿನೀರಿನ ಪೂರೈಕೆ ಮಾಡಲಾಗುತ್ತಿದೆ. ಆರೋಗ್ಯ ಕಾರ್ಯಕರ್ತರು ಹೋಟೇಲುಗಳಲ್ಲಿನ ಸ್ವಚ್ಛತೆ ಕಾಪಾಡುವ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಇಂಗುಗುಂಡಿಗಳಲ್ಲಿ ಕೊಳಚೆ ನೀರನ್ನು ಇಂಗಿಸಲಾಗುತ್ತದೆ. ಮಳೆನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಎಲ್ಲ ಕಾರಣಗಳಿಂದ ನಗರ ಪ್ರದೇಶವು ಕಾಲರಾ, ಮಲೇರಿಯಾ, ಸಿಡುಬು, ಪ್ಲೇಗ್ ಮುಂತಾದ ರೋಗಗಳಿಂದ ಮುಕ್ತವಾಗಿದೆ. ನಗರದ ವ್ಯಾಪ್ತಿಯಲ್ಲಿ ಕೆಲವು ಕೊಳಚೆ ಪ್ರದೇಶಗಳನ್ನು ಗುರುತಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು, ಇನ್ನೂ ಅಧಿಕೃತವಾಗಿ ಘೋಷಣೆಯಾಗಿರುವುದಿಲ್ಲ. ಎಲ್ಲಾ ಮನೆಗಳಿಗೆ ಇಂಗುಗುಂಡಿ ಸಹಿತ ಶೌಚಾಲಯ ವ್ಯವಸ್ಥೆ ಇದೆ. ಒಳಚರಂಡಿ ವ್ಯವಸ್ಥೆಯನ್ನು ಇನ್ನೂ ಕಲ್ಪಿಸಲಾಗಿರುವುದಿಲ್ಲ. ಜನನ ಮರಣ ದಾಖಲೆಯನ್ನು ಮುಖ್ಯಾಧಿಕಾರಿಗಳು ನಿರ್ವಹಿಸುತ್ತಾರೆ. ನಗರ ಪಂಚಾಯ್ತಿಯಲ್ಲಿ ನಾಲ್ಕು ಮಂದಿ ಖಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಆಧಾರದಲ್ಲಿ ೧೫ ಕಾರ್ಮಿಕರು ನಗರ ಸ್ವಚ್ಛತೆ ಕಾರ್ಯದಲ್ಲಿ ನಿರತರಾಗಿದ್ದಾರೆ.

## ಇತರ ಸೌಲಭ್ಯಗಳು

೨೦೦೪ರಲ್ಲಿ ನಗರದ ವ್ಯಾಪ್ತಿಯಲ್ಲಿ ೨೮.೬ ಕಿ.ಮೀ.ಡಾಂಬರು ರಸ್ತೆ ೨೦ ಕಿ.ಮೀ. ಜಲ್ಲಿರಸ್ತೆ ಮತ್ತು ೧೯.೪ ಕಿ.ಮೀ. ಮಣ್ಣಿನ ರಸ್ತೆ ಇದೆ. ೧೯೭೫ರಲ್ಲಿ ಪ್ರಥಮವಾಗಿ ನಗರಕ್ಕೆ ವಿದ್ಯುತ್ ಸಂಪರ್ಕವನ್ನು ಕೆ.ಇ.ಬಿ. ವತಿಯಿಂದ ಕಲ್ಪಿಸಲಾಯಿತು. ಗೃಹಬಳಕೆಯ ಜೊತೆಗೆ ವಾಣಿಜ್ಯ ಉದ್ದೇಶ ಹಾಗೂ ಕೈಗಾರಿಕೆಗಳಿಗೂ ವಿದ್ಯುತ್ ಸಂಪರ್ಕ ವಿಸ್ತರಿಸಲಾಗಿದೆ. ೨೦೦೪ರಲ್ಲಿದ್ದಂತೆ ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ೧೫೭೦ ಬೀದಿದೀಪಗಳನ್ನು ಅಳವಡಿಸಲಾಗಿದೆ. ೨೦೦೩ನೇ ಸಾಲಿನಲ್ಲಿ ನಗರ ಪಂಚಾಯ್ತಿ ವತಿಯಿಂದ ರೂ.೩೫.ಲಕ್ಷಗಳ ವೆಚ್ಚದಲ್ಲಿ ಮಾರುಕಟ್ಟೆ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಹಿಂದಿನ ಕೆಲವರ್ಷಗಳಲ್ಲಿ ಪಂಚಾಯ್ತಿಗೆ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಅನುಸಾರ ಲಭ್ಯವಾಗಿರುವ ಅನುದಾನದ ವಿವರ ಹೀಗಿದೆ (ರೂ.ಗಳಲ್ಲಿ).

**ಕೋಷ್ಟಕ ೧೨.೩೫**

| ಕ್ರಮ ಸಂಖ್ಯೆ | ವಿವರ | ವರ್ಷಗಳು | | |
|---|---|---|---|---|
| | | ೨೦೦೧–೦೨ | ೨೦೦೨–೦೩ | ೨೦೦೩–೦೪ |
| ೧ | ಅಭಿವೃದ್ಧಿ ಅನುದಾನ | ೧೦,೦೦,೦೦೦ | ೫,೦೦,೦೦೦ | ೪೭,೮೭,೮೩೫ |
| ೨ | ವೇತನಾನುದಾನ | ೧೩,೪೨,೧೬೪ | ೧೩,೮೬,೯೬೮ | ೨೭,೦೨,೩೯೬ |
| ೩ | ಅಧಿಭಾರ ಶುಲ್ಕ | ೯,೭೪,೫೯೯ | ೪,೨೧,೬೨೩ | – |
| ೪ | ಪ್ರಕೃತಿ ವಿಕೋಪ/ಬರಪರಿಹಾರ ನಿಧಿ | ೨,೫೦,೦೦೦ | ೫,೦೦,೦೦೦ | ೬,೫೦,೦೦೦ |
| ೫ | ಶಾಸಕರ/ಸಂ.ಸದಸ್ಯರ ನಿಧಿ ಅನುದಾನ | – | ೧,೩೧,೨೫೦ | ೫,೪೩,೭೫೦ |
| ೬ | ಹಣಕಾಸು ಆಯೋಗದ ನಿಧಿ (೧೦ನೇ/೧೧ನೇ) | – | ೧,೯೨,೬೩೪ | ೧೧,೧೨,೩೦೦ |

**ಮೂಲ** : ನಗರಪಂಚಾಯ್ತಿ, ಬಂಟ್ವಾಳ

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಾಗಿ ಮೀಸಲಿರಿಸಿದ ಶೇ.೧೮. ರ ನಿಧಿಯ ವೆಚ್ಚದಲ್ಲಿ ಸಮುದಾಯಕ್ಕೆ ಅವಶ್ಯಕವಾದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ೨೦೦೩–೦೪ನೇ ಸಾಲಿನಲ್ಲಿ ೭.೫೮ ಲಕ್ಷ ರೂ., ೨೦೦೪–೦೫ನೇ ಸಾಲಿಗೆ ನಾಲ್ಕು ಲಕ್ಷ ರೂ.ಗಳನ್ನು ಮೀಸಲಿರಿಸಿ ಖರ್ಚು ಮಾಡಲಾಗಿದೆ. ೧೯೯೮–೯೯ ಮತ್ತು ೨೦೦೦–೦೧ನೇ ಸಾಲುಗಳಲ್ಲಿ ನಗರ ಪಂಚಾಯ್ತಿಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಲ್ಲಿ ಖರ್ಚು ಮಾಡಿದ ಹಣದ ವಿವರ ಕೆಳಗಿನಂತಿದೆ.

**ಕೋಷ್ಟಕ ೧೨.೩೬**

(ರೂ.ಗಳಲ್ಲಿ)

| ಕ್ರ.ಸಂ. | ವಿವರ | ೧೯೯೮–೯೯ | ೨೦೦೦–೦೧ |
|---|---|---|---|
| ೧. | ಜನಾರೋಗ್ಯ ಮತ್ತು ನೈರ್ಮಲ್ಯ | ೧೯೭೮೨ | ೩೦೩೦೦೦ |
| ೨. | ಲೋಕೋಪಯೋಗಿ/ಸಾರ್ವಜನಿಕ ಕಾಮಗಾರಿ | ೨೭೨೦೧೬ | ೨೪೬೭೯೭೪ |
| ೩. | ನೀರು ಸರಬರಾಜು | ೪೦೧೩೯೧ | ೭೮೨೮೫೫ |
| ೪. | ಬೀದಿ ದೀಪಗಳ ನಿರ್ವಹಣೆ | ೭೨೮೬೯೫ | ೩೯೬೪೮೯ |
| ೫. | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೨೬೯೬೭೩ | ೩೭೫೦೦೦ |
| ೬. | ಸಿಬ್ಬಂದಿ ಪ್ರಭಾರ | ೧೨೬೨೭೧೬ | ೧೫೮೮೯೭೮ |
| ೭. | ಇತರೆ | ೨೭೭೯೦೧೧ | ೨೮೪೬೭೧೭ |

೨೦೦೫ನೇ ಸಾಲಿನವರೆಗೆ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ೪೯.೬೧ ಲಕ್ಷ ರೂ. ಅನುದಾನ ಪಡೆಯಲಾಗಿದ್ದು, ಈ ಯೋಜನೆಯ ವಿವಿಧ ಕಾರ್ಯಕ್ರಮಗಳಿಂದ ಸುಮಾರು ೩೨ ಸಾವಿರ ಮಂದಿ ಪ್ರಯೋಜನ ಪಡೆದಿದ್ದಾರೆ. ಸವಿವರ ಮಾಹಿತಿ ಕೆಳಗಿನಂತಿದೆ.

**ಕೋಷ್ಟಕ ೧೨.೩೭**

| ಕ್ರ.ಸಂ | ಕಾರ್ಯಕ್ರಮ | ಅನುದಾನ (ರೂ.) | ಖರ್ಚು (ರೂ.) | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧. | ಸಣ್ಣ ಉದ್ದಿಮೆ ಕಾರ್ಯಕ್ರಮ | ೫೫೮೧೨೧ | ೫೫೮೧೨೧೧೭೦ | |
| ೨. | ಡ್ವಾಕ್ವಾ | ೩೫೦೦೦೦ | ೩೫೦೦೦೦ | ೨೭ |
| ೩. | ಟಿ.ಸಿ.ಜಿ.ಕಾರ್ಯಕ್ರಮ | ೪೨೫೦೦೦ | ೪೨೫೦೦೦ | ೪೨೫ |
| ೪. | ತರಬೇತಿ | ೪೮೯೮೭೫ | ೪೮೯೮೭೫ | ೨೪೫ |
| ೫. | ಸಮುದಾಯ ಭವನ | ೧೦,೦೦,೦೦೦ | ೧೦,೦೦,೦೦೦ | – |
| ೬. | ನಗರ ಕೂಲಿ ಉದ್ಯೋಗ ಕಾರ್ಯಕ್ರಮ | ೧೭,೧೨,೫೭೩ | ೧೭,೧೨,೫೭೩ | ೨೮,೦೦೦ |
| ೭. | ಸಾಮಾಜಿಕ ಸೇವಾ ಕಾರ್ಯಕ್ರಮ | ೪,೨೬,೨೦೫ | ೪,೨೬,೨೦೫ | ೩೭೮೧ |

**ಮೂಲ** : ನಗರ ಪಂಚಾಯ್ತಿ ಬಂಟ್ವಾಳ

**ಕೋಷ್ಟಕ ೧೨.೩೮ : ೧೯೯೯–೨೦೦೦ದಿಂದ ೨೦೦೩–೦೪ರವರೆಗೆ ಆದಾಯ ಮತ್ತು ವೆಚ್ಚದ ವಿವರ**

| ವರ್ಷ | ಆದಾಯ (ಲಕ್ಷ ರೂ.) | ವೆಚ್ಚ ( ಲಕ್ಷ ರೂ.) |
|---|---|---|
| ೧೯೯೯–೨೦೦೦ | ೧೨೩.೬೦ | ೮೪.೮೩ |
| ೨೦೦೦–೦೧ | ೧೦೯.೭೮ | ೬೭.೭೫ |
| ೨೦೦೧–೦೨ | ೧೦೫.೫೬ | ೧೦೪.೯೬ |
| ೨೦೦೨–೦೩ | ೮೨.೩೬ | ೯೪.೫೭೮ |
| ೨೦೦೩–೦೪ | ೧೭೦.೨೦ | ೧೬೯.೮೮ |

**ಮೂಲ** : ನಗರ ಪಂಚಾಯ್ತಿ, ಬಂಟ್ವಾಳ

## ನಗರ ಪಂಚಾಯ್ತಿ, ಮುಲ್ಕಿ

ಮುಲ್ಕಿಯಲ್ಲಿದ್ದ ಪಟ್ಟಣ ಪಂಚಾಯ್ತಿಯು ೧೯೬೪ನೇ ಇಸವಿಯ ಮೈಸೂರು ಮುನಿಸಿಪಾಲಿಟಿಗಳ ಅಧಿನಿಯಮದ ಮೂರನೇ ಪ್ರಕರಣದ ಮೇರೆಗೆ ೧೯೭೩ರ ಫೆಬ್ರವರಿಯಲ್ಲಿ ಪುರಸಭೆಯಾಗಿ ಮಾರ್ಪಾಟಾಯಿತು. ಆದರೆ ೧೯೯೫ರ ಮೇ ತಿಂಗಳಿಂದ ಪುರಸಭೆಯನ್ನು ರದ್ದುಪಡಿಸಿ ಮುಲ್ಕಿ ನಗರವನ್ನು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ತರಲಾಯಿತು. ೧೯೯೭ರ ಆಗಸ್ಟ್‌ನಿಂದ ಪುನ: ಮುಲ್ಕಿಯಲ್ಲಿ ಪಟ್ಟಣ ಪಂಚಾಯ್ತಿ ಅಸ್ತಿತ್ವಗೊಂಡಿದೆ. ಆಗ ಪಂಚಾಯ್ತಿಯಲ್ಲಿ ೧೫ ಜನ ಚುನಾಯಿತ ಸದಸ್ಯರಿದ್ದರು. ಇತ್ತೀಚೆಗೆ ೨೦೦೨ರ ಡಿಸೆಂಬರ್‌ನಲ್ಲಿ ನಡೆದ ಪಂಚಾಯ್ತಿ ಚುನಾವಣೆಯಲ್ಲಿ ೧೫ ಮಂದಿ ಚುನಾಯಿತ ಸದಸ್ಯರಿದ್ದರು. ಸ್ಥಾನಗಳ ಮೀಸಲಾತಿ ವಿವರ ಸಾಮಾನ್ಯ (ಮಹಿಳೆ), ಹಿಂದುಳಿದ ಪಂಗಡ–ಎ (ಮಹಿಳೆ) ಹಿಂದುಳಿದ ಪಂಗಡ–ಬಿ (ಮಹಿಳೆ) ಪರಿಶಿಷ್ಠ ಜಾತಿ (ಮಹಿಳೆ) ಪರಿಶಿಷ್ಟ ಪಂಗಡ (ಮಹಿಳೆ) ೨೦೦೩–೦೪ರ ಸಾಲಿನಲ್ಲಿ ಪಂಚಾಯ್ತಿಯ ವ್ಯಾಪ್ತಿಯ ಪ್ರದೇಶದ ವಿಸ್ತೀರ್ಣವು ೧೧.೦೫ ಚ.ಕಿ.ಮೀ. ಆಗಿತ್ತು. ನಾಲ್ಕು ಕಂದಾಯ ಗ್ರಾಮಗಳನ್ನೊಳಗೊಂಡ ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ೧೫ ಚುನಾವಣಾ ವಾರ್ಡುಗಳು ಮತ್ತು ೨೨ ಕಂದಾಯ ವಾರ್ಡುಗಳಿರುತ್ತವೆ ಮತ್ತು ಈ ಪ್ರದೇಶದಲ್ಲಿರುವ ಮನೆಗಳ ಸಂಖ್ಯೆ ೪೦೭೦. ೨೦೦೩–೦೪ರಲ್ಲಿ ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೩೬೭೦ ಆಗಿತ್ತು ಹಾಗೂ ಸರಾಸರಿ ಕರಭಾರ ರೂ.೩೭೭೦೦ ೧೯೯೨ರಲ್ಲಿ ಹುಡ್ಕೋ ವತಿಯಿಂದ ಹೊಸಬಡಾವಣೆ ನಿರ್ಮಾಣಗೊಂಡಿತು. ೧೯೯೯ರಲ್ಲಿ ಆರು ಎಕರೆ ಪ್ರದೇಶದಲ್ಲಿ ರಚನೆಯಾದ ಆಶ್ರಯ ಕಾಲನಿ ಮತ್ತು ಕುದ್ಕಪಳ್ಳಿ ಎಂಬಲ್ಲಿ ಮೂರು ಎಕರೆ ಪ್ರದೇಶದಲ್ಲಿ ರಚಿಸಲ್ಪಟ್ಟ ಅಂಬೇಡ್ಕರ್ ಕಾಲೋನಿಗಳು ನಗರ ವ್ಯಾಪ್ತಿಯು ಇತರ ಮುಖ್ಯ ಜನವಸತಿ ಪ್ರದೇಶದ ವಿಸ್ತರಣೆ ಯೋಜನೆಗಳಾಗಿವೆ. ಇಲ್ಲಿನ ನಿವಾಸಿಗಳಿಗೆ ನಗರ ಪಂಚಾಯ್ತಿ ವತಿಯಿಂದ ಅಗತ್ಯ ನಾಗರಿಕ ಸೌಲಭ್ಯಗಳಾದ ನೀರು, ವಿದ್ಯುತ್, ಒಳಚರಂಡಿ, ರಸ್ತೆ, ಉದ್ಯಾನವನ ಮುಂತಾದವನ್ನು ಒದಗಿಸಲಾಗಿದೆ.

## ನೀರು ಸರಬರಾಜು

ನಗರ ವ್ಯಾಪ್ತಿಯ ಜನತೆಗೆ ನಗರ ಪಂಚಾಯ್ತಿಯೇ ಶುದ್ಧ ಮತ್ತು ಸುರಕ್ಷಿತ ನೀರನ್ನು ಸರಬರಾಜು ಮಾಡುತ್ತಿದೆ. ನಗರದಲ್ಲಿರುವ ಐದು ತೆರೆದ ಬಾವಿ ಮತ್ತು ೨೩ ಕೊಳವೆ ಬಾವಿಗಳೇ ನಗರದ ಮುಖ್ಯ ನೀರಿನ ಮೂಲಗಳಾಗಿವೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸರ್ಕಾರದಿಂದ ಮಂಜೂರಾದ ರೂ.೪.೧೨ ಕೋಟಿ ರೂ.ಗಳ ವೆಚ್ಚದ ಯಾಂತ್ರೀಕೃತ ನೀರು ಸರಬರಾಜು ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಿದೆ. ಸದ್ಯದಲ್ಲೇ ನೀರು ಪೂರೈಕೆ ಪ್ರಾರಂಭವಾಗುತ್ತದೆ. ಪ್ರಸ್ತುತ ನಗರದ ನೀರು ಪೂರೈಕೆಗಾಗಿ ಮೂರು ಪೂರಕ ನೀರು ಸಂಗ್ರಹಣಾಗಾರಗಳಿವೆ. ಇವುಗಳ ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ ೫.೫ ಲಕ್ಷ ಲೀಟರ್‌ಗಳಾಗಿವೆ. ೨೦೦೪ರ ವರ್ಷದಲ್ಲಿ ನಗರ ವ್ಯಾಪ್ತಿಯಲ್ಲಿ ೯೨೪ ಗೃಹಬಳಕೆ ನೀರಿನ ಸಂಪರ್ಕಗಳು ಮತ್ತು ೨೫೮ ಸಾರ್ವಜನಿಕ ಬೀದಿ ನಲ್ಲಿಗಳಿದ್ದವು. ದೈನಂದಿನ ನೀರು ಪೂರೈಕೆ ಪ್ರಮಾಣ ೨,೯೬,೬೪೦ ಲೀಟರ್‌ಗಳಾಗಿದ್ದು ನೀರಿನ ತಲಾವಾರು ಹಂಚಿಕೆ ೧೮.೦೧ ಲೀಟರ್ ಇದೆ. ಪಂಚಾಯ್ತಿಯು ೨೦೦೪ರಲ್ಲಿ ನೀರು ಪೂರೈಕೆಗೆ ಎಂಟು ಲಕ್ಷ ರೂ.ಗಳನ್ನು ವ್ಯಯಿಸಿದ್ದು, ನೀರಿನ ತೆರಿಗೆ ರೂಪದಲ್ಲಿ ಐದು ಲಕ್ಷ ರೂ.ಗಳನ್ನು ವಸೂಲಿ ಮಾಡಿದೆ.

## ಆರೋಗ್ಯ ಮತ್ತು ನೈರ್ಮಲ್ಯ

ನಗರ ಪಂಚಾಯ್ತಿ ವ್ಯಾಪ್ತಿಯು ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಪ್ರತಿದಿನ ಚರಂಡಿಗಳನ್ನು ಶುಚಿಗೊಳಿಸಲಾಗುತ್ತಿದೆ. ಕೊಳಚೆ ನೀರು ನಿಲ್ಲದಂತೆ ಗುಂಡಿಗಳಲ್ಲಿ ಇಂಗಿಸಲಾಗುತ್ತಿದೆ. ಕಾಲರಾ, ಮಲೇರಿಯಾ, ಸಿಡುಬು, ಮುಂತಾದ ರೋಗಗಳು ಮರುಕಳಿಸದಂತೆ ತಡೆಯಲು ಲಸಿಕೆ ನೀಡುವುದು, ಔಷಧ ಸಿಂಪಡಣೆ, ಇಲಿ ನಿಯಂತ್ರಣ, ಮುಂತಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹೋಟೆಲ್‌ಗಳ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸಿ ಕುಡಿಯಲು ಬಿಸಿ ನೀರು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರತಿಮನೆಯಲ್ಲೂ ಇಂಗುಗುಂಡಿ ಸಹಿತ ಶೌಚಾಲಯದ ವ್ಯವಸ್ಥೆ ಇದೆ. ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಮಳೆನೀರು ಹರಿಯಲು ಅನುಕೂಲವಾಗುವಂತೆ ತೆರೆದ ಚರಂಡಿ ವ್ಯವಸ್ಥೆ ಮಾಡಿ ನೀರು ನಿಲ್ಲದಂತೆ ಎಚ್ಚರ ವಹಿಸಲಾಗಿದೆ. ಇಲ್ಲಿ ನಾಲ್ಕು ಎಕರೆ ಪ್ರದೇಶದ ಬಿಜಾಪುರ ಕಾಲೋನಿ ಎಂಬ ಕೊಳಚೆ ಪ್ರದೇಶವನ್ನು ಗುರುತಿಸಲಾಗಿದೆ. ಇದನ್ನು ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಯು ನಿರ್ವಹಿಸುತ್ತದೆ. ನಗರ ಪಂಚಾಯ್ತಿಯಲ್ಲಿ ತ್ಯಾಜ್ಯವಸ್ತು ವಿಲೇವಾರಿಗೆ ಚಾಲಕ ಸಹಿತ ಒಂದು ಮಿನಿಲಾರಿ ಇದೆ. ನಗರ ನೈರ್ಮಲ್ಯಕ್ಕಾಗಿ ೧೫ ಮಂದಿ ಪೌರಕಾರ್ಮಿಕರು ಸ್ಯಾನಿಟರಿ ಮೇಸ್ತ್ರಿಯ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಾರೆ.

## ಇತರೆ ಸೌಲಭ್ಯಗಳು

ನಗರ ಪಂಚಾಯಿತ್ತಿ ವ್ಯಾಪ್ತಿಯಲ್ಲಿ ಒಟ್ಟು ೬೪.೨೮ ಕಿ.ಮೀ. ರಸ್ತೆ ಇದೆ. ೨೦೦೧ರಿಂದ ೨೦೦೪ರವರೆಗೆ ಪ್ರತಿವರ್ಷ ಪಂಚಾಯಿತಿ ೧.೫ ಲಕ್ಷ ರೂ.ಗಳನ್ನು ಶೇ.೧೮ರ ನಿಧಿಯ ರೂಪದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣಕ್ಕಾಗಿ ಮೀಸಲಿಟ್ಟು ಮನೆ ರಿಪೇರಿ, ಶೌಚಾಲಯ ನಿರ್ಮಾಣ, ವಿದ್ಯುತ್ ಸಂಪರ್ಕ, ಬೀದಿದೀಪ ವ್ಯವಸ್ಥೆ, ರಸ್ತೆ ಅಭಿವೃದ್ಧಿ ಮುಂತಾದ ಕೆಲಸಗಳಿಗಾಗಿ ಖರ್ಚುಮಾಡುತ್ತಿದೆ. ೧೯೯೨–೯೩ನೇ ಸಾಲಿನಲ್ಲಿ ನೆಹರೂ ರೋಜ್‌ಗಾರ್ ಯೋಜನೆಯಲ್ಲಿ ಈಗಿನ ಪಂಚಾಯತ್ ಕಚೇರಿಯ ಕಟ್ಟಡವನ್ನು ಆರು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ ಹಾಗೂ ೧.೪ ಲಕ್ಷ ರೂ.ಗಳನ್ನು ಖರ್ಚು ಮಾಡಿ ೧೯೯೯–೨೦೦೦ನೇ ವರ್ಷದಲ್ಲಿ ಮೀನು ಮತ್ತು ತರಕಾರಿ ಮಾರುಕಟ್ಟೆ ಸಂಕೀರ್ಣವನ್ನು ಕಟ್ಟಲಾಗಿದೆ. ೧೯೯೮–೯೯ರಲ್ಲಿ ಪಂಚಾಯಿತ್ತಿಯ ಒಟ್ಟು ಆದಾಯ ರೂ..೪೪,೬೦,೮೫೦ ಮತ್ತು ಒಟ್ಟು ಖರ್ಚು ೩೫, ೬೩,೮೩೫ ಹಾಗೂ ೨೦೦೧–೦೨ರಲ್ಲಿ ೯೧,೬೦,೦೦೦ ಆದಾಯವಿದ್ದು ರೂ.೭೮,೪೫,೮೦೮ ಖರ್ಚಾಗಿದೆ.

**ಕೋಷ್ಟಕ ೧೨.೩೯**

**ಮೇಲ್ಕಂಡ ವರ್ಷಗಳಲ್ಲಿ ಪಂಚಾಯಿತ್ತಿಯು ವಿವಿಧ ಬಾಬ್ತುಗಳಿಗೆ ಮಾಡಿದ ಶೇಕಡಾವಾರು ಖರ್ಚು ವಿವರ ಕೆಳಗಿನಂತಿದೆ.**

| ಕ್ರ.ಸಂ | ವಿವರ | ೧೯೯೮–೯೯ ಶೇಕಡಾ | ೨೦೦೧–೦೨ ಶೇಕಡಾ |
|---|---|---|---|
| ೧ | ಆನಾರೋಗ್ಯ ಮತ್ತು ನೈರ್ಮಲ್ಯ | ೧೦ | ೧೨ |
| ೨ | ಸಾರ್ವಜನಿಕ ಕಾಮಗಾರಿಗಳು | ೧೦ | ೧೪ |
| ೩ | ನೀರು ಸರಬರಾಜು | ೨೦ | ೧೫ |
| ೪ | ರಸ್ತೆ ಮತ್ತು ಬೀದಿದೀಪ | ೧೯ | ೨೫ |
| ೫ | ಸಿಬ್ಬಂದಿ ಪ್ರಭಾರ | ೨೦ | ೧೬ |
| ೬ | ಪರಿಶಿಷ್ಟ ಜಾತಿ ಮತ್ತು ಪಂಗಡ | ೧೮ | ೧೮ |
| ೭ | ಇತರೆ | ೩ | ೨ |

೧೯೯೭ರ ಡಿಸೆಂಬರ್ ತಿಂಗಳಿನಿಂದ ೨೦೦೫ರ ಮಾರ್ಚ್‌ವರೆಗೆ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ದೊರೆತ ಅನುದಾನದಿಂದ ವಿವಿಧ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಧಿಸಿದ ಪ್ರಗತಿಯ ವಿವರಗಳು ಕೆಳಗಿನ ಕೋಷ್ಟಕದಲ್ಲಿದೆ.

**ಕೋಷ್ಟಕ ೧೨.೪೦**

| ಕ್ರ.ಸಂ | ಕಾರ್ಯಕ್ರಮ | ಅನುದಾನ (ರೂ.) | ಖರ್ಚು (ರೂ.) | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧ | ಸ್ವಯಂ ಉದ್ಯೋಗ ಯೋಜನೆ | ೩೬೧೨೧೫ | ೩೬೧೨೧೫ | ೧೧೮ |
| ೨ | ಡ್ವಾಕ್ವಾ | ೪೦೦೦೦೦ | ೨೦೦೦೦೦ | ೨೦ |
| ೩ | ತರಬೇತಿ ಕಾರ್ಯಕ್ರಮ | ೩೨೨೪೭೩ | ೩೨೨೪೭೩ | ೧೬೭ |
| ೪ | ನಿರಂತರ ಉಳಿತಾಯ ಗುಂಪುಗಳು | ೨೨೦೦೦೦ | ೨೨೦೦೦೦ | ೨೦೦ |
| ೫ | ಸಾಮಾಜಿಕ ಸೇವಾ ಚಟುವಟಿಕೆಗಳು | ೨೫೨೬೪೮ | ೨೫೨೬೪೮ | ೨೫೬೫ |
| ೬ | ಕೂಲಿ ಉದ್ಯೋಗ ಕಾರ್ಯಕ್ರಮ | ೧೨೯೯೦೬೪ | ೧೨೯೯೦೬೪ | ೧೫೭೫೦ |
| ೭ | ಸಮುದಾಯ ಭವನ | ೬೮೫೦೦೦ | ೬೮೫೦೦೦ | – |

**ಮೂಲ**: ನಗರ ಪಂಚಾಯಿತ್ತಿ, ಮೂಲ್ಕಿ

**ಕೋಷ್ಟಕ ೧೨.೪೧ : ೧೯೯೯–೨೦೦೦ರಿಂದ ೨೦೦೩–೦೪ರವರೆಗೆ ಆದಾಯ ವೆಚ್ಚದ ವಿವರ**

| ವರ್ಷ | ಆದಾಯ (ಲಕ್ಷ ರೂ.) | ವೆಚ್ಚ (ಲಕ್ಷ ರೂ.) |
|---|---|---|
| ೧೯೯೯–೨೦೦೦ | ೯೨.೦೦ | ೫೯.೨೩ |
| ೨೦೦೦–೦೧ | ೧೦೦.೯೭ | ೬೦.೧೨ |
| ೨೦೦೧–೦೨ | ೧೧೪.೨೧ | ೮೬.೫೦ |
| ೨೦೦೨–೦೩ | ೯೫.೧೮ | ೭೦.೨೧ |
| ೨೦೦೩–೦೪ | ೯೮.೨೬ | ೬೧.೪೮ |

**ಮೂಲ** : ನಗರ ಪಂಚಾಯ್ತಿ, ಮೂಲ್ಕಿ

## ನಗರ ಪಂಚಾಯ್ತಿ – ಉಳ್ಳಾಲ

ಈ ಮೊದಲು ಅಧಿಸೂಚಿತ ಪ್ರದೇಶವಾಗಿದ್ದ ಉಳ್ಳಾಲ ಮತ್ತು ಪೆರ್ಮನ್ನೂರ್ ಮಂಡಲ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳನ್ನು ವಿಲೀನಗೊಳಿಸಿ ೧೯೯೫ರಲ್ಲಿ ಉಳ್ಳಾಲ ಪಟ್ಟಣ ಪಂಚಾಯ್ತಿಯನ್ನು ಪ್ರಾರಂಭಿಸಲಾಯ್ತು. ಸಂವಿಧಾನದ ೭೪ನೇ ತಿದ್ದುಪಡಿ ಪ್ರಕಾರ ೨೦೦೧ರಲ್ಲಿ ಪಂಚಾಯ್ತಿಯ ೨೦ ಸ್ಥಾನಗಳಿಗೆ ಚುನಾವಣೆ ನಡೆದಿದೆ. ಪ್ರಸ್ತುತ ೨೦ ಮಂದಿ ಸದಸ್ಯರಿದ್ದಾರೆ. ಸದಸ್ಯರ ಸ್ಥಾನಗಳ ಮೀಸಲು ವಿವರ ಹೀಗಿದೆ.

**ಕೋಷ್ಟಕ ೧೨.೪೨**

| ಸಾಮಾನ್ಯ | | ಹಿಂದುಳಿದ ವರ್ಗ ಎ | | ಹಿಂದುಳಿದ ವರ್ಗ ಬಿ | | ಒಟ್ಟು | | ಒಟ್ಟು |
|---|---|---|---|---|---|---|---|---|
| ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | |
| ೮ | ೫ | ೩ | ೩ | ೧ | – | ೧೨ | ೮ | ೨೦ |

೨೦೦೩–೦೪ರಲ್ಲಿ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯ ವಿಸ್ತೀರ್ಣವು ೧೧.೧೧ ಚ.ಕಿ.ಮೀಟರ್‌ಗಳಿತ್ತು. ೨೦ ವಾರ್ಡುಗಳಾಗಿ ವಿಭಾಗಿಸಲಾಗಿರುವ ನಗರ ಪ್ರದೇಶದಲ್ಲಿ ೨೦೦೫ರಲ್ಲಿದ್ದಂತೆ ಜನಸಂಖ್ಯೆ ೪೯,೮೯೫ ಹಾಗೂ ಒಟ್ಟು ೮,೨೯೬ ಮನೆಗಳಿವೆ. ೨೦೦೪ರಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೭೭೩೧. ಸರಾಸರಿ ಕರಭಾರ ರೂ.೨೯೦–೦೦ ಆಗಿತ್ತು. ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಬಡಾವಣೆಗಳ ನಿರ್ಮಾಣ ಮತ್ತು ನಿರ್ವಹಣೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ನಡೆಸುತ್ತದೆ. ಜನರಿಗೆ ಅಗತ್ಯ ನಾಗರೀಕ ಸೌಲಭ್ಯವನ್ನು ಪಂಚಾಯ್ತಿಯೇ ಒದಗಿಸುತ್ತಿದೆ.

## ನೀರು ಸರಬರಾಜು

ಪಂಚಾಯ್ತಿ ವತಿಯಿಂದ ಉಳ್ಳಾಲ ನಗರಕ್ಕೆ ಕೊಳವೆ ಬಾವಿ ಹಾಗೂ ತೆರೆದ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ನಗರಪ್ರದೇಶದಲ್ಲಿ ಲಭ್ಯವಿರುವ ೪೧ ಕೈಪಂಪು ಚಾಲಿತ ಕೊಳವೆಬಾವಿಗಳು ಮತ್ತು ಏಳು ವಿದ್ಯುತ್ ಪಂಪು ಚಾಲಿತ ಕೊಳವೆಬಾವಿಗಳಿದ್ದು ಎಡಿಬಿ ಅನುದಾನದ ೧೮ ಕೋಟಿ ರೂ.ಗಳ ನೆರವಿನಲ್ಲಿ ನಿರ್ಮಿಸಲಾದ ಜಲ ಶುದ್ಧೀಕರಣ ಹಾಗೂ ಜಲ ಸಂಗ್ರಹಾಗಾರಗಳ ಮುಖಾಂತರ ಶುದ್ಧ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ೧೮.೯೦ ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ತೆರೆದ ಬಾವಿಯಿಂದಲೂ ನೀರು ಪಡೆದು ಸರಬರಾಜು ಮಾಡಲಾಗುತ್ತದೆ. ನಗರ ಪಂಚಾಯ್ತಿಗೆ ಎಡಿಬಿಯಿಂದ ಮಂಜೂರಾಗಿರುವ ೫೬.೬೦ ಕೋಟಿ ರೂ.ಗಳ ಯೋಜನೆಯು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ನಿರ್ಮಾಣವನ್ನು ಒಳಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಇದೇ ಯೋಜನೆ ಅಡಿಯಲ್ಲಿ ಬಂಟ್ವಾಳ ತಾಲೂಕಿನ ತುಂಬೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯವರು ರಚಿಸಿರುವ ವೆಂಟೆಡ್‌ಡ್ಯಾಂನಿಂದ ಉಳ್ಳಾಲ ನಗರಕ್ಕೆ ನೀರು ಸರಬರಾಜು ಮಾಡುವ

ಪೈಪ್‌ಲೈನ್ ಕಾಮಗಾರಿಯೂ ಪ್ರಗತಿಯಲ್ಲಿದೆ. ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೂರು ಜಲ ಸಂಗ್ರಹಣಾಗಾರಗಳಿದ್ದು ಅವುಗಳ ಸಂಗ್ರಹಣಾ ಸಾಮರ್ಥ್ಯವು ೨೪, ೧೦ ಮತ್ತು ಐದು ಲಕ್ಷ ಲೀಟರ್‌ಗಳಾಗಿದೆ. ಪಂಚಾಯ್ತಿಯ ವ್ಯಾಪ್ತಿಯಲ್ಲಿ ೨೦೦೫ರಲ್ಲಿದ್ದಂತೆ ೯೩೭ ಗೃಹ ಬಳಕೆ ಸಂಪರ್ಕ ಹಾಗೂ ೧೩೪೩ ಸಾರ್ವಜನಿಕ ಬೀದಿ ನಲ್ಲಿಗಳಿವೆ. ದಿನಂಪ್ರತಿ ನೀರು ಸರಬರಾಜು ಪ್ರಮಾಣ ೩.೪ ದಶಲಕ್ಷ ಲೀಟರ್‌ಗಳು ಹಾಗೂ ತಲಾವಾರು ನೀರಿನ ಬಳಕೆ ಪ್ರಮಾಣ ೬೮ ಲೀಟರ್‌ಗಳು. ಕಳೆದ ಮೂರು ವರ್ಷಗಳಲ್ಲಿ ನೀರು ಸರಬರಾಜಿಗೆ ತಗುಲಿದ ವೆಚ್ಚ ಹಾಗೂ ನೀರು ತೆರಿಗೆ ರೂಪದಲ್ಲಿ ಸಂಗ್ರಹವಾದ ಆದಾಯದ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೪೩ : ನೀರು ಪೂರೈಕೆ ವೆಚ್ಚ ಹಾಗೂ ನೀರು ತೆರಿಗೆ ಆದಾಯ ವಿವರ**

| ಸಾಲು | ವೆಚ್ಚ ರೂ. | ನೀರು ತೆರಿಗೆ ಆದಾಯ ರೂ. |
|---|---|---|
| ೨೦೦೧–೦೨ | ೧೫೫೩೦೭೧–೦೦ | ೫೧೬೬೩೮–೦೦ |
| ೨೦೦೨–೦೩ | ೧೩೦೩೮೩೫–೦೦ | ೫೯೬೩೬೧–೦೦ |
| ೨೦೦೩–೦೪ | ೩೫೯೨೦೧೪–೦೦ | ೬೯೬೩೫೭–೦೦ |

## ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ನಗರ ಪಂಚಾಯ್ತಿ ವ್ಯಾಪ್ತಿಯ ಪ್ರದೇಶವು, ಸಿಡುಬು, ಪ್ಲೇಗ್, ಕಾಲರಾ, ಮುಂತಾದ ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸಾಂಕ್ರಾಮಿಕ ರೋಗ ತಡೆಗಟ್ಟಲು ಲಸಿಕೆ ನೀಡಿಕೆ, ಔಷಧ ಸಿಂಪಡಣೆ, ಇಲಿ ನಿಯಂತ್ರಣ, ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿದಿನ ಚರಂಡಿಗಳನ್ನು ಸ್ವಚ್ಛಗೊಳಿಸಿ ನೀರು ನಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆ. ಹೆಚ್ಚಿನ ನೀರನ್ನು ಇಂಗು ಗುಂಡಿಗಳಲ್ಲಿ ಇಂಗಿಸಲಾಗುತ್ತದೆ. ತೆರೆದ ಚರಂಡಿಗಳ ಮೂಲಕ ಮಳೆ ನೀರನ್ನು ಸಮುದ್ರಕ್ಕೆ ಹರಿಸಲಾಗುತ್ತದೆ. ಹೋಟೆಲ್‌ಗಳಲ್ಲಿ ಸ್ವಚ್ಛತೆ ಬಗ್ಗೆ ನಿಗಾ ಇರಿಸಲಾಗಿದೆ. ಅಲ್ಲದೆ ಕುಡಿಯಲು ಬಿಸಿ ನೀರು ನೀಡಲಾಗುತ್ತದೆ. ನಗರ ವ್ಯಾಪ್ತಿಯ ಮನೆಗಳಲ್ಲಿ ಇಂಗು ಗುಂಡಿಗಳ ಸಹಿತ ಶೌಚಾಲಯಗಳಿದ್ದು ಈ ಬಗ್ಗೆ ನಗರ ಪಂಚಾಯಿತಿಯು ಯಾವುದೇ ನಿರ್ವಹಣೆ ಮಾಡುತ್ತಿಲ್ಲ. ನಗರದ ಜನನ ಮತ್ತು ಮರಣ ದಾಖಲಾತಿಯನ್ನು ಪಂಚಾಯ್ತಿಯ ಮುಖ್ಯಾಧಿಕಾರಿಗಳು ನಿರ್ವಹಿಸುವರು. ನಗರ ಪಂಚಾಯತ್ ವ್ಯಾಪ್ತಿಯ ನೈರ್ಮಲ್ಯ ವ್ಯವಸ್ಥೆಯನ್ನು ಖಾಸಗಿ ಗುತ್ತಿಗೆದಾರರ ಮೂಲಕ ನಿರ್ವಹಿಸಲಾಗುತ್ತಿದೆ ಹಾಗೂ ಈ ಕಾರ್ಯವು ಸ್ಯಾನಿಟರಿ ಮೇಸ್ತ್ರಿಯ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ.

## ಇತರೆ ಸೌಲಭ್ಯಗಳು

ನಗರ ಪಂಚಾಯ್ತಿ ವ್ಯಾಪ್ತಿಯಲ್ಲಿ ೦.೩೮ ಕಿ.ಮೀ. ಕಾಂಕ್ರೀಟ್ ರಸ್ತೆ ೨೮ ಕಿ.ಮೀ. ಟಾರ್ ರಸ್ತೆ ಹಾಗೂ ೫೬.೬೨ ಕಿ.ಮೀ. ಕಚ್ಚಾ ರಸ್ತೆ ಇದೆ. ಮಳೆ ನೀರನ್ನು ಸಮುದ್ರಕ್ಕೆ ಹರಿಸಲು ಹೊರ ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಎಲ್ಲಾ ಬೀದಿಗಳಲ್ಲಿ ಮೆಸ್ಕಾಂ ವತಿಯಿಂದ ಬೀದಿ ದೀಪ ಅಳವಡಿಸಲಾಗಿದೆ. ನಗರ ಪ್ರದೇಶವು ಕೊಳಚೆಪ್ರದೇಶಗಳಿಂದ ಮುಕ್ತವಾಗಿದೆ. ಪುರಸಭೆಗಳ ಆಕ್ಟ್ರಾಯ್ ಸಂಗ್ರಹ ವ್ಯವಸ್ಥೆ ರದ್ದಾದಾಗಿನಿಂದ ರಾಜ್ಯ ಹಣಕಾಸು ಆಯೋಗವೇ ಪಂಚಾಯ್ತಿಗೆ ವಾರ್ಷಿಕ ಅನುದಾನ ನೀಡುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಪಂಚಾಯ್ತಿ ಪಡೆದ ಅನುದಾನ ವಿವರ ಕೆಳಗಿನಂತಿದೆ.

**ಕೋಷ್ಟಕ ೧೨.೪೪**

| ಕ್ರ.ಸಂ. | ವರ್ಷ | ಅನುದಾನ ರೂ.ಗಳಲ್ಲಿ |
|---|---|---|
| ೧ | ೨೦೦೧–೦೨ | ೧೦೬೫೬೦೦–೦೦ |
| ೨ | ೨೦೦೨–೦೩ | ೧೧೯೩೦೦೦–೦೦ |
| ೩ | ೨೦೦೩–೦೪ | ೧೬೨೪೮೫೫–೦೦ |

೨೦೦೩–೦೪ರಲ್ಲಿ ಎ.ಡಿ.ಸಬಿ ಯೋಜನೆಯನ್ವಯ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ನಗರ ಪಂಚಾಯತ್ ಕಾರ್ಯಾಲಯ ಕಟ್ಟಡವನ್ನು ಕಟ್ಟಲಾಗಿದೆ.

**ಕೋಷ್ಟಕ ೧೨.೪೫ : ೨೦೦೨–೦೩ನೇ ಸಾಲಿನಲ್ಲಿ ನಗರ ಪಂಚಾಯತ್ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ ವಿವರ ಹೀಗಿದೆ.**

| ಕ್ರ.ಸಂ. | ವಿವರ | ಖರ್ಚು (ರೂ.ಗಳು) |
|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೩೮೪೯೫–೦೦ |
| ೨ | ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗೆ ಮಾಡಿದ ವೆಚ್ಚ | ೨೭೨೮೮೨೧–೦೦ |
| ೩ | ನೀರು ಸರಬರಾಜು | ೧೫೫೩೦೭–೦೦ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೭೨೭೩೭೦–೦೦ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೨೦೦೦೦೦–೦೦ |
| ೬ | ಸಿಬ್ಬಂದಿ ವೇತನ | ೧೦೭೮೭೫೩–೦೦ |
| ೭ | ಇತರೆ ಖರ್ಚು | ೩೦೮೭೯೧–೦೦ |

ಕಳೆದ ನಾಲ್ಕು ವರ್ಷಗಳಲ್ಲಿ ನಗರ ಪಂಚಾಯತ್ ಪರಿಶಿಷ್ಟ ಜಾತಿ ಪಂಗಡಗಳಿಗೆ ಶೇ.೧೮ ಮೀಸಲು ನಿಧಿ ಅನ್ವಯ ಮೀಸಲಿರಿಸಿದ ಹಾಗೂ ಖರ್ಚು ಮಾಡಿದ ಮೊತ್ತದ ವಿವರ ಕೆಳಕಂಡಂತಿದೆ (ರೂ.ಗಳಲ್ಲಿ).

| ವರ್ಷ | ಮೀಸಲು ಹಣ (ಶೇ.೧೮) | ಖರ್ಚು ಮಾಡಿದ ಹಣ |
|---|---|---|
| ೨೦೦೧–೦೨ | ೩,೪೦,೦೦೦ | ೩,೪೦,೦೦೦ |
| ೨೦೦೨–೦೩ | ೩,೬೦,೦೦೦ | ೩,೬೦,೦೦೦ |
| ೨೦೦೩–೦೪ | ೩,೮೦,೦೦೦ | ೩,೮೦,೦೦೦ |
| ೨೦೦೪–೦೫ | ೪,೮೦,೦೦೦ | ೧,೭೯,೦೦೦ |

೧–೧೨–೯೮ ರಿಂದ ೩೧–೩–೨೦೦೫ರವರೆಗೆ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯನ್ವಯ ದೊರಕಿದ ಅನುದಾನದಲ್ಲಿ ನಗರ ಪಂಚಾಯತ್ ಸಾಧಿಸಿದ ವಿವಿಧ ಅಭಿವೃದ್ಧಿ ಯೋಜನೆ ಪ್ರಗತಿ ವಿವರ ಹೀಗಿದೆ.

**ಕೋಷ್ಟಕ ೧೨.೪೬**

| ಕ್ರ.ಸಂ. | ವಿವರ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳ ಸಂಖ್ಯೆ |
|---|---|---|---|
| ೧ | ನಗರ ಕೂಲಿ ಉದ್ಯೋಗ ಕಾರ್ಯಕ್ರಮ | ೧೯೩೧೯೭ | ೪೮ ಕಾಮಗಾರಿ |
| ೨ | ಕ್ರೋಢಿಕೃತ ಸೇವೆ | ೫೮೬೫೭೯ | ೧೪೫೮೫ |
| ೩ | ನಿರಂತರ ಉಳಿತಾಯ ಮತ್ತು ಸಾಲಗುಂಪು | ೫೬೦೦೦೦ | ೫೬೦ |
| ೪ | ತರಬೇತಿ ಕಾರ್ಯಕ್ರಮ | ೫೫೫೫೪೪ | ೨೫೮ |
| ೫ | ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ | ೪೨೫೦೦೦ | ೪೧ |
| ೬ | ಸಣ್ಣ ಉದ್ದಿಮೆ | ೫೫೦೫೮೦ | ೧೦೧ |
| ೭ | ಆಡಳಿತ | ೮೬೦೪೫೪ | |

**೧೯೯೯–೦೦ ರಿಂದ ೨೦೦೩–೦೪ರವರೆಗೆ ನಗರ ಪಂಚಾಯ್ತಿಯ ಆದಾಯ ಮತ್ತು ವೆಚ್ಚದ ವಿವರ.**

| ವರ್ಷ | ಆದಾಯ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೯–೦೦ | ೮೩.೮೦ | ೪೨.೮೪ |
| ೨೦೦೦–೦೧ | ೧೨೯.೬೮ | ೬೮.೩೩ |
| ೨೦೦೧–೦೨ | ೧೭೧.೬೩ | ೯೩.೧೨ |
| ೨೦೦೨–೦೩ | ೧೩೭.೬೯ | ೧೨೩.೭೯ |
| ೨೦೦೩–೦೪ | – | – |

## ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನ

ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಗೆ ಸ್ವಾಯತ್ತತೆ ನೀಡಿ ಆರ್ಥಿಕವಾಗಿ ಬಲಪಡಿಸುವ ಉದ್ದೇಶದಿಂದ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಸದೃಢಗೊಳಿಸುವ ಸಲುವಾಗಿ ಭಾರತದ ಸಂವಿಧಾನಕ್ಕೆ ೭೩ನೇ ಹಾಗೂ ೭೪ನೇ ತಿದ್ದುಪಡಿ ತರಲಾಗಿದೆ. ಸ್ಥಳೀಯ ಸಂಸ್ಥೆಗಳ ಆದಾಯದ ಮೂಲಗಳಾದ ಆಕ್ಟ್ರಾಯ್ ತೆರಿಗೆ, ಮನರಂಜನಾ ತೆರಿಗೆ, ಮೋಟಾರು ವಾಹನ ತೆರಿಗೆ ಇತ್ಯಾದಿಗಳನ್ನು ರದ್ದುಪಡಿಸಿದೆ. ಇದರಿಂದ ಸ್ಥಳೀಯ ಸಂಸ್ಥೆಗಳಿಗೆ ಉಂಟಾದ ಸಂಪನ್ಮೂಲ ಕೊರತೆಗಳನ್ನು ತುಂಬಿಕೊಡುವ ಉದ್ದೇಶದಿಂದ ಸರ್ಕಾರವು ಈ ಸಂಸ್ಥೆಗಳಿಗೆ ಅನುದಾನವನ್ನೊದಗಿಸಲು ತೀರ್ಮಾನಿಸಿತು. ಅನುದಾನ ನೀಡುವುದರಲ್ಲಿನ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಲು ಸರ್ಕಾರವು ರಾಜ್ಯ ಹಣಕಾಸ ಆಯೋಗವನ್ನು ರಚಿಸಿ, ವರದಿ ನೀಡಲು ಸೂಚಿಸಿತು. ಆಯೋಗವು ನೀಡಿದ ವರದಿಯನ್ನು ಅಂಗೀಕರಿಸಿದ ಸರ್ಕಾರವು ಅದರಲ್ಲಿ ಶಿಫಾರಸುಗೊಂಡಿರುವ ಆಯೋಗದ ಅನುದಾನ ಸೂತ್ರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ೧೯೯೭–೯೮ನೇ ಸಾಲಿನಲ್ಲಿ ಕಾರ್ಯಗತಗೊಳಿಸಿತು. ಅದರಂತೆ ರಾಜ್ಯ ಸರ್ಕಾರಕ್ಕೆ ಪ್ರಾಪ್ತವಾಗುವ ಒಟ್ಟು ರಾಜಸ್ವ ಆದಾಯ ಸ್ವೀಕೃತಿ ಮೊಬಲಗಿನ ಶೇ.೩೬ರಷ್ಟು ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾಗಿದೆ. ಇದರಲ್ಲಿ ಶೇ.೧೫ ಭಾಗವನ್ನು ನಗರ ಸ್ಥಳೀಯ ಸಂಸ್ಥೆಗಳಿಗೂ ಉಳಿದ ಶೇ.೮೫ ಭಾಗವನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೂ ನೀಡಲಾಗುತ್ತಿದೆ. ಡಾ.ತಿಮ್ಮಯ್ಯರವರ ನೇತೃತ್ವದಲ್ಲಿನ ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥಗಳಿಗೆ ಜನಸಂಖ್ಯೆಯ ಆಧಾರದಲ್ಲಿ ಶೇ.೩೩, ವಿಸ್ತೀರ್ಣದ ಆಧಾರದಲ್ಲಿ ಶೇ.೩೩, ಸಾವಿರ ಜನಸಂಖ್ಯೆಗೆ ಸರ್ಕಾರಿ ಆಸ್ಪತ್ರೆಯಲ್ಲಿನ ಹಾಸಿಗೆಗೆ ಶೇ.೧೧, ಅನಕ್ಷರಸ್ಥರ ಸಂಖ್ಯೆಗನುಗುಣವಾಗಿ ಶೇ.೧೧ ಮತ್ತು ರಸ್ತೆ ಕಿ.ಮೀ.ಉದ್ದವನ್ನು ಅನುಸರಿಸಿ, ಶೇ.೧೧ರಂತೆ ಅನುದಾನವನ್ನು ನೀಡಲು ಶಿಫಾರಸು ಮಾಡಿರುತ್ತದೆ. ಈ ವರದಿಯನ್ನು ಸರ್ಕಾರ ಅಂಗೀಕರಿಸಿದ್ದರೂ ಸಹ ಆಯೋಗ ಶಿಫಾರಸು ಮಾಡಿದ ರೀತಿಯಲ್ಲಿ ಹಾಗೂ ಪ್ರಮಾಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ನೀಡಲಾದ ಅನುದಾನದ ಬಹುಭಾಗ ಸಿಬ್ಬಂದಿ ವೇತನ ಪಾವತಿಗೆ ವಿನಿಯೋಗವಾಗುತ್ತಿದ್ದು, ಬೀದಿ ದೀಪ, ನೀರು ಸರಬರಾಜು, ವಿದ್ಯುತ್ ಪೂರೈಕೆ ಶುಲ್ಕ, ಒಳಚರಂಡಿ ವ್ಯವಸ್ಥೆ ಮುಂತಾದ ಸೇವೆಗಳಿಗೆ ಹೆಚ್ಚುವರಿಯಾಗಿ ಆಯೋಗದ ಅನುದಾನದಿಂದ ಬಿಡುಗಡೆ ಮಾಡಲಾಗುತ್ತಿದೆ. ಅಲ್ಲದೇ ನಗರ ಸ್ಥಳೀಯ ಸಂಸ್ಥೆಗಳ ತುರ್ತು ಅವಶ್ಯಕ ಕಾಮಗಾರಿಗಳಿಗಾಗಿ ಮಾತ್ರ ಮುಖ್ಯಮಂತ್ರಿಯವರ ವಿವೇಚನೆಯಲ್ಲಿ ಅನುದಾನ ನೀಡಲಾಗುತ್ತದೆ. ಎರಡನೇ ರಾಜ್ಯ ಹಣಕಾಸು ಆಯೋಗವನ್ನು ರಚಿಸಲಾಗಿದ್ದು, ಈ ಆಯೋಗವು ಇನ್ನೂ ವರದಿಯನ್ನು ಸಲ್ಲಿಸಿರುವುದಿಲ್ಲ. ಹೊಸ ಶಿಫಾರಸಿನನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥಗಳಿಗೆ ಬಿಡುಗಡೆ ಮಾಡಲಾದ ಎಸ್.ಎಫ್.ಸಿ ಅನುದಾನವು ೨೦೦೦–೦೧, ೨೦೦೧–೦೨, ಹಾಗೂ ೨೦೦೨–೦೩ನೇ ಸಾಲುಗಳಲ್ಲಿ ಕ್ರಮವಾಗಿ ರೂ.೫೩೨.೩೩ ಕೋಟಿ, ೯೫೪೮.೦೨ ಕೋಟಿ ಹಾಗೂ ರೂ..೫೮೯.೭೩ ಕೋಟಿ ಆಗಿದೆ.

**ಕೋಷ್ಟಕ ೧೨.೪೭**

**ರಾಜ್ಯ ಹಣಕಾಸು ಆಯೋಗದ ಶಿಫಾರಸಿನನ್ವಯ ೧೯೯೮–೯೯ರಿಂದ ೨೦೦೩–೦೪ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.**

| ಕ್ರ. ಸಂ. | ಸ್ಥಳೀಯ ಸಂಸ್ಥೆ ಹೆಸರು | ಅನುದಾನ ಬಿಡುಗಡೆ ವರ್ಷ (ಲಕ್ಷ ರೂ.) | | | | |
|---|---|---|---|---|---|---|
| | | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ |
| ೧ | ಬಂಟ್ವಾಳ – ಪ. ಪಂಚಾಯ್ತು | ೨೫.೬೧ | ೧೦.೯೦ | ೨೯.೦೫ | ೨೦.೧೮ | ೨೭.೦೨ |
| ೨ | ಪುತ್ತೂರು – ಪುರಸಭೆ | ೩೬.೨೪ | ೪೭.೫೭ | ೩೩.೩೫ | ೨೫.೧೧ | ೫೫.೮೮ |
| ೩ | ಸುಳ್ಯ – ಪುರಸಭೆ | – | – | – | – | – |
| ೪ | ಬೆಳ್ತಂಗಡಿ – ಪ.ಪಂಚಾಯ್ತಿ | ೦೫.೧೬ | ೦೮.೪೧ | ೦೭.೭೬ | ೫.೧೯ | ೪.೮೬ |
| ೫ | ಮೂಡುಬಿದಿರೆ – ಪುರಸಭೆ | – | ೧೧.೬೫ | ೨೬.೪೫ | ೨೬.೪೫ | ೧೭.೪೨ |
| ೬ | ಮುಲ್ಕಿ – ಪ.ಪಂಚಾಯ್ತಿ | ೦೭.೭೫ | ೧೩.೦೨ | ೨೭.೪೦ | ೧೧.೨೫ | ೨೮.೦೭ |
| ೭ | ಉಳ್ಳಾಲ – ಪ.ಪಂಚಾಯ್ತಿ | ೧೩.೭೯ | ೩೫.೭೩ | ೩೫.೭೩ | ೨೩.೯೩ | – |

**ಆಧಾರ**: ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

## ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

ನಗರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರವು ನಗರಾಭಿವೃದ್ಧಿ ಇಲಾಖೆಯನ್ನು ಹೊಂದಿದ್ದು, ಮನೆ ನಿರ್ಮಾಣ, ಕೊಳಚೆ ಪ್ರದೇಶಗಳ ನಿರ್ವಹಣೆ ಹೊರತುಪಡಿಸಿದಂತೆ ಉಳಿದೆಲ್ಲ ನಾಗರಿಕ ಅಗತ್ಯಗಳನ್ನು ಈ ಇಲಾಖೆ ಪೂರೈಸುತ್ತಿದೆ. ನಗರ/ಪುರಸಭೆಗಳ ಅಭಿವೃದ್ಧಿ ಕಾರ್ಯಗಳನ್ನು ಸಹ ಇದು ನಿರ್ವಹಿಸುತ್ತಿದೆ. ನಗರಗಳಿಗೆ ಕುಡಿಯುವ ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಸಮಾಜದ ದುರ್ಬಲ ವರ್ಗದವರಿಗೆ ನಿವೇಶನಗಳನ್ನು ರಚಿಸಿ ಹಂಚುವುದು ನಾಗರಿಕ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಉಸ್ತುವಾರಿ ವಹಿಸಿ ಕಾರ್ಯಗತಗೊಳಿಸುವುದು ಮುಂತಾದ ಜವಾಬ್ದಾರಿಗಳನ್ನು ಇದು ನಿರ್ವಹಿಸುತ್ತದೆ. ಕಡಿಮೆ ಆದಾಯದ ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆರ್ಥಿಕ ನೆರವಿನಡಿ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ ೧೧ನೇ ಹಣಕಾಸು ಆಯೋಗ ಹಾಗೂ ಬಾಲಿಕಾ ಸಮೃದ್ಧಿ ಯೋಜನೆ ಇವುಗಳನ್ನು ಸಹ ಅನುಷ್ಠಾನಗೊಳಿಸುತ್ತದೆ.ಬಡಾವಣೆಗಳನ್ನು ರಚಿಸಿ ನಿವೇಶನ ಹಂಚುವುದು, ಮಾಸ್ಟರ್ ಪ್ಲಾನ್ ತಯಾರಿಸುವುದು, ಅನುಮೋದನೆಗೊಂಡ ಮಾಸ್ಟರ್ ಪ್ಲಾನ್ ಹಾಗೂ ಅದರ ನಿಯಮಾಳಿಗಳ ಪ್ರಕಾರ ಕಟ್ಟಡಗಳಿಗೆ ಅನುಮತಿ ನೀಡುವುದು, ನಗರವನ್ನು ಯೋಜನಾಬದ್ಧಗೊಳಿಸುವುದು, ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಅನುಮತಿ ನೀಡುವುದು, ಭೂಪರಿವರ್ತನೆಗೆ ತಾಂತ್ರಿಕ ಸಲಹೆ ನೀಡುವುದು, ಖಾಸಗಿ ಬಡಾವಣೆಗಳಿಗೆ ಮಂಜೂರಾತಿ ನೀಡುವುದು, ಹತ್ತು ವರ್ಷಕ್ಕೊಮ್ಮೆ ಮಾಸ್ಟರ್ ಪ್ಲಾನ್ ಪರಿಷ್ಕರಣೆ ಕೆಲಸ, ಅವಧಿಕೃತ ಕಟ್ಟಡಗಳ ನಿಯಂತ್ರಣ, ಖಾಲಿ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳುವುದು, ಮತ್ತು ಸರ್ಕಾರ ಮಂಜೂರಾತಿ ನೀಡುವ ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಪ್ರಾಧಿಕಾರದ ಧ್ಯೇಯೋದ್ದೇಶಗಳಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೮೭ ರ ಕಲಂ ಮೂರರ ಪ್ರಕಾರ ಸರ್ಕಾರದ ಅಧಿಸೂಚನೆಯಂತೆ ೧೯೮೮ ರ ಮೇ ತಿಂಗಳಿನಿಂದ ಪ್ರಾರಂಭಗೊಂಡಿದೆ. ಪ್ರಾಧಿಕಾರದ ವ್ಯಾಪ್ತಿಯು ಮಹಾನಗರಪಾಲಿಕೆ, ಪುರಸಭೆಗಳು ಮತ್ತು ಇತರ ಕಂದಾಯ ಗ್ರಾಮಗಳನ್ನೊಳಗೊಂಡು ಒಟ್ಟು ೩೦೬ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಪ್ರಸ್ತುತ ೨೦೦೫ರಲ್ಲಿ ಅಧ್ಯಕ್ಷರೂ ಒಳಗೊಂಡಂತೆ ೨೦ ಮಂದಿ ಸದಸ್ಯರಿರುತ್ತಾರೆ. ಸರಕಾರವೇ ಪ್ರಾಧಿಕಾರಕ್ಕೆ ಅಧ್ಯಕ್ಷರ ನೇಮಕ ಮಾಡುತ್ತದೆ. ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯ ಪ್ರದೇಶದ ಜನಪ್ರತಿನಿಧಿಗಳಾದ ವಿಧಾನಸಭಾ ಸದಸ್ಯರು, ಈ ಪ್ರದೇಶದಲ್ಲಿ ವಾಸಿಸುವ ಎಲ್ಲಾ ವಿಧಾನ ಪರಿಷತ್ ಸದಸ್ಯರು ಪ್ರಾಧಿಕಾರದ ಸದಸ್ಯರಾಗಿ ಸರಕಾರದಿಂದ ನೇಮಕಗೊಳ್ಳುತ್ತಾರೆ. ಈ ಪ್ರದೇಶದ ಮಹಾನಗರಪಾಲಿಕೆಯ ಸದಸ್ಯರಲ್ಲೊಬ್ಬರನ್ನು ನಗರಪಾಲಿಕೆಯೇ ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತದೆ. ನಾಲ್ಕು ಮಂದಿ ಅಧಿಕಾರೇತರ ಸದಸ್ಯರನ್ನು ಸರ್ಕಾರ ನೇಮಿಸುತ್ತದೆ. ಇದರಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪರಿಶಿಷ್ಟ ಜಾತಿ/ಪಂಗಡದ ಸದಸ್ಯರಿಗೆ ಅವಕಾಶ ನೀಡಲಾಗುತ್ತದೆ. ವೃತ್ತಿನಿರತ ವಾಸ್ತುಶಿಲ್ಪಿಯೊಬ್ಬರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಜಿಲ್ಲಾಧಿಕಾರಿಗಳು, ಆಯುಕ್ತರು, ನಗರಯೋಜನಾ ಸದಸ್ಯರು, ಪಾಲಿಕೆ ಆಯುಕ್ತರು, ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಲೋಕೋಪಯೋಗಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮತ್ತು ಮೆಸ್ಕಾಂ ಇಲಾಖೆಗಳ ಕಾರ್ಯನಿರ್ವಾಹಕ ಅಭಿಯಂತರರು ಪ್ರಾಧಿಕಾರದ ಅಧಿಕಾರಿ ಸದಸ್ಯರಾಗಿರುತ್ತಾರೆ. ಪ್ರಾಧಿಕಾರವು ತಿಂಗಳಿಗೆ ಕನಿಷ್ಟ ಒಂದು ಸಭೆ ನಡೆಸಬೇಕಾಗಿರುತ್ತದೆ.

೧೯೮೮ರಿಂದ ೨೦೦೫ರವರೆಗೆ ಪ್ರಾಧಿಕಾರವು ಮಾಡಿರುವ ಸಾಧನೆಗಳ ವಿವರ

೧. ಪ್ರಾಧಿಕಾರದ ಆಡಳಿತ ಕಚೇರಿಗಾಗಿ ನಾಲ್ಕು ಅಂತಸ್ತುಗಳ ಕಟ್ಟಡ ನಿರ್ಮಾಣ

೨. ೮೧.೦೫ ಎಕರೆ ವಿಸ್ತೀರ್ಣದ ಜಾಗದ ಭೂಸ್ವಾಧೀನ

೩. ಉರ್ವಾಸ್ಟೋರ್‌ನಿಂದ ಕೊಟ್ಟಾರದವರೆಗೆ ಚತುಷ್ಪಥ ಕಾಂಕ್ರೀಟ್ ರಸ್ತೆ ನಿರ್ಮಾಣ

೪. ಇನ್‌ಫೋಸಿಸ್‌ನವರಿಗೆ ಮಾರಾಟ ಮಾಡಲಾಗಿರುವ ಕೊಟ್ಟಾರದ ವಾಣಿಜ್ಯ ಸಂಕೀರ್ಣ ನಿರ್ಮಾಣ

೫. ಮಾರುಕಟ್ಟೆ ಮತ್ತು ಬಸ್‌ಸ್ಟ್ಯಾಂಡ್‌ಗಳ ನಿರ್ಮಾಣ ಮತ್ತು ಪಾಲಿಕೆಗೆ ಹಸ್ತಾಂತರ

೬ ರೂ.೧೬ ಕೋಟಿ ಅಂದಾಜು ವೆಚ್ಚದಲ್ಲಿ ಹಂಪನಕಟ್ಟೆ ಬಳಿ ವಾಹನ ನಿಲುಗಡೆ ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆ ಹಾಗೂ ರೂ. ೬.೭೫ ಕೋಟಿ ವೆಚ್ಚದಲ್ಲಿ ಬಳಿ ಮಾರುಕಟ್ಟೆ ಸಂಕೀರ್ಣ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.

**ಕೋಷ್ಟಕ ೧೨.೪೮**

**೨೦೦೫ ರಲ್ಲಿದ್ದಂತೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ವಿವಿಧ ಬಡಾವಣೆಗಳಲ್ಲಿ ಹಂಚಿಕೆ ಮಾಡಲಾದ ನಿವೇಶನಗಳ ವಿವರ**

| ಕ್ರ.ಸಂ. | ಬಡಾವಣೆ | ನಿವೇಶನಗಳ ಸಂಖ್ಯೆ | ಪ.ಜಾತಿಗೆ ನೀಡಲಾಗಿರುವ ನಿವೇಶನ | ಪ.ಪಂಗಡಕ್ಕೆ ನೀಡಲಾಗಿರುವ ನಿವೇಶನ |
|---|---|---|---|---|
| ೧ | ಮಂಗಳಾನಗರ ಬಡಾವಣೆ | ೧೦೧ | ೨ | – |
| ೨ | ನೇತ್ರಾವತಿನಗರ ಬಡಾವಣೆ | ೭೦ | ೧ | ೩ |
| ೩ | ಮಹಾತ್ಮಾ ನಗರ ಬಡಾವಣೆ | ೬೩ | ೧ | – |
| ೪ | ಪ್ರಶಾಂತ ನಗರ ಬಡಾವಣೆ | ೯೮ | ೨ | ೩ |
| ೫ | ಪ್ರಗತಿ ನಗರ ಬಡಾವಣೆ | ೫೫ | ೩ | ೨ |
| ೬ | ಅಬ್ಬಕ್ಕ ನಗರ ಬಡಾವಣೆ | ೫೬ | ೨ | ೨ |
| ೭ | ಕಾರ್ನಾಡ ಸದಾಶಿವ ನಗರ | ೭೯ | ೧ | ೩ |
| ೮ | ಡಾ.ಶಿವರಾಮ ಕಾರಂತ ನಗರ | ೫೮ | – | – |
| ೯ | ಸೋಮನಾಥ ನಗರ | ೩೨೬ | ೩ | ೮ |
| ೧೦ | ಲಾಲ್‌ಬಹಾದ್ದೂರ್ ಶಾಸ್ತ್ರಿ ನಗರ | ೪೧ | ೧ | ೧ |
| ೧೧ | ಮಾರುತಿ ನಗರ | ೬೮ | ೨ | ೧ |
| | ಒಟ್ಟು | ೧೦೨೨ | ೧೮ | ೨೩ |

**ಆಧಾರ** : ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

## ನಗರ ಯೋಜನೆ ಇಲಾಖೆ, ಮಂಗಳೂರು.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ತಾಂತ್ರಿಕ ನೆರವು ಒದಗಿಸುವುದರ ಮೂಲಕ ಕ್ಷೇತ್ರಾಭಿವೃದ್ಧಿಕಾರ್ಯಗಳನ್ನು ಅನುಷ್ಠಾನಗೊಳಿಸುವುದು ನಗರ ಯೋಜನೆ ಇಲಾಖೆಯ ಧ್ಯೇಯವಾಗಿದೆ. ೧೯೦೩ರ ಮೈಸೂರು ನಗರಾಭಿವೃದ್ಧಿ ಮಂಡಳಿ ಅಧಿನಿಯಮವು ನಗರ ಯೋಜನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರವು ಸಿದ್ಧಪಡಿಸಿದ ಮೊಟ್ಟಮೊದಲ ಕಾಯ್ದೆಯಾಗಿತ್ತು. ನಗರ ಯೋಜನೆ ಇಲಾಖೆಯ ಪ್ರಾರಂಭದೊಂದಿಗೆ ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಸುಲಭ ಸಾಧ್ಯವಾಗಿದೆ. ಜೊತೆಗೆ ಗೃಹ ನಿರ್ಮಾಣ ಮಂಡಳಿ, ಕೈಗಾರಿಕೆ ಕ್ಷೇತ್ರಾಭಿವೃದ್ಧಿ ಮಂಡಳಿ, ನಿಯಂತ್ರಿತ ಮಾರುಕಟ್ಟೆ ಸಮಿತಿ, ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಾದ ತಾಂತ್ರಿಕ ನೆರವನ್ನು ಒದಗಿಸುತ್ತಿದೆ. ಕರ್ನಾಟಕ ಗ್ರಾಮಾಂತರ ಮತ್ತು ನಗರ ಯೋಜನೆ ಕಾಯ್ದೆ ೧೯೬೧ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೬೫ ಕಾಯ್ದೆಗಳು ೧೯೬೫ರಿಂದ ಜಾರಿಯಲ್ಲಿದ್ದು, ಈ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಕರ್ನಾಟಕದ ನಗರ/ಪಟ್ಟಣ ಪ್ರದೇಶಗಳ ಪ್ರಮುಖ ಗ್ರಾಮಗಳ ಹಾಗೂ ಪ್ರೇಕ್ಷಣೀಯ ಸ್ಥಳಗಳ ಕ್ರಮಬದ್ಧ ಹಾಗೂ ನಿಯಂತ್ರಿತ ಬೆಳವಣಿಗೆಗಾಗಿ ಅಭಿವೃದ್ಧಿ ನಕ್ಷೆ ಮತ್ತು ವರದಿಗಳನ್ನು ತಯಾರಿಸಿ, ಭೂ ಉಪಯೋಗವನ್ನು ನಿರ್ದಿಷ್ಟಪಡಿಸುವುದು ಇಲಾಖೆಯ ಮುಖ್ಯ ಕರ್ತವ್ಯವಾಗಿದೆ. ಯೋಜನಾ ಬದ್ಧವಲ್ಲದ ಅಭಿವೃದ್ಧಿಗಳನ್ನು ನಿಯಂತ್ರಿಸುವುದು, ಹಾಲಿ ಲಭ್ಯವಿರುವ ಸೌಕರ್ಯಗಳನ್ನು ಉತ್ತಮಪಡಿಸುವುದು, ಹೆಚ್ಚುವರಿ ಸೌಕರ್ಯಗಳನ್ನು ಒದಗಿಸುವುದು ಮತ್ತು ಒಟ್ಟಾರೆ ಜನತೆಯ ಜೀವನಾವಶ್ಯಕ ಸೌಲಭ್ಯಗಳ ಅಭಿವೃದ್ಧಿಪಡಿಸುವುದು ಇಲಾಖೆಯ ಇತರ ಯೋಜಿತ ಕಾರ್ಯಗಳಾಗಿವೆ. ದಕ್ಷಿಣ ಕನ್ನಡ

ಜಿಲ್ಲೆಗೆ ಪ್ರಥಮವಾಗಿ ಮಂಗಳೂರಿನಲ್ಲಿ ೧೯೬೯ರಲ್ಲಿ ನಗರ ಯೋಜನೆ ಇಲಾಖೆಯ ಕಚೇರಿಯು ಪ್ರಾರಂಭಗೊಂಡು ೧೯೭೬ರವರೆಗೆ ಕಾರ್ಯನಿರ್ವಹಿಸಿತು. ತದನಂತರ ಕಚೇರಿಯು ಬೀದರ್ ಜಿಲ್ಲೆಯ ಬಸವಕಲ್ಯಾಣಕ್ಕೆ ಸ್ಥಳಾಂತರಗೊಂಡು ಮತ್ತೆ ೧೯೮೮ರಲ್ಲಿ ಮಂಗಳೂರಿನಲ್ಲಿ ಕಾರ್ಯಾರಂಭ ಮಾಡಿದೆ. ಈ ಕಚೇರಿಯ ಕಾರ್ಯವ್ಯಾಪ್ತಿಯು ಸಂಪೂರ್ಣ ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಗೊಂಡಿದೆ.

**ಕಚೇರಿಯ ಕಾರ್ಯಚಟುವಟಿಕೆಗಳು**

೧. ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಿ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದ ನಿಯೋಜಿತ ಬೆಳವಣಿಗೆ ಪೂರಕವಾದ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು. ೨. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು. ೩. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ ೧೯೬೧ರಡಿಯಲ್ಲಿ ಸರ್ಕಾರದಿಂದ ಘೋಷಿಸಲ್ಪಟ್ಟ ನಗರ ಮತ್ತು ಪಟ್ಟಣಗಳಿಗೆ ಸ್ಥಳಾಭಿವೃದ್ಧಿ ಹಾಗೂ ವ್ಯಾಪರಾಭಿವೃದ್ಧಿ ಯೋಜನೆಯನ್ನು ತಯಾರಿಸುವುದು. ೪. ಪಟ್ಟಣ/ನಗರಗಳ ಪ್ರಮುಖ ವೃತ್ತ ಮತ್ತು ಕಾಡು ರಸ್ತೆಗಳಿಗೆ ಸಂಚಾರಿ ನಿರ್ವಹಣೆ ಯೋಜನೆಯನ್ನು ತಯಾರಿಸುವುದು. ೫. ಜಿಲ್ಲೆಯಾದ್ಯಂತ ಕೋರಿರುವ ಭೂ ಪರಿವರ್ತನಾ ಪ್ರಕರಣಗಳಲ್ಲಿ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡುವುದು. ೬. ಕೈಗಾರಿಕಾ ಏಕಗವಾಕ್ಷಿ ಸಭೆಯಲ್ಲಿ ಭಾಗವಹಿಸಿ ಜಿಲ್ಲೆಯಲ್ಲಿ ಕೈಗಾರಿಕಾ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳನ್ನು ಬೆಳೆಸುವ ಸಂಬಂಧ ಸಲಹೆ, ಸೂಚನೆ ಮತ್ತು ಅಭಿಪ್ರಾಯಗಳನ್ನು ಸೂಚಿಸುವುದು. ೭. ನಗರ ಮತ್ತು ಪಟ್ಟಣಗಳಲ್ಲಿ ತ್ಯಾಜ್ಯ ವಸ್ತು ವಿಲೇವಾರಿ, ಸಂಬಂಧದ ಯೋಜನೆಗಳನ್ನು ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಇಲಾಖೆಯ ನಿಯಮದಂತೆ ತಯಾರಿಸಿ ಕಾರ್ಯಗತಗೊಳಿಸುವಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯ ನೆರವು ನೀಡುವುದು. ೮. ಕೆರೆ ಸಂರಕ್ಷಣೆಗೆ ಅಗತ್ಯ ಯೋಜನೆಗಳನ್ನು ರೂಪಿಸುವುದು. ೯. ನಗರ ಹಾಗೂ ಪಟ್ಟಣಗಳ ಕಟ್ಟಡ ನಕ್ಷೆಗಳನ್ನು ವಲಯ ನಿಯಮಾವಳಿಯಂತೆ ರೂಪಿಸಿ, ತಾಂತ್ರಿಕ ಅಭಿಪ್ರಾಯ ನೀಡುವುದು. ೧೦. ವಸತಿ, ವಾಣಿಜ್ಯ ಹಾಗೂ ಕೈಗಾರಿಕಾ ವಿನ್ಯಾಸಗಳನ್ನು ರೂಪಿಸುವುದು.

ಜಿಲ್ಲೆಯಲ್ಲಿ ೧೯೭೦ರಿಂದ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನೆ ಅಧಿನಿಯಮ ಜಾರಿಯಲ್ಲಿದ್ದು ಅದರನ್ವಯ ಈಗಾಗಲೇ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಜಿಲ್ಲೆಯ ಎಲ್ಲ ನಗರ ಪಟ್ಟಣಗಳಲ್ಲಿ ಪ್ರಮಾಣಬದ್ಧ ಭೂ ಬಳಕೆ, ಸೂಕ್ಷ್ಮ ಸಂಪರ್ಕ ವ್ಯವಸ್ಥೆ, ಶಿಕ್ಷಣ, ಆರೋಗ್ಯ, ಮನರಂಜನೆ, ಅಗತ್ಯ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಒದಗಿಸಿದೆ. ಜನರ ಸಾಮಾಜಿಕ, ಆರ್ಥಿಕ ಸಮೃದ್ಧಿಗಾಗಿ ಶ್ರಮಿಸುತ್ತಿದೆ. ಗ್ರಾಮೀಣ ಪ್ರದೇಶಗಳನ್ನು ಸೌಂದರ್ಯ ಮತ್ತು ಚಟುವಟಿಕೆ ದೃಷ್ಟಿಯಿಂದ ಆಕರ್ಷಕಗೊಳಿಸುವ ಯೋಜನೆ ರೂಪಿಸಲಾಗಿದೆ. ೨. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜಮೀನಿನ ಮೌಲ್ಯದಲ್ಲಿನ ಹೆಚ್ಚಳದಿಂದಾಗಿ ಆಗುತ್ತಿರುವ ದುರುಪಯೋಗ, ಮತ್ತು ಅಕ್ರಮ ಬೆಳವಣಿಗೆಯನ್ನು ನಿಯಂತ್ರಿಸಲಾಗಿದೆ. ೩. ಜಿಲ್ಲೆಯ ಮಂಗಳೂರು ನಗರ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಳ್ಯ ಮತ್ತು ಮೂಡಬಿದ್ರೆ ಪಟ್ಟಣಗಳಿಗೆ ಅಭಿವೃದ್ಧಿ ನಕ್ಷೆ ತಯಾರಿಸಲಾಗಿದೆ. ೪. ಜಮೀನಿನ ಸಮತೋಲನ ಉಪಯೋಗಕ್ಕೆ ಲಭ್ಯವಿರುವ ಮನರಂಜನೆಯ ಸೌಕರ್ಯವನ್ನು ಕಾಪಾಡಿಕೊಂಡು ಅದನ್ನು ಉತ್ತಮಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ೫. ಉದ್ದೇಶಿತ ಜನಸಂಖ್ಯೆ ಹೆಚ್ಚಳದ ಮತ್ತು ಪರಿಸರದ ಆರೋಗ್ಯಕರ ಬೆಳವಣಿಗೆಯ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕೆ ಮತ್ತು ವಾಣಿಜ್ಯದ ಅಭಿವೃದ್ಧಿಗೆ ಸೂಕ್ತ ಸವಲತ್ತುಗಳನ್ನು ಕಲ್ಪಿಸಿ ಜನರ ಬದುಕನ್ನು ಉತ್ತಮಗೊಳಿಸಲು ಪ್ರಯತ್ನ ಮಾಡಲಾಗಿದೆ. ನಗರ ಯೋಜನೆ ಪ್ರಾಧಿಕಾರದ ಮೇಲ್ಕಂಡ ಕಾರ್ಯ ಚಟುವಟಿಕೆಗಳಿಂದ ಜಿಲ್ಲೆಯ ಜನರ ಆರ್ಥಿಕ, ಸಾಮಾಜಿಕ ಪಟ್ಟಣಗಳಲ್ಲಿ ಮಹತ್ತರ ಸುಧಾರಣೆಗಳಾಗಿವೆ. ಜೊತೆಗೆ ಪಟ್ಟಣಗಳ ಸ್ವರೂಪ, ಪ್ರಗತಿ ಉತ್ತಮಗೊಂಡಿದ್ದು, ಹೂಡಿಕೆದಾರರು ತಮ್ಮ ಬಂಡವಾಳವನ್ನು ಇಲ್ಲಿನ ಕೈಗಾರಿಕೆ, ವಾಣಿಜ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಲು ಮುಂದೆ ಬಂದಿದ್ದಾರೆ. ಇದರ ಪರಿಣಾಮವಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯು ಸಾಧ್ಯವಾಗಿದೆ.

**ನಗರ ಯೋಜನಾ ಇಲಾಖೆ, ಪುತ್ತೂರು.**

೧೯೯೯ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆಯನ್ವಯ ಪುತ್ತೂರು ಪಟ್ಟಣ, ಉಪ್ಪಿನಂಗಡಿ ಮತ್ತು ೧೯ ಕಂದಾಯ ಗ್ರಾಮಗಳನ್ನು ಒಳಗೊಂಡ ಪ್ರದೇಶವನ್ನು ಗುರುತಿಸಿ ಅದನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಅದರಂತೆ ೨೦೦೧ರಲ್ಲಿ ಪುತ್ತೂರಿನಲ್ಲಿ ನಗರ ಯೋಜನಾ ಪ್ರಾಧಿಕಾರವನ್ನು ರಚಿಸಿ, ಸ್ಥಳೀಯ ಕಚೇರಿಯನ್ನು ಪ್ರಾರಂಭಿಸಲಾಗಿದೆ. ಕಚೇರಿಯ ವ್ಯಾಪ್ತಿಯಲ್ಲಿ ಪುತ್ತೂರು ಪಟ್ಟಣ ಮತ್ತು ಸುತ್ತಲಿನ ೨೦ ಕಂದಾಯ ಗ್ರಾಮಗಳು ಸೇರಿವೆ. ಈ ಪ್ರದೇಶದ ಸಮಗ್ರ ಅಭಿವೃದ್ಧಿಯು ಈ ಕಚೇರಿಯ ಜವಾಬ್ದಾರಿಯಾಗಿದ್ದು, ಮಂಗಳೂರಿನ ಯೋಜನಾ ಇಲಾಖಾ ಕಚೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಪ್ರಾಧಿಕಾರವು ಈ ಪ್ರದೇಶದ ಬೆಳವಣಿಗೆ

ಹಲವಾರು ಪೂರಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ; ೧. ಕೆ.ಟಿ.ಸಿ.ಪಿ. ಕಾಯ್ದೆಯನ್ವಯ ಪಟ್ಟಣವು ವ್ಯವಸ್ಥಿತವಾಗಿ ಬೆಳೆಯುವಂತೆ ಮಾಸ್ಟರ್ ಪ್ಲಾನ್ ತಯಾರಿಸಿದೆ. ೨. ಪುನರ್ವಸತಿ, ಪುನರ್‌ನಿರ್ಮಾಣ ಹಾಗೂ ಸಂಚಾರ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ತಯಾರಿಸುತ್ತದೆ. ೩. ನಗರದ ಸೌಂದರ್ಯ ವೃದ್ಧಿಗೊಳಿಸಲು ಯೋಜನೆಗಳನ್ನು ರೂಪಿಸಿದೆ. ೪. ವ್ಯವಸಾಯದ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಗೊಳಿಸಲು ತಾಂತ್ರಿಕ ಅಭಿಪ್ರಾಯ ನೀಡುತ್ತದೆ. ೫. ವಸತಿ ಮತ್ತಿತರ ಪಟ್ಟಣಗಳಿಗೆ ಅನುಮೋದನೆ ಹಾಗೂ ತಾಂತ್ರಿಕ ಅಭಿಪ್ರಾಯ ನೀಡುತ್ತದೆ. ೧೯೯೮ರಿಂದ ಪುತ್ತೂರಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮವು ಜಾರಿಯಲ್ಲಿದ್ದು, ಅದರಂತೆ ಪುತ್ತೂರು ಪಟ್ಟಣಕ್ಕೆ ಸಮಗ್ರ ಅಭಿವೃದ್ಧಿ ಮಾಸ್ಟರ್ ಪ್ಲಾನ್ ತಯಾರಿಸಲಾಗಿದ್ದು, ಜನರ ಆರ್ಥಿಕ ಮಟ್ಟ ಸುಧಾರಣೆ ಮತ್ತು ಪಟ್ಟಣದ ಸ್ವರೂಪದಲ್ಲಿ ಆರೋಗ್ಯಕರ, ನಿಯಂತ್ರಿತ ಮತ್ತು ನಿಯೋಜಿತ ಬೆಳವಣಿಗೆ ಉಂಟಾಗುವಲ್ಲಿ ಪ್ರಾಧಿಕಾರವು ಮಹತ್ತರ ಪಾತ್ರ ವಹಿಸಿದೆ.

## ವಸತಿ ಯೋಜನೆ

ವ್ಯಾಪಕವಾದ ಕೈಗಾರಿಕೀಕರಣದಿಂದಾಗಿ ಗ್ರಾಮೀಣ ಪ್ರದೇಶಗಳಿಂದ ನಗರ/ಪಟ್ಟಣ ಪ್ರದೇಶಗಳಿಗೆ ಜನರ ವಲಸೆ ಕ್ರಮೇಣ ಹೆಚ್ಚುತ್ತದೆ. ಹೀಗಾಗಿ ನಗರ ಪ್ರದೇಶಗಳಲ್ಲಿ ಜನಸಂಖ್ಯೆಯು ಕ್ಷಿಪ್ರವಾಗಿ ಹೆಚ್ಚುತ್ತಿದ್ದು, ಜನರಿಗೆ ಮೂಲಭೂತ ಸೌಕರ್ಯಗಳನ್ನೊದಗಿಸುವುದು ಒಂದು ಸವಾಲಾಗಿದೆ. ವಿಶೇಷವಾಗಿ ವಸತಿ ಸೌಲಭ್ಯದ ಕೊರತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಅಭಿವೃದ್ಧಿ ಹೊಂದಿದ ನಿವೇಶನಗಳ ಅಲಭ್ಯತೆ, ಹೆಚ್ಚುತ್ತಿರುವ ಕಟ್ಟಡ ನಿರ್ಮಾಣ ವೆಚ್ಚಗಳಿಂದಾಗಿ ನಗರ ಪ್ರದೇಶಕ್ಕೆ ಜೀವನೋಪಾಯಕ್ಕಾಗಿ ವಲಸೆ ಬಂದ ಗ್ರಾಮೀಣ ಜನತೆಯ ವಸತಿ ಸಮಸ್ಯೆ ಉಲ್ಬಣಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯು ಕರಾವಳಿ ಪ್ರದೇಶವಾಗಿದ್ದು, ವಾಸಯೋಗ್ಯ ಪ್ರದೇಶಗಳ ಲಭ್ಯತೆಯಲ್ಲಿರುವ ಇತಿಮಿತಿಗಳಿಂದಾಗಿ ನಗರ ಪ್ರದೇಶದಲ್ಲಿ ವಸತಿ ಸೌಲಭ್ಯದ ಕೊರತೆ ತೀವ್ರವಾಗಿದೆ. ವಸತಿ ಸೌಲಭ್ಯ ಒದಗಿಸುವಲ್ಲಿ ಉದ್ಭವಿಸಬಹುದಾದ ವಿವಿಧ ರೀತಿಯ ಸಮಸ್ಯೆಗಳನ್ನರಿತ ಸರ್ಕಾರವೇ ಜಿಲ್ಲೆಯಲ್ಲಿ ಬೃಹತ್ ಗೃಹನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ಇದಕ್ಕೆ ಕೈಜೋಡಿಸಿರುವ ಸರ್ಕಾರೇತರ ಸಂಘಸಂಸ್ಥೆಗಳೂ ಸಹ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿವೆ. ಗೃಹನಿರ್ಮಾಣ ಸಹಕಾರ ಸಂಘಗಳು, ನಗರಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹಮಂಡಳಿ, ಮುಂತಾದ ಸಂಸ್ಥೆಗಳು ವಸತಿ ಸೌಲಭ್ಯದ ಕೊರತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ. ವಿವಿಧ ಯೋಜನೆಯಡಿ ನಿರ್ಮಿಸಲಾದ ಜನತಾ ಗೃಹಗಳು, ಹುಡ್ಕೋ ಯೋಜನೆಯ ಮನೆಗಳು ಹಾಗೂ ಕಡಿಮೆ ವೆಚ್ಚದ ಮನೆಗಳು, ಭಾಗ್ಯ ಮಂದಿರ ಯೋಜನೆಯಡಿ ನಿರ್ಮಾಣಗೊಂಡ ಮನೆಗಳು, ಇಂದಿರಾ ಆವಾಸ್ ಯೋಜನೆ ಮನೆಗಳು, ಅಂಬೇಡ್ಕರ್ ವಸತಿ ಯೋಜನೆ, ಆಶ್ರಯ ಯೋಜನೆಯಡಿ ನಿರ್ಮಾಣಗೊಂಡ ಮನೆಗಳು, ಮುಂತಾದ ಸರ್ಕಾರಿ ಪ್ರಾಯೋಜಿತ ಗೃಹನಿರ್ಮಾಣ ಚಟುವಟಿಕೆಗಳಿಂದ ಸ್ವಲ್ಪಮಟ್ಟಿಗೆ ಜಿಲ್ಲೆಯ ವಸತಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿದೆ. ಗೃಹನಿರ್ಮಾಣ ಯೋಜನೆಗಳಿಂದ ನಿರ್ಮಾಣಗೊಂಡ ಮನೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಮನೆಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಮೀಸಲಾಗಿವೆ. ಗ್ರಾಮಲೆಕ್ಕಿಗರಿಗಾಗಿ ಪೊಲೀಸ್ ಸಿಬ್ಬಂದಿಗಾಗಿ, ಶಿಕ್ಷಕರಿಗಾಗಿ, ಆಸ್ಪತ್ರೆ ಸಿಬ್ಬಂದಿಗಾಗಿ, ಕಾರ್ಖಾನೆಗಳ ಕಾರ್ಮಿಕರಿಗಾಗಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿ ಬಹುತೇಕ ವಸತಿ ಸಮಸ್ಯೆಯನ್ನು ನಿವಾರಿಸಲಾಗಿದೆ

## ಕರ್ನಾಟಕ ಗೃಹ ಮಂಡಳಿ

ಬೆಂಗಳೂರಿನಲ್ಲಿ ಕೇಂದ್ರಕಚೇರಿಯನ್ನು ಹೊಂದಿರುವ ಕರ್ನಾಟಕ ಗೃಹ ಮಂಡಳಿಯು ಜಿಲ್ಲೆಯಲ್ಲಿನ ವಸತಿ ಸಮಸ್ಯೆಗಳ ನಿವಾರಣೆಗೆ ಹಲವಾರು ಗೃಹ ನಿರ್ಮಾಣ ಯೋಜನೆಗಳನ್ನು ಹಮ್ಮಿಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಸತಿ ಸೌಲಭ್ಯ ವಂಚಿತರಿಗೆ ವಸತಿ ಒದಗಿಸುವ ಉದ್ದೇಶದಿಂದ ಮಂಗಳೂರಿನಲ್ಲಿ ಮಂಡಳಿಯು ಸಹಾಯಕ ಪ್ರಧಾನ ವ್ಯವಸ್ಥಾಪಕರ ಕಚೇರಿಯನ್ನು ಸ್ಥಾಪಿಸಿದೆ. ಈ ಕಚೇರಿಯು ಮೂರು ವಿಭಾಗಗಳನ್ನು ಹೊಂದಿದೆ. ಅವುಗಳೆಂದರೆ ೧. ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಭಾಗ, ೨. ಮಂಡಳಿಯ ಆಸ್ತಿಯನ್ನು ರಕ್ಷಿಸುವ ವಿಭಾಗ ೩. ಹಳೆ ಯೋಜನೆಗಳ ಉಸ್ತುವಾರಿ ವಿಭಾಗ ಈ ವಿಭಾಗಗಳು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ಗೃಹಮಂಡಳಿಯು ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಮನೆಗಳನ್ನು ಕಟ್ಟಿಸಲು ಕಾರ್ಯಯೋಜನೆಯನ್ನು ರೂಪಿಸಿದೆ. ಸರ್ಕಾರದ ಯೋಜನೆಗಳಾದ ಆಶ್ರಯ, ಭಾಗ್ಯಮಂದಿರ, ಅಂಬೇಡ್ಕರ್, ಗ್ರಾಮೀಣ ವಸತಿ ಯೋಜನೆಗಳಿಗೆ ಹುಡ್ಕೋ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆದು ಯೋಜನೆಗಳಲ್ಲಿ ತೊಡಗಿಸುತ್ತದೆ. ಈ ಎಲ್ಲಾ

ಯೋಜನೆಗಳಡಿಯಲ್ಲಿ ನಿರ್ಮಿಸಲಾಗುವ ಮನೆಗಳಲ್ಲಿ ಶೇ.೧೫ ಭಾಗವನ್ನು ಸರ್ಕಾರಿ ನೌಕರರಿಗೂ ಮತ್ತು ಶೇ ೧೮ ಭಾಗವನ್ನು ಪರಿಶಿಷ್ಟಜಾತಿ/ಪರಿಶಿಷ್ಟಪಂಗಡದವರಿಗೂ ಮೀಸಲಾಗಿರುತ್ತದೆ. ೨೦೦೧–೦೨ನೇ ಸಾಲಿನಿಂದ ನೋಡಲ್ ಏಜೆನ್ಸಿಯಾಗಿರುವ ಆರ್.ಜಿ.ಆರ್.ಹೆಚ್.ಸಿ.ಎಲ್ ಎಲ್ಲಾ ಸರ್ಕಾರಿ ಯೋಜನೆಗಳನ್ನು ನಿರ್ವಹಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಇವುಗಳಲ್ಲಿ ಇತ್ತೀಚೆಗೆ ೨೦೦೨–೦೩ನೇ ಸಾಲಿನಲ್ಲಿ ಪ್ರಾರಂಭಿಸಿದ ಮುಖ್ಯ ಮಂತ್ರಿಗಳ ಮಾದರಿ ಪಟ್ಟಣ ವಸತಿ ಕಾರ್ಯಕ್ರಮ ಮತ್ತು ೨೦೦ ವಸತಿ ಯೋಜನೆ ಎಂಬ ಕಾರ್ಯಕ್ರಮಗಳೂ ಸೇರಿವೆ. ಸ್ಥಳೀಯ ಸಂಸ್ಥೆಗಳ ಸಹಕಾರದಲ್ಲಿ ೧೦ ರಿಂದ ೨೦ ಸಾವಿರ ಜನಸಂಖ್ಯೆ ಹೊಂದಿರುವ ಹೋಬಳಿ ಕೇಂದ್ರ ಮತ್ತು ಇತರ ಪಟ್ಟಣ ಪ್ರದೇಶಗಳಲ್ಲಿ ವಸತಿ ಸೌಲಭ್ಯವನ್ನೊದಗಿಸಲು ಮುಖ್ಯಮಂತ್ರಿಯವರ ಮಾದರಿ ಪಟ್ಟಣ ವಸತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದ್ದು, ಡಾಂಬರು ರಸ್ತೆಗಳು, ನೀರು ಸರಬರಾಜು, ಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ ಸಾಲುಮರಗಳು, ಮಳೆನೀರು ಸಂಗ್ರಹಣೆ ಮೊದಲಾದ ನಾಗರಿಕ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಬಡಾವಣೆಗಳ ಶೇ ೫೦ ರ ಜಾಗದಲ್ಲಿ ಗಿಡಮರ ಬೆಳೆಸಲು ಯೋಜಿಸಿದ್ದು, ಹಾಲು ಮಾರಾಟಕೇಂದ್ರ ಹಾಗೂ ಅಂಗಡಿಗಳಿಗೂ ವ್ಯವಸ್ಥೆ ಕಲ್ಪಿಸಲಾಗಿದೆ. ಮಂಡಳಿಯು ೧೦೦ ವಸತಿ ಯೋಜನೆಯಲ್ಲಿ ಗೃಹ ನಿರ್ಮಾಣ ಮತ್ತು ವಾಸಯೋಗ್ಯ ನಿವೇಶನಗಳ ಅಭಿವೃದ್ಧಿ ಮಾಡಿದ್ದು, ೧೫ ಸಾವಿರ ನಿವೇಶನಗಳ ಅಭಿವೃದ್ಧಿಯನ್ನು ಮತ್ತು ೧೩,೫೦೦ ಮನೆಗಳ ನಿರ್ಮಾಣವನ್ನು ೮೫೦ ಕೋಟಿ ರೂ.ಗಳ ಹುಡ್ಕೋ ನೆರವಿನಿಂದ ಪ್ರಾರಂಭಿಸಿದೆ. ಮಂಡಳಿಯು ಎಲ್.ಐ.ಜಿ. (ಕಡಿಮೆ ಆದಾಯ ವರ್ಗ) ಎಂ.ಐ.ಜಿ. (ಮಧ್ಯಮ ಆದಾಯ ವರ್ಗ) ಹಾಗೂ ಎಚ್.ಐ.ಜಿ. (ಅಧಿಕ ಆದಾಯ ವರ್ಗ) ಎಂಬ ಮೂರು ಶ್ರೇಣಿಯ ಮನೆಗಳನ್ನು ನಿರ್ಮಿಸುತ್ತದೆ.

**ಕೋಷ್ಟಕ ೧೨.೪೯ : ೨೦೦೫ರವರೆಗೆ ಮಂಗಳೂರಿನಲ್ಲಿ ಮಂಡಳಿ ಅಭಿವೃದ್ಧಿಪಡಿಸಿದ ನಿವೇಶನಗಳ ವಿವರ**

| ಕ್ರ.ಸಂ. | ಸ್ಥಳ | ಎಲ್.ಐ.ಜಿ. | ಎಂ.ಐ.ಜಿ. | ಎಚ್.ಐ.ಜಿ. | ಒಟ್ಟು |
|---|---|---|---|---|---|
| ೧ | ಕಂಕನಾಡಿ | ೨೭ | ೨೯ | ೦೨ | ೫೮ |
| ೨ | ಕುಂಜತ್ತಬೈಲ್ | ೧೮ | ೧೧ | – | ೨೯ |
| ೩ | ಉಳ್ಳಾಲ ಸೋಮೇಶ್ವರ | ೦೮ | ೫೧ | ೧೭ | ೭೬ |
| ೪ | ತಿರುವೈಲ್ | ೨೮ | ೬೬ | – | ೯೪ |
| ೫ | ಪಿಲಿಕುಳ ಬಡಾವಣೆ | ೨೫ | ೪೦ | – | ೬೫ |
| ೬ | ಪದವು–ಮಂಗಳೂರು | ೧೩ | – | ೦೯ | ೨೨ |
| ೭ | ಕುಡುಪು–ಮಂಗಳೂರು | ೪೮ | ೧೧೪ | ೬೧ | ೨೨೩ |
| | ಒಟ್ಟು | ೧೬೭ | ೩೧೧ | ೮೯ | ೫೬೭ |

**ಕೋಷ್ಟಕ ೧೨.೫೦ : ೨೦೦೫ರಲ್ಲಿದ್ದಂತೆ ಮಂಗಳೂರಿನಲ್ಲಿ ಮಂಡಳಿ ನಿರ್ಮಿತ ಮನೆಗಳ ವಿವರ**

| ಕ್ರ.ಸಂ. | ಸ್ಥಳ | ಎಲ್.ಐ.ಜಿ. | ಎಂ.ಐ.ಜಿ. | ಎಚ್.ಐ.ಜಿ. | ಒಟ್ಟು |
|---|---|---|---|---|---|
| ೧ | ಕಂಕನಾಡಿ | ೭೨ | ೮೬ | – | ೧೫೮ |
| ೨ | ಪದವು ಶಕ್ತಿ ನಗರ | ೧೦ | ೨೫ | ೦೫ | ೪೦ |
| ೩ | ಕುಂಜತ್ತ ಬೈಲ್ | ೩೦ | ೪೦ | – | ೭೦ |
| | ಒಟ್ಟು | ೧೧೨ | ೧೫೧ | ೦೫ | ೨೬೮ |

ಈ ಬಡಾವಣೆಗಳಲ್ಲಿನ ಮನೆಗಳನ್ನು ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ನಿರ್ಮಿಸಲಾಗಿದೆ.

## ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ

ತೀವ್ರವಾದ ನಗರೀಕರಣ, ಕೈಗಾರಿಕೀಕರಣ ಹಾಗೂ ಗ್ರಾಮೀಣ ಪ್ರದೇಶದಿಂದ ನಗರ ಪಟ್ಟಣಗಳಿಗೆ ಜನರ ವಲಸೆ, ಇವುಗಳ ಪರಿಣಾಮವಾಗಿ ದೊಡ್ಡ ನಗರ ಹಾಗೂ ಪಟ್ಟಣಗಳಲ್ಲಿ ಜನಸಂಖ್ಯೆ ಕ್ಷಿಪ್ರವಾಗಿ ಹೆಚ್ಚುತ್ತಿದೆ. ಹೀಗೆ ನಗರಗಳಿಗೆ ವಲಸೆ ಬಂದವರಲ್ಲಿ ಆರ್ಥಿಕವಾಗಿ ಹಿಂದುಳಿದವರೇ

ಹೆಚ್ಚಾಗಿರುತ್ತಾರೆ. ವಸತಿ ಸೌಲಭ್ಯ ಕಲ್ಪಿಸಿಕೊಳ್ಳಲು ಅಶಕ್ತರಾಗಿರುವ ಇವರು ನಗರಗಳಲ್ಲಿ ನಿರ್ಜನ ಪ್ರದೇಶಗಳಾದ ಚರಂಡಿಗಳ ಅಕ್ಕಪಕ್ಕ, ರೈಲ್ವೆಹಳಿಗಳ ಬದಿಗಳಲ್ಲಿ, ಕೆಳಮಟ್ಟದ ಜೌಗುಪ್ರದೇಶಗಳಲ್ಲಿ ಗುಡಿಸಲು ನಿರ್ಮಿಸಿ ವಾಸಿಸುವುದನ್ನು ಕಾಣಬಹುದು. ಮೂಲಭೂತ ಸೌಕರ್ಯಗಳೇ ಇಲ್ಲದ ಇಂತಹ ಕೊಳಚೆ ಪ್ರದೇಶಗಳು ಇತ್ತೀಚೆಗೆ ನಗರಗಳಲ್ಲಿ ತೀವ್ರವಾಗಿ ಹೆಚ್ಚುತ್ತಿವೆ. ಇಂತಹ ಪ್ರದೇಶಗಳಲ್ಲಿನ ಅನಾರೋಗ್ಯಕರ ವಾತಾವರಣದಲ್ಲಿ ಬದುಕುವ ಜನರು ಅನೇಕ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಾರೆ, ಅಲ್ಲದೆ ಇಂತಹ ರೋಗಗಳು ಇಡೀ ನಗರಕ್ಕೆ ಹಬ್ಬುವ ಪ್ರಸಂಗಗಳೂ ಇವೆ. ಈ ಬಗ್ಗೆ ಚಿಂತನೆ ನಡೆಸಿದ ಸರ್ಕಾರವು ನಗರಗಳ ಪ್ರಗತಿಗೆ ಕಪ್ಪುಚುಕ್ಕೆಯಾಗಿರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ೧೯೭೩ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಅಭಿವೃದ್ಧಿ ಕಾಯ್ದೆಯನ್ನು ಜಾರಿಗೊಳಿಸಿತು. ಇದರನ್ವಯ ೧೯೭೫ರಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಕೇಂದ್ರ ಕಚೇರಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ೧೯೭೩ರ ಕಾಯ್ದೆಗೆ ೨೦೦೨ರಲ್ಲಿ ತಿದ್ದುಪಡಿ ತರಲಾಗಿದೆ. ರಾಜ್ಯಾದ್ಯಂತ ಎಲ್ಲ ನಗರ ಪ್ರದೇಶಗಳ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ತಾಂತ್ರಿಕ ನಿದೇಶಕರು ಉಸ್ತುವಾರಿಯ ಐದು ವಿಭಾಗೀಯ ಕಚೇರಿಗಳು ಹಾಗೂ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ೧೪ ಉಪವಿಭಾಗೀಯ ಕಚೇರಿಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮೈಸೂರು ವಿಭಾಗದಲ್ಲಿನ, ಹಾಸನ ಉಪವಿಭಾಗೀಯ ಕಚೇರಿಯು ಮಂಗಳೂರು ಹಾಗೂ ಉಡುಪಿ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲಾಯಾದ್ಯಂತ ಇರುವ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ಕೊಳಚೆ ಪ್ರದೇಶಾಭಿವೃದ್ಧಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿದೀಪ, ರಸ್ತೆ ಸೇತುವೆ, ಶೌಚಾಲಯ, ಚರಂಡಿ, ಮುಂತಾದವನ್ನು ಒದಗಿಸುವುದು, ಮಂಡಳಿಯ ಧ್ಯೇಯವಾಗಿದೆ. ಅಲ್ಲದೇ ಖಾಲಿ ಜಾಗ ಲಭ್ಯವಿರುವ ಕಡೆಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಹುಡ್ಕೋ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ಗಳಿಂದ ಪಡೆದ ಸಾಲ ಸೌಲಭ್ಯದಿಂದ ಮಂಡಳಿಯು ಸಾಲು ಮನೆಗಳು ಮತ್ತು ಮಹಡಿ ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸುತ್ತಿದೆ.

ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ, ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳಿಗೆ ಕೊಳಚೆ ನಿರ್ಮೂಲನೆ ಮತ್ತು ಕೊಳಚೆ ನಿವಾಸಿಗಳ ಕಲ್ಯಾಣಕ್ಕಾಗಿ ಅನುದಾನ ನೀಡುತ್ತದೆ. ಕೇಂದ್ರ ಪುರಸ್ಕೃತ "ವಾಲ್ಮೀಕಿ ಅಂಬೇಡ್ಕರ್ ಆವಾಸ್" (ವಾಂಬೇ) ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣದ ಜೊತೆಗೆ ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ಸಾಮೂಹಿಕ ಶೌಚಾಲಯ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ವಾಂಬೇ ಯೋಜನೆಯ ಹೊರತು ನಗರ/ಪಟ್ಟಣಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯವನ್ನು ಸ್ಥಳೀಯ ಜನಪ್ರತಿನಿಧಿಗಳ ಬೇಡಿಕೆಗೆ ಅನುಗುಣವಾಗಿ ನಿರ್ಮಿಸಲಾಗುತ್ತಿದೆ. ಮಂಡಳಿಯು ಗುರುತಿಸಿರುವ ೨೧ ಪ್ರಥಮ ದರ್ಜೆ ನಗರಗಳಲ್ಲೊಂದಾದ ಮಂಗಳೂರಿನಲ್ಲಿ ನಿರ್ಮಲ ಜ್ಯೋತಿ ಯೋಜನೆಯು ಅನುಷ್ಠಾನಗೊಂಡಿದ್ದು, ಕೊಳಚೆ ಪ್ರದೇಶಗಳ ಮೂಲಭೂತ ಸೌಕರ್ಯ ಅಭಿವೃದ್ಧಿ, ಕೊಳಚೆ ನಿವಾಸಿಗಳಿಗೆ ತರಬೇತಿ ಹಾಗೂ ಕೌಶಲ್ಯ ಹೆಚ್ಚಳ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಅಲ್ಲದೇ ಅಗತ್ಯವಿರುವ ಕಡೆ ಶೇ ೨೦ ರಾಜ್ಯ ಸರ್ಕಾರದ ಅನುದಾನ ಮತ್ತು ಶೇ ೮೦ ಹುಡ್ಕೋ ಸಾಲದ ನೆರವಿನೊಂದಿಗೆ ಮನೆಗಳನ್ನು ನಿರ್ಮಿಸಿ, ಕೊಳಚೆ ನಿವಾಸಿಗಳಿಗೆ ಹಂಚಲಾಗಿದ್ದು, ಫಲಾನುಭವಿಗಳು ಈ ಸಾಲವನ್ನು ಬಡ್ಡಿಯೊಂದಿಗೆ ೨೦ ವರ್ಷಗಳ ಅವಧಿಯಲ್ಲಿ ಮಾಸಿಕ ಕಂತಿನ ರೂಪದಲ್ಲಿ ಪಾವತಿ ಮಾಡಬೇಕಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಘೋಷಿತ ಕೊಳಚೆ ಪ್ರದೇಶಗಳ ವಿವರ ಕೆಳಗೆ ನೀಡಲಾಗಿದೆ.

**ಕೋಷ್ಟಕ ೧೨.೫೧ : ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುವಾರು ಕೊಳಚೆ ಪ್ರದೇಶದ ವಿವರಗಳು**

| ಕ್ರಮಸಂಖ್ಯೆ | ನಗರ/ ಪಟ್ಟಣ | ಕೊಳಚೆ ಪ್ರದೇಶಗಳು | ಗುಡಿಸಲುಗಳ ಸಂಖ್ಯೆ | ಜನಸಂಖ್ಯೆ |
|---|---|---|---|---|
| ೧ | ಮಂಗಳೂರು | ೧೩ | ೯೫೭ | ೪೯೪೮ |
| ೨ | ಸುರತ್ಕಲ್ | ೧ | ೩೭೯ | ೧೮೯೫ |
| ೩ | ಮುಲ್ಕಿ | ೧ | ೫೯೬ | ೨೯೮೦ |
| ೪ | ಉಳ್ಳಾಲ | ೧ | ೨೧೮ | ೧೦೯೦ |
| ೫ | ಮೂಡುಬಿದ್ರೆ | ೧೦ | ೮೭೫ | ೪೩೭೫ |

**ಆಧಾರ** : ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಬೆಂಗಳೂರು